ಕರ್ನಾಟಕ ವಿಧಾನಸಭೆ
ಬುಧವಾರ 29ನೇ ಮಾರ್ಚ್ 2006ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 9 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ
ಪೀಠವನ್ನು ಅಲಂಕರಿಸಿದ್ದರು.

1. ವಿತ್ತೀಯ ಕಾರ್ಯಕಲಾಪ

2006-07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆಗೆ ಸರ್ಕಾರದ ಉತ್ತರ.

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ಸದನದ ಎಲ್ಲ ಸದಸ್ಯರಿಗೆ ಈ ಯುಗಾದಿಯ ಸಂದರ್ಭದಲ್ಲಿ ಶುಭಾಶಯಗಳನ್ನು ನಾನು ಕೋರುತ್ತಿದ್ದೇನೆ. ಸಿಹಿ-ಕಹಿಗಳನ್ನು ಸಮಚಿತ್ತದಿಂದ ಸ್ವೀಕರಿಸಿ, ಬದುಕನ್ನು ಸವಿಯುವ ಹಳೆಯ ವರ್ಷದ ಕಹಿಯನ್ನು ಮರೆಸುವಂತೆ ಹೊಸ ವರ್ಷದಲ್ಲಿ ಸಿಹಿ ದಿನಗಳ ನಿರೀಕ್ಷೆಯಲ್ಲಿ ನಾವೆಲ್ಲಾ ಯುಗಾದಿಯನ್ನು ಆಚರಿಸೋಣವೆಂದು ಹೇಳಿ ನಾನು ಹಾರೈಸುತ್ತಿದ್ದೇನೆ. 2006-07ನೇ ಸಾಲಿನ ಮುಂಗಡ ಪತ್ರದ ಮೇಲೆ ಈ ಸದನದ ಗೌರವಾನ್ವಿತ ಸದಸ್ಯರುಗಳು ವ್ಯಾಪಕವಾಗಿ ಚರ್ಚಿಸಿದ್ದಾರೆ. ಚರ್ಚೆಯ ಕಾಲದಲ್ಲಿ ಮುಂಗಡ ಪತ್ರದ ಬಗ್ಗೆ ಟೀಕೆಗಳನ್ನು ಮಾಡಿದ್ದಾರೆ. ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಎರಡೂ ರೀತಿಯ ಅಭಿಪ್ರಾಯಗಳು ಸಹಜವಾಗಿ ಮೂಡಿ ಬಂದಿವೆ. ಈ ಚರ್ಚೆಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕರಾದಂಥ ಮಾನ್ಯ ಧರ್ಮಸಿಂಗ್‌ರವರು, ಮತ್ತು ಶ್ರೀಯುತರುಗಳಾದ ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು, ದೇಶಪಾಂಡೆಯವರು, ಜಯಪ್ರಕಾಶ್ ಹೆಗ್ಡೆಯವರು, ರಾಜೇಂದ್ರನ್‌ರವರು, ಮಲ್ಲಿಕಾರ್ಜುನ ಖರ್ಗೆಯವರು, ಶ್ರೀರಾಮರೆಡ್ಡಿಯವರು, ಎಂ.ಪಿ. ಪ್ರಕಾಶ್‌ರವರು, ಬಸವರಾಜ ರಾಯರೆಡ್ಡಿಯವರು, ರೇವಣ್ಣನವರು, ಸಿದ್ದರಾಮಯ್ಯನವರು ಹಾಗೂ ಇತರೆ ಅನೇಕ ಜನ ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮದೇ ಆದಂಥ ಸಲಹೆಗಳನ್ನು ನೀಡಿದ್ದಾರೆ. ಈ ಎರಡೂ ಅಭಿಪ್ರಾಯಗಳನ್ನು ನಾನು ಸಮಾಧಾನದಿಂದ, ಸಮಚಿತ್ತದಿಂದ, ಸದ್ಭಾವನೆಯಿಂದ ಸ್ವೀಕರಿಸಿದ್ದೇನೆಂದು ಈ ಮನೆಯಲ್ಲಿ ಹೇಳುವುದಕ್ಕೆ ಸಂತೋಷ ಪಡುತ್ತೇನೆ. 'ನಾವು ಎಳೆಯರು, ನಾವು ಗೆಳೆಯರು, ಹೃದಯ ಹೂವಿನ ಹಂದರ, ನಾಳೆ ನಾವೇ ನಾಡ ಹಿರಿಯರು, ನಮ್ಮ ಕನಸದೋ ಸುಂದರ, ಹಿಂದೂ, ಮುಸ್ಲಿಂ, ಕ್ರೈಸ್ತರೆಲ್ಲರಿಗೂ ಒಂದೇ ಭಾರತ ಮಂದಿರ.' ತಾರತಮ್ಯದಿಂದ ಕೂಡಿರುವ ಈ ಸಮಾಜಕ್ಕೆ ವಿಮೋಚನೆ ನೀಡುವಂಥ ನಿಟ್ಟಿನಲ್ಲಿ ನಾವು ಕಂಡಿರುವ ಕನಸಿನ ಪ್ರತಿರೂಪವೇ ನಾವಿಟ್ಟಿರುವ ಈ ದಿಟ್ಟ ಹೆಜ್ಜೆ. 'ಎಲ್ಲರೊಳಗೊಂದಾಗು ಮಂಕುತಿಮ್ಮ' ಎಂಬ ದಾರ್ಶನಿಕರ ಮಾತಿಗನುಗುಣವಾಗಿ ಸರ್ವರ ಕಷ್ಟ-ಸುಖಗಳನ್ನು ಸದಾಗ್ರಹದಿಂದ ಕಂಡು, ಸರ್ಕಾರದ ಇತಿಮಿತಿಯೊಳಗೆ . . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸಾರ್, ಬಡ್ಜೆಟ್ ಕವಿತೆಯಿಂದಲೇ ಪ್ರಾರಂಭವಾಯಿತು. ಅದರ ಬಡ್ಜೆಟ್ ಕೊನೆಯೂ ಕೂಡ ಕವಿತೆಯಿಂದಲೇ ಏನು? ಇವತ್ತು ಉತ್ತರವೂ ಕವಿತೆಯಿಂದಲೇ. ಏನು ಸನ್ಯಾಸಾಶ್ರಮಕ್ಕೆ ಹೋಗುವವರಿದ್ದೀರೇನು? ಹೇಗೆ? ಏಕೆಂದರೆ, ಇದಾದಮೇಲೆ ಕೊನೆಗೆ ಅದೇ ಉಳಿದಿದೆಯಲ್ಲ ಸಾರ್. ಬಾಲ್ಯಾವಸ್ಥೆ, ಆಮೇಲೆ ವಾನಪ್ರಸ್ಥಾಶ್ರಮ, ಆಮೇಲೆ ಸನ್ಯಾಸಾಶ್ರಮ. ಅದು ನಾಲ್ಕನೆಯದು. ಸನ್ಯಾಸಾಶ್ರಮಕ್ಕೆ ಹೋಗತಕ್ಕಂಥ ತಯಾರಿ ಈಗಲೇ ನೀವು ಮಾಡಿಕೊಂಡು ಕುಳಿತರೆ, ಜನರ ಗತಿ ಏನು? ನಿಮ್ಮನ್ನು ನಂಬಿಕೊಂಡು, ಉಪ ಮುಖ್ಯ ಮಂತ್ರಿಗಳನ್ನಾಗಿ ಮಾಡಿ ಇಡೀ ದೇಶದ ಖಜಾನೆ ನಿಮ್ಮ ಕೈಯಲ್ಲಿ ಕೊಟ್ಟ ಮೇಲೆ ಇಂಥವೆಲ್ಲ ಫಿಲಾಸಫಿಕಲ್. ಮಾತು ಹೊರಟರೆ ಖಂಡಿತವಾಗಿ ಇದು ಮುಂದೆ ಯಾವ ಕಡೆ ಹೋಗುತ್ತದೆಯೋ ಗೊತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಲ್ಲ ಸಾರ್, ಅವರು ಮಾನ್ಯ ವಾಜಪೇಯಿಯವರಿಂದ ಸ್ಫೂರ್ತಿ ಪಡೆದಿದ್ದಾರೆ. ರಾಜಕಾರಣಿಗಳು ಕವಿಯಾಗಬೇಕೆಂದು ಹೇಳಿ ಹೀಗೆ ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ರಾಜ್ಯದ ಜನತೆಗೆ ನಾನು ಬರೀ ರಾಜಕಾರಣಿಯಷ್ಟೇ ಅಲ್ಲ, ಹೋರಾಟಗಾರ ಅಷ್ಟೇ ಅಲ್ಲ, ಬರೀ ಕಿರುಚಾಡುವವನಷ್ಟೇ ಅಲ್ಲ, ನನಗೆ ಸಾಹಿತ್ಯವೂ ಗೊತ್ತಿದೆ ಎಂದು ಕರ್ನಾಟಕ ರಾಜ್ಯದ ಜನತೆಗೆ ತಿಳಿಯಲೆಂದು ಅವರು ಆ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಹೇಳುತ್ತಿದ್ದೆ. 'ಎಲ್ಲರೊಳ ಗೊಂದಾಗು ಮಂಕು ತಿಮ್ಮ' ಎಂಬ ದಾರ್ಶನಿಕರ ಮಾತಿದೆ, ಅದಕ್ಕನುಗುಣವಾಗಿ ಸರ್ವರ ಈ ಕಷ್ಟ-ಸುಖಗಳನ್ನು ಸದಾಗ್ರಹದಿಂದ ಕಂಡು ಸರ್ಕಾರದ ಇತಿಮಿತಿಯೊಳಗೆ, ಅದು ಬತ್ತಲಾರದ ಉತ್ಸಾಹ ಹಾಗೂ ಅದಕ್ಕೆ ಸರಿಸಾಟಿಯಾದ ಶ್ರದ್ಧೆಯೊಂದಿಗೆ ಈ ಮುಂಗಡ ಪತ್ರವನ್ನು ಇಡುವಂಥ ಪ್ರಯತ್ನವನ್ನು ಮಾಡಿದ್ದೇನೆ. ಮಾಡಬೇಕಾದಂಥ ಕೆಲಸ ಬಹಳಷ್ಟಿರುವುದು ನಿಜ. ಆದರೆ, ಸಿಕ್ಕ ಈ ಮೊದಲ ಅವಕಾಶದಲ್ಲಿ ನನ್ನ ಇತಿಮಿತಿಯಲ್ಲಿ ಆಯವ್ಯಯವನ್ನು ಮಂಡನೆ ಮಾಡುವ ಪ್ರಯತ್ನವನ್ನು ಮಾಡಿದ್ದೇನೆ. ಮಾನ್ಯ ಗಿರೀಶ್ ಕಾರ್ನಾಡ್‌ರವರು ಒಂದು ಮಾತು ಹೇಳುತ್ತಾರೆ. 'ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು, ಆದರೆ, ಕನಸಿಲ್ಲದ ದಾರಿಯಲ್ಲಿ ನಡೆಯುವುದಾದರೂ ಹೇಗೆ' ಎಂದು ಅವರು ಪ್ರಶ್ನೆ ಮಾಡಿದ್ದಾರೆ. ನಾವು ಕನಸನ್ನು ಹೊತ್ತೇ ಮುಂದೆ ಹೋಗಬೇಕಾಗಿದೆ. ಅದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ. ಕಠಿಣ ಪರಿಶ್ರಮದಿಂದ ಏನನ್ನೂ ಬೇಕಾದರೂ ಸಾಧಿಸಬಹುದು ಎನ್ನುವ ವಿಶ್ವಾಸವಿಟ್ಟಿರುವಂಥ ವ್ಯಕ್ತಿ ನಾನು. 'ನಡೆ ಮುಂದೆ ನಡೆ ಮುಂದೆ, ನುಗ್ಗಿ ನಡೆ ಮುಂದೆ, ಜಗ್ಗದೆಯೇ, ಕುಗ್ಗದೆಯೇ ಹಿಗ್ಗಿ ನಡೆ ಮುಂದೆ' ಇದು ಕವಿ ಕೆ.ವಿ. ಪುಟ್ಟಪ್ಪನವರು ಹೇಳಿದಂಥ ಮಾತು. ಬಹುಶಃ ಇಲ್ಲಿರುವಂಥ ಎಲ್ಲರಿಗೂ ಸಹ ಇದು ಅನ್ವಯವಾಗುತ್ತದೆಂದು ನಾನಾದರೂ ಭಾವಿಸಿದ್ದೇನೆ. ನಾನು ವಿನಮ್ರತೆಯಿಂದ ಒಂದು ಮಾತನ್ನು ಸದನದ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಾನೇನೂ ಆರ್ಥಿಕ ತಜ್ಞನಲ್ಲ, ಈ ಹಿಂದೆ ಆಡಳಿತ ನಡೆಸಿದಂಥ ಅನುಭವವೂ ನನಗೆ ಇಲ್ಲ. ನನ್ನ ಕುಟುಂಬದ ಹಿಂದೆ ಬಂಧು ಬಳಗದವರು ಯಾರೂ ರಾಜಕೀಯ ಕ್ಷೇತ್ರದಲ್ಲಿ ಬೆಳೆಯುವುದಕ್ಕೆ ನನಗೆ ಪ್ರೇರಣೆ ಕೊಡುವುದಕ್ಕೆ ಇರಲಿಲ್ಲ. ನಾನು ಬೆಳೆದಿದ್ದು ಸಂಘ ಪರವಾರದಲ್ಲಿ. ಇಲ್ಲಿ ನಿಂತು ನಿರ್ಭೀತಿಯಿಂದ ಮಾತನಾಡಿ ಈ ಸ್ಥಾನದಲ್ಲಿ ನಿಲ್ಲುವುದಕ್ಕೆ ಕಾರಣ ಆ ಸಂಘ ಪರಿವಾರದಲ್ಲಿ ಬೆಳೆದ ಪರಿಣಾಮವಾಗಿದೆ. ಇವತ್ತು ಸ್ವಲ್ಪ ಪ್ರಾಮಾಣೀಕವಾಗಿ ಈ ನಾಡಿನ ಜನರ ಬಗ್ಗೆ ಚಿಂತನೆ ಮಾಡುವಂಥ ಶಕ್ತಿಯನ್ನು, ಆತ್ಮಸ್ಥೈರ್ಯವನ್ನು

ಆ ಸಂಘ ಪರಿವಾರ ನನಗೆ ತಂದು ಕೊಟ್ಟಿದೆ. ಹೀಗಾಗಿ ನಾನು ಇಲ್ಲಿ ನಿಂತು ಮಾತನಾಡುತ್ತಿದ್ದೇನೆಂದು ನಿರ್ಭೀತಿಯಿಂದ ನಾನು ಈ ಮನೆಗೆ ಹೇಳುವುದಕ್ಕೆ ಇಚ್ಚಿಸುತ್ತೇನೆ. ನನಗೆ ತಿಳಿದ ಹಾಗೆ ಬಜೆಟ್, ಎನ್ನುವುದು ಆರ್ಥಿಕ ಹಾಗೂ ಸಾಮಾಜಿಕ ನ್ಯಾಯ ಒದಗಿಸಲು ಒಂದು ವಿಧಾನ. ಪ್ರಜಾತಂತ್ರ ಗಣರಾಜ್ಯವಾಗುವ ಸಮಯದಲ್ಲಿ ಸಂವಿಧಾನ ಶಿಲ್ಪಿ ಡಾ: ಬಾಬ ಸಾಹೇಬ್ ಅಂಬೇಡ್ಕರ್‌ರವರು ಹೇಳಿದ ಮಾತು ನನಗೆ ಜ್ಞಾಪಕಕ್ಕೆ ಬರುತ್ತಿದೆ. ಅವರು ಹೇಳಿದರು, January on 26th of Jaining 1950 we are going to enter into a life of contradictions. In politics, we will have equality. In social and economic life, we will have inequality. ನಮ್ಮ ದೇಶದಲ್ಲಿ ರಾಜಕೀಯ ಸಮಾನತೆ ಇದೆ, ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆ ಇವತ್ತಿಗೂ ಕೂಡ ಉಳಿದುಕೊಂಡು ಬಂದಿದೆ. ಈ ಅಸಮಾನತೆಯನ್ನು ಹಾಗೂ ಬಡವರಿಗೆ , ಹಿಂದುಳಿದ ವರ್ಗದವರಿಗೆ, ಅಲ್ಪ ಸಂಖ್ಯಾತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ, ಮಹಿಳೆಯರಿಗೆ, ಈಗ ಆಗಿರುವಂಥ ಅನ್ಯಾಯವನ್ನು ಹೋಗಲಾಡಿಸುವ ದಿಕ್ಕಿನಲ್ಲಿ ಕೆಲವು ಕಾರ್ಯಕ್ರಮಗಳನ್ನು ಬಜೆಟ್ ಮೂಲಕ ನಾನು ಮಂಡಿಸುವಂಥ ಪ್ರಯತ್ನ ಮಾಡಿದ್ದೇನೆ. ಈ ನಾಡಿನ ಜನ ಈ ಸಾರಿ ಈ ಆಯವ್ಯಯದಲ್ಲಿನ ಅಂಶಗಳನ್ನು ಗುರುತಿಸಿದ್ದಾರೆ, ಸ್ವಾಗತಿಸಿದ್ದಾರೆ. ಮಾಧ್ಯಮಗಳೂ ಕೂಡ ವಿಶೇಷವಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಮಾಧ್ಯಮದವರಿಗೆ ಹೃದಯಪೂರ್ವಕವಾದಂಥ ಅಭಿನಂದನೆಯನ್ನು ತಿಳಿಸುವುದಕ್ಕೆ ಇಚ್ಚಿಸುತ್ತೇನೆ. ಕಾರಣ ಇಷ್ಟೇ. ಎಲ್ಲೋ ಹಳ್ಳಿಯಲ್ಲಿ ಸಂಕಷ್ಟದಲ್ಲಿ ಸಿಕ್ಕಿ ನರಳತಕ್ಕಂಥ ಸಾಮಾನ್ಯ ವ್ಯಕ್ತಿಗೆ ಈ ಸುದ್ದಿಗಳು ತಲುಪಬೇಕು. ನಾನು ಹೆಮ್ಮೆಯಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಸ್ವಾತಂತ್ರ್ಯದ ನಂತರ ಕರ್ನಾಟಕ ರಾಜ್ಯದಲ್ಲಿ ಕಳೆದ ಮೂರು ದಶಕಗಳಿಂದ ಅನೇಕ ಜ್ವಲಂತ ಸಮಸ್ಯೆಗಳ ಮಧ್ಯೆ ನಾನು ಹೋರಾಟ ಮಾಡಿದಂಥ ಕಾಲದಲ್ಲಿ ಅನೇಕ ರೀತಿಯ ಭಾವನೆಗಳು ನನ್ನ ಮನಸ್ಸಿನಲ್ಲಿ ಬರುತ್ತಿತ್ತು. ಈ ನಾಡಿನಲ್ಲಿ ಮತದಾರ ಮಾಲೀಕ. ಅವನ ಆಶೀರ್ವಾದದಿಂದ ನಾವು ಇಲ್ಲಿ ಬಂದು ಕುಳಿತಿದ್ದೇವೆ. ಆ ಮಾಲೀಕನ್ನು ಮರೆತರೆ ತಪ್ಪಾದೀತು, ಆ ದೃಷ್ಟಿಯಿಂದ ಮೊದಲಬಾರಿಗೆ ಯಾರು ಬಡತನ ಬೇಗೆಯಿಂದ ನರಳುತ್ತಿದ್ದಾರೆ, ಬಿಲೋ ದಿ ಪಾವರ್ಟಿ ಲೈನ್ ಕೆಳಗಡೆ ಯಾರು ಇದ್ದಾರೆ. ಅವರಿಗೆ ಕೆಲವು ಸವಲತ್ತುಗಳನ್ನು ಒದಗಿಸುವ ಕಡೆಗೆ ನಾನು ವಿಶೇಷವಾದ ಗಮನವನ್ನು ಕೊಟ್ಟಿದ್ದೇನೆ. ನಮ್ಮ ಹಿರಿಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಮಾತಿನಂತೆ, ಆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹ ಇವತ್ತು ನೆಮ್ಮದಿಯಿಂದ, ಗೌರವದಿಂದ, ಸ್ವಾಭಿಮಾನದಿಂದ ಬದುಕಿ ಬಾಳುವಂಥ ವಾತಾವರಣವನ್ನು ನಾವು ನಿರ್ಮಾಣ ಮಾಡಲಿಕ್ಕೆ ಆಗಿಲ್ಲ. ಆದರೆ ಆ ದಿಕ್ಕಿನಲ್ಲಿ ಇದುವರೆವಿಗೂ ಅವರ ಮೂಗಿಗೆ ತುಪ್ಪ ಹಚ್ಚುವ ಕೆಲಸ ಆಗಿರಬಹುದು. ಆದರೆ ಅತ್ಯಂತ ಪ್ರಾಮಾಣಿಕವಾಗಿ ಆ ಸಮೂಹಕ್ಕೆ ನ್ಯಾಯ ಒದಗಿಸಿ ಕೊಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಆದರೆ ಸಮಾಧಾನ ಇಲ್ಲ. ನಮ್ಮ ರೈತ, ನಮ್ಮ ಕೃಷಿ ಕಾರ್ಮಿಕ, ನಮ್ಮ ಮಹಿಳೆಯರು, ನಮ್ಮ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರಿಗೆ ಇನ್ನೂ ಹೆಚ್ಚು ಹೆಚ್ಚು ಅನುಕೂಲಗಳು ಆಗಬೇಕು ಎಂಬ ಹೆಬ್ಬಯಕೆಯನ್ನು ಹೊಂದಿದಂಥ ವ್ಯಕ್ತಿ ನಾನು. ಆದರೆ ಬರುವಂಥ ದಿವಸಗಳಲ್ಲಿ ನಿಮ್ಮೆಲ್ಲರ

ಸಹಕಾರದಿಂದ ಆ ದಿಕ್ಕಿನಲ್ಲಿ ವಿಶೇಷವಾದಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವಂಥ ಒಂದು ಭರವಸೆಯ ಮಾತನ್ನು ಈ ಸಂದರ್ಭದಲ್ಲಿ ನಾನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ಅಭಿವೃದ್ಧಿ ರಂಗದ ಸರ್ಕಾರದ ಮೊಟ್ಟಮೊದಲನೆ ಮುಂಗಡ ಪತ್ರ ಜನರಲ್ಲಿ ಒಂದು ಹೊಸ ಭರವಸೆಯನ್ನು ಮೂಡಿಸಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರ ನಿರೀಕ್ಷೆಗೆ ಸ್ಪಂದಿಸುವಂಥ ಹೊಣೆಗಾರಿಕೆಯನ್ನು ನಾವು ಸಮರ್ಥವಾಗಿ ನಿರ್ವಹಿಸುತ್ತೇವೆಂದು ಈ ಸಂದರ್ಭದಲ್ಲಿ ನಾನು ಈ ನಾಡಿನ ಜನತೆಗೆ ನಿಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನೀಡಿದಂಥ ಕಾರ್ಯಕ್ರಮಗಳಿಗಿಂತ ಇನ್ನು ಹೆಚ್ಚು ಕಾರ್ಯಕ್ರಮಗಳನ್ನು ನೀಡುವುದು ಅಗತ್ಯವಿದೆ ಎನ್ನುವಂಥ ಅರಿವು ಸಹ ನನಗಿದೆ. ನಮ್ಮ ಸರ್ಕಾರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸಕಾರಗೊಳಿಸುವುದರ ಜೊತೆಗೆ ನಾಡಿನ ರೈತರು, ಗ್ರಾಮೀಣ ಜನರು, ಪರಿಶಿಷ್ಟರು, ಹಿಂದುಳಿದ ವರ್ಗದವರು, ಅಲ್ಪ ಸಂಖ್ಯಾತರು, ಮಹಿಳೆಯರು, ಯುವ ಜನರು, ಕುಶಲ ಕರ್ಮಿಗಳು, ಹೀಗೆ ಎಲ್ಲಾ ವರ್ಗದ ಮತ್ತು ಎಲ್ಲಾ ಸ್ತರದ ಜನರ ಆಶಯಗಳಿಗೆ ಸ್ಪಂದಿಸುವಂಥ ಬದ್ಧತೆಯನ್ನು ನಾವು ಹೊಂದಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಿಶೇಷವಾಗಿ, ರೈತರು, ಮಹಿಳೆಯರು, ಪರಿಶಿಷ್ಟ ಜನಾಂಗದವರು, ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ವಿಶೇಷವಾದಂಥ ಸವಲತ್ತುಗಳನ್ನು ಒದಗಿಸಿಕೊಡುವಂಥ ಒಂದು ಪ್ರಾಮಾಣಿಕ ಪ್ರಯತ್ನ ಇಲ್ಲಿ ಆಗಿದೆ. ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಅಂಕಿಅಂಶಗಳ ಮೂಲಕ ಇಲ್ಲಿ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ತಾವು ಪ್ರಶ್ನೆ ಕೇಳಿದಾಗ ನಾನು ಉತ್ತರ ಕೊಡುವುದಕ್ಕೂ ಪ್ರಯತ್ನ ಮಾಡುತ್ತೇನೆ. ಮುಂಗಡ ಪತ್ರದಲ್ಲಿ ಘೋಷಿಸಿರುವಂಥ ಪ್ರತಿಯೊಂದು ಯೋಜನೆ ಹಾಗೂ ಕಾರ್ಯಕ್ರಮಕ್ಕೆ ಸಾಕಷ್ಟು ಹಣಕಾಸಿನ ಬೆಂಬಲವನ್ನು ಒದಗಿಸಿದ್ದೇನೆ. ಪ್ರಸ್ತುತ ಮುಂಗಡ ಪತ್ರದಲ್ಲಿ ಎಲ್ಲಾ ಇಲಾಖೆಗಳ ಆಯವ್ಯಯದಲ್ಲಿ ಶೇಕಡಾ 12 ರಿಂದ 300ರವರೆಗೆ ಹೆಚ್ಚಳ ಆಗಿದೆ ಎನ್ನುವಂಥ ಮಾತನ್ನು ಇಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದಕ್ಕೆ ಬೇಕಾದಂಥ ವಿವರವೂ ಅಲ್ಲಿ ಇದೆ, ನಾನು ಬೇಕಾದರೆ ಒದಗಿಸಿಕೊಡುತ್ತೇನೆ. ಹಣಕಾಸಿನ ನೆರವು ಇಲ್ಲದೇ ಯಾವುದೇ ಯೋಜನೆ ಅಥವಾ ವಾಗ್ದಾನವನ್ನು ನಾನು ನೀಡಿರುವುದಿಲ್ಲ. ಅಲ್ಪ ಸ್ವಲ್ಪ ಕಡಿಮೆಯಾಗಿದ್ದರೆ ಈ ವರ್ಷ ಬರುವಂಥ ಹೆಚ್ಚಿನ ಹಣದಲ್ಲಿ ಅದನ್ನು ತುಂಬಿ ಕೊಟ್ಟು ಸರಿಪಡಿಸತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನೂ ನಾನು ಮಾಡುತ್ತೇನೆ ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಧರ್ಮಸಿಂಗ್‌ರವರು ಮಾತನಾಡಿದಂಥ ಕಾಲದಲ್ಲಿ, ನಾವು ಹೈಕೋರ್ಟ್ ಪೀಠದ ಬಗ್ಗೆ ಮರೆತುಬಿಟ್ಟಿರಿ ಎಂದು ಅವರು ಹೇಳಿದರು. ಮತ್ತೆ ಅಲ್ಲಿ ಸತ್ಯಾಗ್ರಹ ಮಾಡುವಂಥ ಹಿರಿಯ ವಕೀಲರೂ ಸಹ ಹೇಳಿದ್ದಾರೆ. ಈ ಬಗ್ಗೆ ಹಣಕಾಸಿನ ನೆರವಿಲ್ಲವೆಂದು, ನಾನು ಹೇಳುತ್ತೇನೆ, ಈ ಬಜೆಟ್‌ನಲ್ಲಿ ಈಗ ನಾನು ಘೋಷಣೆ ಮಾಡುತ್ತಿಲ್ಲ, 20 ಕೋಟಿ ರೂ. ಯನ್ನು ಹೈಕೋರ್ಟು ಪೀಠಕ್ಕಾಗಿ ತೆಗಿದಿಟ್ಟಿದ್ದೇನೆ, ಹೆಚ್ಚಿನ ಅನುದಾನದ ಅಗತ್ಯ ಬಂದಾಗ ಬಿಡುಗಡೆ ಮಾಡಿ ಆ ಕಾರ್ಯ ಪೂರ್ಣ ಮಾಡುವುದಕ್ಕೆ ಈ ಸರ್ಕಾರ ಕಟಿಬದ್ಧವಾಗಿದೆ ಎನ್ನುವಂಥ ಭರವಸೆಯನ್ನು ಸತ್ಯಾಗ್ರಹ ಮಾಡುತ್ತಿರುವಂಥ, ಚಳುವಳಿ ಮಾಡುತ್ತಿರುವಂಥ ಜನಗಳಿಗೆ ತಿಳಿಸುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಈಗಲಾದರೂ ಬನ್ನಿ ನಮ್ಮ ಜೊತೆ ಮಾತನಾಡಿ, ಯಾವ ರೀತಿ ಇದಕ್ಕೆ ಟೂಥರ್ಡ್ ಗ್ರಾಂಟ್ಸ್‌ನ್ನು ಇದರಲ್ಲಿ ಇಟ್ಟಿದ್ದೇನೆ. ಇನ್ನೂ ಹೆಚ್ಚಿನ ಅನುದಾನ ಕೊಡುತ್ತೇನೆ. ಅಷ್ಟೇ

ಅಲ್ಲ, ಎಷ್ಟು ವೇಗದಲ್ಲಿ ಆ ಕೆಲಸ ಪೂರ್ಣವಾಗಬೇಕೆಂದು ಬಹಳ ವರ್ಷಗಳು ಹೋರಾಟ ಮಾಡಿದಂಥ ಆ ಭಾಗದ ಜನರಿಗೆ ಏನು ಇದೆಯೋ ಅದನ್ನು ಸರಿಪಡಿಸುವುದಕ್ಕೆ ನಮ್ಮ ಸರ್ಕಾರ ಕಟಿಬದ್ಧವಾಗಿದೆ, ರಾಜಕೀಯ ಇಚ್ಛಾಶಕ್ತಿ ಇದೆ, ಅವರು ಬಂದು ನಮ್ಮ ಜೊತೆ ಮಾತನಾಡಬೇಕೆಂದು ನಾನು ಈ ಸಂದರ್ಭದಲ್ಲಿ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಬಹಳಷ್ಟು ಇಲ್ಲಿ ಚರ್ಚೆಯಾಗಿದೆ, ಡಾ: ನಂಜುಂಡಪ್ಪನವರ ವರದಿ ಜಾರಿಯ ಬಗ್ಗೆ ಪ್ರಸ್ತಾಪವಾಗಿಲ್ಲವೆಂದು ಹೇಳಿದ್ದಾರೆ. ಈ ಮಾತು ಸರಿಯಲ್ಲವೆಂದು ನಾನು ಹೇಳಲಿಕ್ಕೆ ಇಚ್ಚಿಸುತ್ತೇನೆ. ಡಾ: ನಂಜುಂಡಸ್ವಾಮಿ ವರದಿ ಆಧರಿಸಿ ವಿವಿಧ ಇಲಾಖೆಗಳಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿದ್ದೇವೆ. ಇದಕ್ಕಾಗಿ ನಾನು ಒಂದು ಪಟ್ಟಿಯನ್ನು ತಮಗೆ ಕೊಡುತ್ತೇನೆ. ಮೊದಲಬಾರಿಗೆ ಸುಮಾರು 1500 ಕೋಟಿ ರೂಪಾಯಿನಷ್ಟು ಹಣವನ್ನು ನಾನು ಹಂಚಿಕೆ ಮಾಡಿದ್ದೇನೆ. ಉದಾಹರಣೆಗೆ ಈ 39 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುತ್ತೇವೆಂದು ಹೇಳಿದ್ದೇವೆ, ಇವುಗಳಲ್ಲಿ ಬಹುತೇಕ ಯೋಜನೆಗಳು ಕೃಷ್ಣಾಕೊಳ್ಳದಲ್ಲಿ ಅನುಷ್ಠಾನಗೊಂಡಿರುವಂಥ ಯೋಜನೆಗಳಾಗಿವೆ. 104 ಸರ್ಕಾರಿ ಐ.ಟಿ.ಐ ಗಳನ್ನು ಆಧುನೀಕರಣ, ಇವೆಲ್ಲವು ಬಹುತೇಕ ಹಿಂದುಳಿದ ಪ್ರದೇಶಗಳ ಸಂಸ್ಥೆಗಳಿಗೆ ನಾವು ಮೀಸಲಿಟ್ಟಿದ್ದೇವೆ. 5 ಹೊಸ ಐ.ಟಿ.ಐ ಗಳು ಹಾಗೂ 32 ಹೊಸ ಶಾಖೆಗಳ ಸ್ಥಾಪನೆಗೆ ನಿರ್ಧಾರ, ಏನಿದೆ ಹೆಚ್ಚು ಸಂಸ್ಥೆಗಳನ್ನೂ ಡಾ: ನಂಜುಂಡಪ್ಪನವರ ವರದಿಯನ್ವಯ ಗುರುತಿಸಲಾಗಿರುವಂಥ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿಯೇ ನಾವು ಪ್ರಾರಂಭ ಮಾಡುತ್ತಿದ್ದೇವೆ. 110 ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದ್ದೇವೆ. ಇವುಗಳಲ್ಲಿ ಹೆಚ್ಚಿನ ಸಂಖ್ಯೆ: ಹಾಸ್ಟೆಲ್‌ಗಳು ಹಿಂದುಳಿದ ತಾಲ್ಲೂಕುಗಳಲ್ಲಿಯೇ ನಾವು ತೆಗೆಯುತ್ತೇವೆ ಎನ್ನತಕ್ಕಂಥ ಭರವಸೆಯನ್ನು ನಾನು ಈ ಮನೆಗೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಮೊದಲ ಬಾರಿಗೆ ಯಾವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಆ ಭಾಗದ ಹಿಂದುಳಿದ, ಅಲ್ಪ ಸಂಖ್ಯಾತ ಪರಿಶಿಷ್ಟಜಾತಿ ಪರಿಶಿಷ್ಟವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಶಿಕ್ಷಣಕ್ಕೆ ಬಹಳ ದೊಡ್ಡ ಒಂದು ಕೊಡುಗೆಯನ್ನು ಕೊಟ್ಟಿದೆ ಎಂದು ಈ ನಾಡಿನ ಜನರಲ್ಲಿ ಏನು ಭಾವನೆ ಮೂಡಿದೆ, ಬಹುಶಃ ನಾವು ಏನು ಬೇಕಾದರೂ ಕೊಡಬಹುದು, ಒಳ್ಳೆಯ ಶಿಕ್ಷಣವನ್ನು ಕೊಡುವುದು ಅಗತ್ಯವಿದೆ, ಎನ್ನುವಂಥ ಹಿನ್ನೆಲೆಯೊಂದಿಗೆ ಬಹುಶಃ ಮೊದಲ ಬಾರಿಗೆ 50 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಈ ವರ್ಷ ನಾವು ಪ್ರಾರಂಭ ಮಾಡುತ್ತಿದ್ದೇವೆ. ಈ ಪೈಕಿ 39 ಶಾಲೆಗಳನ್ನು ಡಾ: ಎಂ. ನಂಜುಂಡಪ್ಪನವರ ವರದಿಯಲ್ಲಿ ಸೂಚಿಸಿದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಮತ್ತೆ ಈವರೆಗೆ ಯಾವುದೇ ವಸತಿ ಶಾಲೆ ಇಲ್ಲದ ವಿಧಾನ ಸಭಾ ಕ್ಷೇತ್ರಗಳಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ, ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆ ದಿಕ್ಕಿನಲ್ಲಿ ದಾಪಗಾಲು ಹಾಕುತ್ತೇವೆ ಎನ್ನುವ ಭರವಸೆಯನ್ನು ಈ ಮನೆಯಲ್ಲಿ ನಾನು ಕೊಡುತ್ತೇನೆ. ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳು ಬೇಕೆಂದು ಕೂಗು ಬಂದಾಗ. ಇದರಲ್ಲಿ ಉತ್ತರ ಕರ್ನಾಟಕದಲ್ಲಿ ಬೆಳಗಾವಿ, ರಾಯಚೂರು, ಧಾರವಾಡ, ಗದಗ್, ಹಾವೇರಿ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಯ ಕುರುಗೋಡಿನಲ್ಲಿ ಪ್ರಾರಂಭವಾಗಿವೆ. ಡಾ: ನಂಜುಂಡಪ್ಪನವರ ವರದಿಯಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿರುವಂಥ ಕನಕಪುರದಲ್ಲಿ ಸಹ ನಾವು ಇದನ್ನು ಪ್ರಾರಂಭ ಮಾಡುತ್ತೇವೆ. ವಿಜ್ಞಾನ ವಿಭಾಗಗಳು ಇಲ್ಲದೇ ಇರತಕ್ಕಂಥ 17 ಸರ್ಕಾರಿ ಕಾಲೇಜುಗಳಲ್ಲಿ ಹೊಸದಾಗಿ ಆ ಭಾಗದಲ್ಲಿ ವಿಜ್ಞಾನ ವಿಭಾಗಗಳನ್ನು

ತೆಗೆಯುತ್ತಿದ್ದೇವೆ. ಉತ್ತರ ಕರ್ನಾಟಕದಲ್ಲಿ ಹೈನುಗಾರಿಕೆ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಲು ಜಿಲ್ಲಾ ಹಾಲು ಉತ್ಪಾದನಾ ಸಂಘಗಳನ್ನು ಸುಧಾರಣೆ ಮಾಡುವುದಕ್ಕೋಸ್ಕರ 11 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ. ಹೀಗೆ ಅನೇಕ ಹಿಂದುಳಿದ ವರ್ಗಗಳ ಜನರಿಗೆ ಆ ಯೋಜನೆಗಳನ್ನು ತರತಕ್ಕಂಥ ಪ್ರಯತ್ನವನ್ನು ಮಾಡಿದ್ದೇನೆ. ಮತ್ತೆ ಆರೋಗ್ಯದ ಬಗ್ಗೆ ನಾವು ಬಹಳಷ್ಟು ಸಲಹೆಗಳು ಮತ್ತು ಮಾತುಗಳನ್ನು ಹೇಳಿದ್ದೇವೆ. ಲೋಕಾಯುಕ್ತರು ಧಾಳಿ ಮಾಡಿರತಕ್ಕಂಥಾದ್ದನ್ನು ನಾವು ನೋಡಿದಾಗ, ನಮ್ಮ ಆರೋಗ್ಯ ಇಲಾಖೆಯ ಸಚಿವರು ಮತ್ತು ಅಧಿಕಾರಿಗಳು ಇತ್ತ ಕಡೆ ಗಮನ ಕೊಡಬೇಕು. ಅಧಿಕಾರಿಗಳ ಸಭೆಯಲ್ಲಿ ನಾನು ಈಗಾಗಲೇ ಒಂದು ಮಾತನ್ನು ಹೇಳಿದ್ದೇನೆ. ಲೋಕಾಯುಕ್ತರು ಆಸ್ಪತ್ರೆಗೆ ಹೋಗಿ ಅಲ್ಲಿ ಔಷಧಿಗಳನ್ನು ಸೀಜ್ ಮಾಡಿ, ಆ ಕಡುಬಡವರಿಗೆ ತಲುಪಬೇಕಾಗಿರತಕ್ಕಂಥ ಔಷಧಿಗಳ ದುರ್ವ್ಯವಹಾರವನ್ನು ಬಯಲು ಮಾಡುತ್ತಾರೆ ಎನ್ನುವುದಾದರೆ ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಇವರು ಸರ್ಪ್ರೈಸ್ ವಿಜಿಟ್ ಮಾಡುವುದಿಲ್ಲವಾ ಅಥವಾ ನಿಮ್ಮ ಗಮನಕ್ಕೆ ಇದು ಬರುವುದಿಲ್ಲವೆ? ಲೋಕಾಯುಕ್ತರು ಅಪರೂಪಕ್ಕೆ ಧಾಳಿ ಮಾಡಿ ನಮ್ಮ ಗಮನಕ್ಕೆ ತರಬೇಕೇ? ವಿಧಾನಸೌಧದಲ್ಲಿರತಕ್ಕಂಥ ಅಧಿಕಾರಿಗಳು ಮತ್ತು ಮಂತ್ರಿಗಳು ಕೈಕಟ್ಟಿಕೊಂಡು ಕುಳಿತುಕೊಂಡಿದ್ದಾರೆ. ಆದರೆ, ಲೋಕಾಯುಕ್ತರು ಬಂದು ಧಾಳಿ ಮಾಡಿ ನಮಗೆ ಸಿಗಬೇಕಾಗಿರತಕ್ಕಂಥ ಸವಲತ್ತುಗಳನ್ನು ಯಾರೋ ಕಿತ್ತುಕೊಂಡು ತಿನ್ನುತ್ತಿರುವುದನ್ನು ಬಯಲು ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತು, ಒಂದು ವಿಚಾರ ಸಾಮಾನ್ಯ ಜನರಿಗೆ ಇವತ್ತು ಗೊತ್ತಾಗುತ್ತಿದೆ. ನಿಜವಾಗಿಯೂ ಇದು ನಾವು ರಾಜಕೀಯ ವ್ಯವಸ್ಥೆಯಲ್ಲಿ ತಲೆತಗ್ಗಿಸಬೇಕಾಗಿರತಕ್ಕಂಥ ಸಂಗತಿಯಾಗಿದೆ. ವೈದ್ಯಕೀಯ ಕ್ಷೇತ್ರಕ್ಕೆ ನಾವು ವಿಶೇಷವಾದಂಥ ಆಸಕ್ತಿ ಕೊಡಬೇಕಾಗಿದೆ. ಏಕೆಂದರೆ ಅಲ್ಲಿಗೆ ಸಾಮಾನ್ಯ ಜನರು ಹೋಗುತ್ತಾರೆ. ಇವತ್ತಿನದಿವಸ ಶಾಲೆಗಳು ಸರಿಯಾಗಿಲ್ಲವೆಂದು ಮಕ್ಕಳು ಕಾನ್ವೆಂಟ್ ಹೋಗತಕ್ಕಂಥ ಪ್ರವೃತ್ತಿ ಬೆಳೆದಿರುವ ಹಾಗೆ, ಇವತ್ತಿನದಿವಸ ನಾವು ಆಸ್ಪತ್ರೆಗೆ ಹೋದರೆ ಗುಣಮುಖರಾಗಿ ಬರುವುದಿಲ್ಲವೆಂದು ಇವತ್ತಿನದಿವಸ ನರ್ಸಿಂಗ್ ಹೋಂಗೆ ಹೋಗತಕ್ಕಂಥ ಪರಿಸ್ಥಿತಿ ಇದ್ದರೆ ಈ ಆಸ್ಪತ್ರೆಗಳ ಅಗತ್ಯತೆ ಏನಿದೆ? ಇದಕ್ಕೆ ಸಂಬಂಧಪಟ್ಟಂತೆ ನಾವು ಕೆಲವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಯಾವ ಅಧಿಕಾರಿಗಳು ಈ ಕಡೆಗೆ ವಿಶೇಷವಾದ ಗಮನ ಕೊಡುವುದಿಲ್ಲವೋ ಬಹುಶಃ ಅವರ ಮೇಲೆ ಸರಿಯಾದಂಥ ಬಿಗಿ ಕ್ರಮಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗುತ್ತದೆ ಎನ್ನತಕ್ಕಂಥ ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಜನ ಇವತ್ತಿನ ದಿವಸ ರೋಸಿ ಹೋಗಿದ್ದಾರೆ. ಅವರು ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಚುನಾಯಿತ ಪ್ರತಿನಿಧಿಗಳ ಮೇಲೆ ವಿಶ್ವಾಸವನ್ನು ಕಳೆದುಕೊಳ್ಳತಕ್ಕಂಥ ಒಂದು ವಿಚಿತ್ರವಾದಂಥ ಪರಿಸ್ಥಿತಿಯಲ್ಲಿ ಇವತ್ತಿನದಿವಸ ನಾವೆಲ್ಲರೂ ಒಟ್ಟಾಗಿ ಕುಳಿತು ಚಿಂತನೆ ಮಾಡಬೇಕಾಗಿದೆ. ಇದು ಕೇವಲ ಅಧಿಕಾರಿಗಳ ಮೇಲೆ ಬಿಟ್ಟು ಮಾಡಿ ತೋರಿಸತಕ್ಕಂಥಾದ್ದು ಅಲ್ಲ. ಲೋಕಾಯುಕ್ತರಿಗೆ ಗೊತ್ತಾಗತಕ್ಕಂಥ ಸಂಗತಿ ನಮ್ಮ ಚುನಾಯಿತ ಪ್ರತಿನಿಧಿಗಳಿಗೂ ಸಹ ಗೊತ್ತಾಗಬೇಕಾಗುತ್ತದೆ. ನಾವೂ ಕೂಡ ಸರಪರ್ರೈಜಸ್ ವಿಜಿಟ್ ಮಾಡೋಣ. ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ. ಯಾವುದೇ ಲಾಭಿಗೆ ನಾವು ಮಣಿಯುವುದಿಲ್ಲ, ಮುಲಾಜು ಇಲ್ಲದೆ ಕ್ರಮ ತೆಗೆದುಕೊಳ್ಳೋಣ, ಮತ್ತು ವ್ಯವಸ್ಥೆಯಲ್ಲಿ ಬಿಗಿ ತರೋಣ. ಈ ರೀತಿಯಾದರೆ ಮಾತ್ರ ಈ ಒಂದು ಯೋಜನೆಗೆ ಅರ್ಥ ಬರುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರಿಗೆ ಎಲ್ಲಾ ಕಡೆಯಿಂದ ಜನರು ಬರುತ್ತಾರೆ. ಮತ್ತೆ ಇಲ್ಲಿಗೆ ಬರತಕ್ಕಂಥ ಜನರಿಗೆ ಕಹಿ ಅನುಭವ ಕೂಡ ಇರುತ್ತದೆ. ನನಗೆ ನೆನಪಿರತಕ್ಕಂಥಾದ್ದು

ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಬೌರಿಂಗ್ ಆಸ್ಪತ್ರೆಯಲ್ಲಿ ಅಂದು ಮುಖ್ಯಮಂತ್ರಿಯಾಗಿದ್ದಂಥ ಮಾನ್ಯ ವೀರೇಂದ್ರ ಪಾಟೀಲ್‌ರವರು ಅಡ್ಮಿಟ್ ಆಗಿದ್ದಂಥ ಸಂದರ್ಭದಲ್ಲಿ ನಾನು ಅವರನ್ನು ನೋಡುವುದಕ್ಕೆ ಹೋಗಿದ್ದೆ. ಆ ಸಂದರ್ಭದಲ್ಲಿ ಅವರು ಹೇಳಿರತಕ್ಕಂಥಾದ್ದನ್ನು ಇಲ್ಲಿ ನೆನಪು ಮಾಡಿಕೊಳ್ಳುತ್ತೇನೆ. 'ಯಡಿಯೂರಪ್ಪನವರೆ, ಈ ರಾಜ್ಯದ ಸಾಮಾನ್ಯರಾದ ಯಾವುದೇ ಬಡವ ಇಲ್ಲಿಗೆ ಬಂದಾಗ, ಇಲ್ಲಿ ಯಾವುದೇ ರೀತಿಯಾದ ಸವಲತ್ತು ಇಲ್ಲವೆಂದು ಬೇರೆ ಕಡೆಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡತಕ್ಕಂಥ ಪರಿಸ್ಥಿತಿ ಏನಿದೆ, ಇದು ನಿಜವಾಗಿಯೂ ಕೊನೆಯಾಗಬೇಕು. ಆದ್ದರಿಂದ ನಾವೆಲ್ಲರೂ ಸೇರಿ ಏನಾದರೂ ಮಾಡಬೇಕೆಂಬ' ಮಾತನ್ನು ಅವರು ಹೇಳಿದ್ದರು. ಇವತ್ತು ಕೂಡ ಅದೇ ಸ್ಥಿತಿ ಆಸ್ಪತ್ರೆಗಳಲ್ಲಿ ಇದೆ. ನಾನು ಒಂದು ದಿವಸ ರಾತ್ರಿ ಇಡೀ ಅಲ್ಲಿದ್ದು ಅನುಭವಿಸಿ ಬಂದಿದ್ದೇನೆ. ಆ ಸಂದರ್ಭದಲ್ಲಿ ಬೌರಿಂಗ್ ಆಸ್ಪತ್ರೆಗೆ ನಮ್ಮ ಹೆಲ್ತ್ ಮಿನಿಸ್ಟರನ್ನು ಮತ್ತು ಆ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂಥ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರನ್ನು ಕರೆಸಿ ಸುಮಾರು 10 ಗಂಟೆಗಳ ಕಾಲ ಎಲ್ಲಾ ಕಡೆ ತಿರುಗಿದ್ದೇನೆ. ಮತ್ತು ಅಲ್ಲಿನ ಪರಿಸ್ಥಿತಿಯನ್ನು ನನ್ನ ಕಣ್ಣಾರೆ ನೋಡಿದ್ದೇನೆ. ಆದ್ದರಿಂದ ಇದು ಸುಧಾರಣೆ ಆಗಬೇಕಾಗಿದೆ. ಆ ಕಡೆಗೆ ಗಮನವನ್ನು ನಾವು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬಡವರೇ ಹೆಚ್ಚು ಚಿಕಿತ್ಸೆ ಪಡೆಯುತ್ತಿರುವ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳನ್ನು ಸುಧಾರಣೆ ಮಾಡುವುದಕ್ಕೋಸ್ಕರ ಹೆಚ್ಚುವರಿಯಾಗಿ 30 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ. ಇದು ಸದುಪಯೋಗ ವಾಗಬೇಕು. ಬರೇ ಕಟ್ಟಡ ಕಟ್ಟುವುದಕ್ಕೋಸ್ಕರ ಇದು ಉಪಯೋಗವಾಗಬಾರದು. ಹುಬ್ಬಳ್ಳಿಯ ಕಿಮ್ಸ್ ಬಳ್ಳಾರಿಯ ಕಿಮ್ಸ್ ಅಲ್ಲದೆ ಬೆಂಗಳೂರಿನಲ್ಲಿರುವ ಜಯದೇವ ಹೃದ್ರೋಗ ಆಸ್ಪತ್ರೆ ಮತ್ತು ಕಿದ್ವಾಯಿ ಆಸ್ಪತ್ರೆಗಳಲ್ಲಿ ಔಷಧಿ ಹಾಗೂ ನಿತ್ಯ ಬಳಕೆಯ ವಸ್ತುಗಳ ಪೂರೈಕೆಗಾಗಿ 22 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ. ನಮ್ಮ ಆದ್ಯತೆ ಯಾವುದಕ್ಕೆ ಇದೆ ಎಂಬುದನ್ನು ಇದರಿಂದ ತಾವು ಗಮನಿಸುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೂ ಮಹಿಳೆಯರ ಸಬಲೀಕರಣಕ್ಕೆ ಪೂರಕವಾದಂತೆ ಹೇಳುವುದಾದರೆ 'ಭಾಗ್ಯಲಕ್ಷ್ಮಿ' ಯೋಜನೆಯಲ್ಲಿ ಹೆಣ್ಣುಮಕ್ಕಳಿಗೆ ಬೈಸಿಕಲ್ ನೀಡತಕ್ಕಂಥ ಕಾರ್ಯಕ್ರಮ ಮತ್ತು 'ಸ್ತ್ರೀಶಕ್ತಿ' ತಂಡಗಳು ಉತ್ಪಾದನೆ ಮಾಡತಕ್ಕಂಥ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವಂಥ ಒಂದು ಕಾರ್ಯಕ್ರಮ ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ಪೂರಕವಾಗಿದೆ ಎಂದು ನಾನಾದರೂ ಭಾವಿಸಿದ್ದೇನೆ. 'ಸುವರ್ಣ ಸುರಕ್ಷಾ ಯೋಜನೆ' ಬಗ್ಗೆ ಹೇಳುವುದಾದರೆ, ಬಡತನರೇಖೆಗಿಂತ ಕೆಳಗಿನ ಎಲ್ಲಾ ಕೃಷಿ ಕಾರ್ಮಿಕರಿಗೆ ಆರೋಗ್ಯ ವಿಮಾ ಸೌಲಭ್ಯಕ್ಕಾಗಿ ನಮ್ಮ ಸರ್ಕಾರ ಈ ವರ್ಷ 35 ಕೋಟಿ ರೂಪಾಯಿಗಳನ್ನು ತೆಗೆದು ಇಟ್ಟಿದ್ದೇವೆಂದು ನಾನು ಬಹಳ ಜವಾಬ್ದಾರಿಯಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದ ಸಹಾಯದೊಂದಿಗೆ ಇದನ್ನು ಇನ್ನೂ ಒಳ್ಳೆಯ ರೀತಿಯಲ್ಲಿ ಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ. ಈ ಯೋಜನೆ ಅಡಿಯಲ್ಲಿ ಫಲಾನುಭವಿಗಳು ವರ್ಷಕ್ಕೆ ಪಾವತಿಸಬೇಕಾಗಿರತಕ್ಕಂಥ 548 ರೂಪಾಯಿಗಳ ಪೈಕಿ ರಾಜ್ಯ ಸರ್ಕಾರ 248 ರೂಪಾಯಿಗಳನ್ನು ಮತ್ತು ಕೇಂದ್ರ ಸರ್ಕಾರ ಇದಕ್ಕೆ 300 ರೂಪಾಯಿ ಕೊಡುತ್ತದೆ. ಆದ್ದರಿಂದ, ಈ ಯೋಜನೆಯನ್ನು ಒಳ್ಳೆಯ ರೀತಿಯಲ್ಲಿ ನಾವು ಮಾಡುವುದಕ್ಕೆ ಸಾಧ್ಯವಿದೆ. ಮತ್ತೆ ನಮ್ಮ ಚಿಂತನೆ ಏನಿದೆ ಎಂದರೆ, ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿರುವ ಆಸ್ಪತ್ರೆಗಳಿಗೆ 100 ಹಾಸಿಗೆಗಳ

ಸುವ್ಯವಸ್ಥಿತ ಆಸ್ಪತ್ರೆ ಸೌಲಭ್ಯ ಕಲ್ಪಿಸಿಕೊಡುವುದಕ್ಕೆ ಹಂತಹಂತವಾಗಿ ನಾವು ಪ್ರಯತ್ನ ಮಾಡುತ್ತೇವೆ. ಇವತ್ತಿನದಿವಸ ಆಸ್ಪತ್ರೆಗಳು ಅಲ್ಲಿವೆ. ವಿಶ್ವಬ್ಯಾಂಕ್‌ನಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ನಾವು ತಂದಿದ್ದೇವೆ. ಆದರೆ, ಅಲ್ಲಿ ಡಾಕ್ಟರ್‌ಗಳು ಇಲ್ಲ, ನರ್ಸ್‌ಗಳೂ ಸಹ ಇಲ್ಲ. ಎಲ್ಲವೂ ಇದ್ದರೂ ಕೂಡ ಅಲ್ಲಿಗೆ ಬರತಕ್ಕಂಥ ಪೇಶೆಂಟ್‌ಗಳಿಗೆ ಬೇಕಾಗಿರತಕ್ಕಂಥ ಡಾಕ್ಟರ್ ಇಲ್ಲ ಎನ್ನುವುದಾದರೆ ಇದು ದೇವರು ಇಲ್ಲದ ಗುಡಿ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ದೇವಸ್ಥಾನ ಕಟ್ಟಿ ಅಲ್ಲಿ ದೇವರು ಇಲ್ಲದೇ ಇದ್ದರೆ, ಮತ್ತು ಆಸ್ಪತ್ರೆಗೆ ಹೋದಾಗ ಅಲ್ಲಿ ಡಾಕ್ಟರ್‌ಗಳು ಇಲ್ಲದಿದ್ದರೆ, ಮತ್ತೆ ಶಾಲೆಗೆ ಹೋದಾಗ ಅಲ್ಲಿ ಮೇಷ್ಟ್ರೇ ಇಲ್ಲದೆ ಇದ್ದರೆ ಹೇಗೆ? ಇದು ಸ್ವತಂತ್ರ ಭಾರತದ ಕರ್ಮ ಕಥೆ. ಇದನ್ನು ಕೆಲವೇ ತಿಂಗಳಲ್ಲಿ ಪರಿವರ್ತನೆ ಮಾಡುತ್ತೇನೆ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ನಿಮ್ಮೆಲ್ಲರ ಸಹಕಾರದಿಂದ, ಈ ದಿಕ್ಕಿನಲ್ಲಿ ನಾವೆಲ್ಲರೂ ಒಟ್ಟಾಗಿ ಸೇರಿ ವಿಶೇಷ ಪ್ರಯತ್ನ ಮಾಡೋಣವೆಂದು ತಮ್ಮಲ್ಲಿ ವಿನಮ್ರವಾಗಿ ನಾನು ಪ್ರಾರ್ಥನೆ ಮಾಡುತ್ತೇನೆ. ತಾಲ್ಲೂಕು ಮಟ್ಟದಲ್ಲಿ 100 ಹಾಸಗೆಗಳ ಸುಸಜ್ಜಿತ ಆಸ್ಪತ್ರೆಯನ್ನು ಹೆಚ್ಚು ಸಂಖ್ಯೆಯಲ್ಲಿ ತರುವುದಕ್ಕೆ ನಾನು ಪ್ರಯತ್ನ ಮಾಡತಕ್ಕಂಥಾದ್ದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅತೀ ಹಿಂದುಳಿದ 39 ತಾಲ್ಲೂಕುಗಳಲ್ಲಿ ಇರತಕ್ಕಂಥ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಆದರೆ, ಅವುಗಳಿಗೆ ಉಪಕರಣಗಳ ಮತ್ತಿತರ ಸೌಲಭ್ಯಗಳಿಲ್ಲ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ್ದೇವೆ. ಆದರೆ ಅಲ್ಲಿರುವವರು ಏನು ಮಾಡಬೇಕು? ಆದ್ದರಿಂದ ಅಲ್ಲಿಗೆ ಉಪಕರಣಗಳನ್ನು ತಂದು ಉಪಯೋಗ ಮಾಡಿಕೊಳ್ಳುವುದಕ್ಕೋಸ್ಕರ 10 ಕೋಟಿ ರೂಪಾಯಿಗಳನ್ನು ಈ ವರ್ಷ ನಾವು ತೆಗೆದಿಟ್ಟಿದ್ದೇವೆ. ರಾಜ್ಯವಲಯದ ಆಸ್ಪತ್ರೆಗಳಲ್ಲಿ ಔಷಧಿ ಖರೀದಿಗಾಗಿ 16 ಕೋಟಿ ರೂಪಾಯಿ ಮತ್ತು ಜಿಲ್ಲಾವಲಯ ಆಸ್ಪತ್ರೆಗಳಿಗೆ ಹೆಚ್ಚುವರಿಯಾಗಿ ಹಣ ಕೊಡುತ್ತಿದ್ದೇವೆ. ಹಿಂದೆ ಕೊಟ್ಟಿರತಕ್ಕಂಥದ್ದಕ್ಕೆ ನಾನು ಹೋಲಿಕೆ ಮಾಡುತ್ತಿಲ್ಲ. ಹಿಂದಿನ ಅಂಕಿ–ಅಂಶಗಳನ್ನು ಹೋಲಿಕೆ ಮಾಡಿ ನೀವೇನೂ ಮಾಡಲಿಲ್ಲ ನಾನು ಮಾಡಿದ್ದೇನೆ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಅವತ್ತಿನ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅವತ್ತು ಸರ್ಕಾರ ನಡೆಸತಕ್ಕಂಥವರು, ಆಡಳಿತ ನಡೆಸಿರುವಂತವರು ಮಾಡಿದ್ದಾರೆ. ಮಾನ್ಯ ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರ ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿದೆ ಮತ್ತೆ ಆರ್ಥಿಕ ಸಚಿವರಾಗಿ ಮಾನ್ಯ ಸಿದ್ದರಾಮಯ್ಯನವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇವರಿಗೆ ನಾವು ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಅವರು ಇಟ್ಟಿರತಕ್ಕಂಥ ಹೆಜ್ಜೆಯನ್ನು ಅನುಸರಿಸಿ ನಾವು ಮುಂದಕ್ಕೆ ಹೆಜ್ಜೆ ಹಾಕತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ. ಹಿಂದಿನ ಸರ್ಕಾರ ಮಾಡಿರತಕ್ಕಂಥ ಯಾವುದೇ ಕಾರ್ಯಕ್ರಮವನ್ನು ರದ್ದು ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಆ ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚು ಒತ್ತುಕೊಟ್ಟು ಇನ್ನೂ ಒಳ್ಳೆಯ ರೀತಿಯಲ್ಲಿ ಯಶಸ್ವಿಯಾಗಿ ಜನರಿಗೆ ತಲುಪುವಂಥ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ನೂತನವಾಗಿ 6 ವೈದ್ಯಕೀಯ ಕಾಲೇಜುಗಳನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಈ ಕಟ್ಟಡದ ಕೆಲಸ ಪೂರ್ಣವಾಗಬೇಕೆಂದು 39 ಕೋಟಿ 33 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಈ ವರ್ಷ ಅದು ಪೂರ್ಣವಾಗಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ. ಸಂಬಂಧಪಟ್ಟಂಥ ಇಲಾಖಾಧಿಕಾರಿಗಳು ತರಾತುರಿಯಲ್ಲಿ ಕೆಲಸ ಪ್ರಾರಂಭ

ಮಾಡಿದರು. ಇದರ ಬಗ್ಗೆ ನನಗೂ ಕೂಡ ಚಿಂತನೆ ಇದೆ. ಈ ಬಜೆಟ್‌ನ್ನು ಕೇವಲ 30 ದಿವಸಗಳು ಹಗಲು-ರಾತ್ರಿ ನಮ್ಮ ಅಧಿಕಾರಿಗಳ ಸಹಕಾರದಿಂದ ಆಗಿದೆ. ಆದ್ದರಿಂದ, ಈ ಸಂದರ್ಭದಲ್ಲಿ ಅಧಿಕಾರಿಗಳಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಚ್ಚೇ ಪಡುತ್ತೇನೆ. ಪ್ರಾಮಾಣಿಕ ಅಧಿಕಾರಿಗಳು ನಮ್ಮಲ್ಲಿದ್ದಾರೆ. ಆರ್ಥಿಕ ಇಲಾಖೆಯ ಅಧಿಕಾರಿಗಳು ನನ್ನ ಜೊತೆ ಚರ್ಚೆ ಮಾಡಿದಾಗ ಅವರು ತೆಗೆದುಕೊಂಡಂಥ ಕಳಕಳಿ ಪರಿಣಾಮದಿಂದಲೇ ಒಂದು ಒಳ್ಳೆಯ ಬಜೆಟ್‌ನ್ನು ನನ್ನಿಂದ ಕೊಡುವುದಕ್ಕೆ ಸಾಧ್ಯವಾಯಿತು. ನನ್ನ ಮುಂದಿನ ಚಿಂತನೆ ಏನೆಂದರೆ, ನಿಮ್ಮೆಲ್ಲರ ಸಹಕಾರದೊಂದಿಗೆ ಬರುವ 15 ದಿವಸಗಳಲ್ಲಿ ನಮ್ಮ ಮುಖ್ಯ ಕಾರ್ಯದರ್ಶಿಗಳು ಮತ್ತು ಉನ್ನತ ಅಧಿಕಾರಿಗಳ ಜೊತೆ ಕುಳಿತುಕೊಂಡು ಬಜೆಟ್‌ನಲ್ಲಿ ನಾವು ಏನೇನು ಹೇಳಿದ್ದೇವೆಯೋ ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಆಜ್ಞೆ ಹೊರ ಬರಬೇಕು ಮತ್ತು ತತ್‌ಕ್ಷಣ ಕಾರ್ಯಕ್ರಮ ಪ್ರಾರಂಭ ಆಗಬೇಕೆಂಬುದು ನನ್ನ ಉದ್ದೇಶವಾಗಿದೆ. ಆ ದಿಕ್ಕಿನಲ್ಲಿ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ನಾನು ಕೊಡುತ್ತಾ ಈ ನೂತನ 6 ವೈದ್ಯಕೀಯ ಕಾಲೇಜುಗಳ ಕೆಲಸ ಪೂರ್ಣವಾಗಿ ಪ್ರಾರಂಭವಾಗಬೇಕು. ಕೇವಲ ಕಟ್ಟಡ ಕಟ್ಟಿದರೆ ಏನೂ ಆಗುವುದಿಲ್ಲ. ಇದಕ್ಕೆ ಯಾವರೀತಿ ಕೇಂದ್ರದ ಮನವೊಲಿಸಬೇಕಾಗಿದೆಯೋ ಅದಕ್ಕೆ ನಾವು ಪ್ರಯತ್ನ ಮಾಡುತ್ತೇವೆಂದು ಈ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಗೌರವಾನ್ವಿತ ರಾಷ್ಟ್ರಾಧ್ಯಕ್ಷರಾಗಿರುವ ಡಾ: ಎ.ಪಿ.ಜೆ. ಅಬ್ದುಲ್ ಕಲಾಂನವರ ಅಭಿವೃದ್ಧಿ ಸೂತ್ರಗಳ ಜಾರಿ ಬಗ್ಗೆ ಖಚಿತ ಕಾರ್ಯಕ್ರಮಗಳು ಇಲ್ಲ ಎನ್ನುತಕ್ಕಂಥ ಮಾತನ್ನು ನಮ್ಮ ಸ್ನೇಹಿತರು ಮತ್ತು ಕೆಲವು ಹಿರಿಯರು ಹೇಳಿದ್ದಾರೆ. ಇದು ಸರಿಯಾದ ಅಭಿಪ್ರಾಯವಲ್ಲ. ವಿವಿಧ ಇಲಾಖೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿದ್ದೇವೆ. ಘನತೆವೆತ್ತ ರಾಷ್ಟ್ರಪತಿಗಳು ನೀಡಿರುವಂಥ 11 ಸೂತ್ರಗಳ ಕಾರ್ಯಕ್ರಮಗಳನ್ನು ಹಂತಹಂತವಾಗಿ ಜಾರಿಗೊಳಿಸಬೇಕಾಗುತ್ತದೆ. ಇದಕ್ಕೆ ಅಪಾರವಾದಂಥ ಸಂಪನ್ಮೂಲ ಮತ್ತು ಸುಮಾರು 5 ವರ್ಷಕ್ಕೂ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ. ಈ ವರ್ಷ ಈ ಕಾರ್ಯಕ್ರಮಗಳಿಗೆ ಪ್ರಾರಂಭಿಕವಾಗಿ ಸುಮಾರು 550 ಕೋಟಿ ರೂಪಾಯಿಗಳನ್ನು ನಾನು ಮೀಸಲಿಟ್ಟಿದ್ದೇನೆ. ಬರೀ ಬಾಯಿ ಮಾತಿನಲ್ಲಿ ನಾನು ಹೇಳುತ್ತಿಲ್ಲ. ಡಾ: ಎ. ಪಿ. ಜೆ. ಅಬ್ದುಲ್ ಕಲಾಂನವರು ಇಲ್ಲಿ ನಿಂತು ಶಾಲಾಮಕ್ಕಳನ್ನು ಕೂಡಿಸಿಕೊಂಡು ಅಥವಾ ಹಿರಿಯ ತಂದೆ ತಾಯಿ ಮಕ್ಕಳನ್ನು ಕೂಡಿಸಿಕೊಂಡು ಯಾವ ರೀತಿಯಾಗಿ ಬುದ್ಧಿವಾದ ಹೇಳಬಹುದೋ ಹಾಗೆ ಈ ದೇಶದ ಇತಿಹಾಸದಲ್ಲಿ ಒಬ್ಬ ರಾಷ್ಟ್ರಪತಿ ಕರ್ನಾಟಕ ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆ, ಯೋಜನೆ ಮಾಡುತ್ತಾರೆ ಮತ್ತು ಸಲಹೆ ಕೊಡುತ್ತಾರೆಂದರೆ ನಮಗೇನು ಆಗಿದೆ? ನಾವು ಚುನಾಯಿತ ಪ್ರತಿನಿಧಿಗಳಾಗಿ ಜವಾಬ್ದಾರಿ ಹೊತ್ತು ಆಡಳಿತ ಪಕ್ಷದಲ್ಲಿ ಕುಳಿತಿರುವಂಥ ನಾವು ಮಾನ್ಯ ರಾಷ್ಟ್ರಪತಿಗಳಾದ ಅಬ್ದುಲ್‌ಕಲಾಂರವರು ಹೇಳಿರುವಂತಹ ವಿಚಾರಗಳನ್ನು ಸಾಕಾರಗೊಳಿಸಿದರೆ ಬಹುಶಃ ಕರ್ನಾಟಕ ರಾಜ್ಯ ಈ ದೇಶದಲ್ಲಿ ಮೊದಲನೆಯ ಒಂದು ಅಭಿವೃದ್ಧಿ ಮಾದರಿ ರಾಜ್ಯ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಆ ದಿಕ್ಕಿನಲ್ಲಿ ಪ್ರಯತ್ನಗಳು ನಡೆದಿದೆ. ಅದಕ್ಕಾಗಿ ನಾನು 550 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇನೆ. ಉದಾಹರಣೆಗೆ ಈಗ ಜೈವಿಕ ಇಂಧನ ಅಭಿವೃದ್ಧಿ ಕಾರ್ಯಕ್ರಮಗಳು ಇದಕ್ಕೆ 20 ಕೋಟಿ ರೂಗಳನ್ನು ತೆಗೆದಿಟ್ಟಿದ್ದೇವೆ. ಇದು ಅವರ ಚಿಂತನೆಯ ಹಿನ್ನೆಲೆಯಿಂದಲೇ ಯೋಚನೆ ಮಾಡಿರುವಂಥಾದ್ದು. ತೋಟಗಾರಿಕೆ ಮತ್ತು ಕೃಷಿ ಉತ್ಪನ್ನಗಳ ಸಂರಕ್ಷಣೆಗಾಗಿ ಸುಮಾರು 20 ಕೋಟಿ ರೂಪಾಯಿಗಳನ್ನು

ತೆಗೆದಿಟ್ಟಿದ್ದೇವೆ. ತೋಟಗಾರಿಕೆ ಮತ್ತು ಕೃಷಿ ಉತ್ಪನ್ನಗಳ ರಫ್ತು ಹೆಚ್ಚಿಸುವುದಕ್ಕೋಸ್ಕರ ಮೂಲ ಸೌಕರ್ಯ ಸುಧಾರಣೆಗಾಗಿ ಕರ್ನಾಟಕ ಕೃಷಿ ಉತ್ಪನ್ನ ರಫ್ತು ನಿಗಮಕ್ಕೆ 10 ಕೋಟಿ ರೂಗಳನ್ನು ನಾವು ತೆಗೆದಿಟ್ಟಿದ್ದೇವೆ. ತೋಟಗಾರಿಕೆ ಕೃಷಿ ಮತ್ತು ಹನಿನೀರಾವರಿ ಕಾರ್ಯಕ್ರಮಕ್ಕೆ 44 ಕೋಟಿ ರೂಗಳನ್ನು ನಾವು ತೆಗೆದಿಟ್ಟಿದ್ದೇವೆ. ಎರಡೂ ಕಡೆ ಇರುವ ಶಾಸಕ ಮಿತ್ರರನ್ನು ನಾನು ಕೇಳುತ್ತೇನೆ. ಹನಿ ನೀರಾವರಿಗೆ ಡ್ರಿಪ್ ಇರಿಗೇಷನ್‌ಗೆ ನಾವು ಸಬ್ಸಿಡಿಯನ್ನು ಕೊಟ್ಟಿದ್ದೇವೆ. ಕೋಲಾರ ಮತ್ತು ಬಿಜಾಪುರಕ್ಕೆ 100 ಪರ್ಸೆಂಟ್ ಸಬ್ಸಿಡಿ ಕೊಟ್ಟಾಗಿನಿಂದಲೂ ಅದು ಬಡವರಿಗೆ ತಲುಪುತ್ತಿಲ್ಲ. ಆದರೆ ಈ ಬಾರಿ ನಾವು ಕೊಟ್ಟಿರುವಂತಹ ಹಣ ಎಷ್ಟು ಇದೆ ಎಂದು ಪ್ರಶ್ನೆಯನ್ನು ಕೇಳಬೇಡಿ. ಅಗತ್ಯಕ್ಕಿಂತ ಹೆಚ್ಚಿನ ಹಣವನ್ನು ಕೊಡೋಣ ನಾಳೆ ಬರುವಂತಹ ಸಂಪನ್ಮೂಲಗಳನ್ನು ಕ್ರೋಢೀಕರಿಸುವಂತಹ ಕಾಲದಲ್ಲಿ ಈಗ ಬರುವಂತಹ ಹಣ ಏತಕ್ಕೆ ಆಗುತ್ತದೆ? ನಾವು ಸಂಪನ್ಮೂಲಗಳನ್ನು ಈ ರಾಜ್ಯದ ರೈತರಿಗೆ, ಕೃಷಿ ಕಾರ್ಮಿಕರಿಗೆ ಕ್ರೋಢೀಕರಿಸಬೇಕಾಗಿದೆ. ಆದ್ದರಿಂದ ಈ ಹಣವನ್ನು ಪೂರೈಸುತ್ತೇನೆ; ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೃಷಿ ಅಂತರೀಕರಣದ ಕಾರ್ಯಕ್ರಮಕ್ಕಾಗಿ 30 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಒಣ ಭೂಮಿ ಅಭಿವೃದ್ಧಿಗಾಗಿ, ಮತ್ತು ಸುವರ್ಣ ಕೃಷಿ ಹೊಂಡ ತೆಗೆಯುವುದಕ್ಕೆ ಹೊಸ ಕಲ್ಪನೆಯನ್ನು ಇಟ್ಟುಕೊಂಡು 50 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ. ತೋಟಗಾರಿಕೆ ಅಭಿವೃದ್ಧಿ ಫಾರ್ಮ್‌ಗಳಿಗೆ 5.75 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ. ಜವಳಿ ಪಾರ್ಕಿನ ಅಭಿವೃದ್ಧಿಗಾಗಿ 12 ಕೋಟಿ ರೂಪಾಯಿಗಳನ್ನು ಹಾಗೂ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಅಭಿವೃದ್ಧಿಗಾಗಿ 15 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಅನೇಕ ಜನರು ಈ ನೇಕಾರರು ನನ್ನ ಹತ್ತಿರ ಬಂದರು. ಮಾನ್ಯ ಯಡಿಯೂರಪ್ಪನವರೆ, ಬಹಳ ವರ್ಷಗಳ ಕನಸು ನನಸಾಗಿದೆ. ನಾವು ತೃಪ್ತಿಯಿಂದ ಇದ್ದೇವೆ. ನೀವು ಕೊಟ್ಟಂತಹ ಭರವಸೆಯನ್ನು ಈಡೇರಿಸಿದ್ದೀರಿ. ಪ್ರಾಮಾಣಿಕವಾಗಿ ನಾವುಗಳು ನಮ್ಮ ಕಾಲ ಮೇಲೆ ನಿಂತುಕೊಂಡು ಜೀವನ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ' ಎನ್ನುವಂತಹ ಮೆಚ್ಚುಗೆಯ ಮಾತನ್ನು ಅವರು ಆಡಿದರು. ಈ ರೈತ ಮತ್ತು ನೇಕಾರ ನಮ್ಮ ಎರಡು ಕಣ್ಣು ಇದ್ದಂತೆ. ಅವನು ನೆಮ್ಮದಿಯಿಂದ ಇರದಿದ್ದರೆ ಇದು ಯಾರಿಗಾಗಿ ಬಜೆಟ್, ಯಾರಿಗಾಗಿ ಈ ವ್ಯವಸ್ಥೆ? ಆ ದಿಕ್ಕಿನಲ್ಲಿ ಹೆಚ್ಚಿಗೆ ಒತ್ತನ್ನು ಕೊಟ್ಟಿದ್ದೇನೆ ಎನ್ನುವಂತಹ ಮಾತನ್ನು ಸಹ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಯುವಕರಿಗಾಗಿ ಸ್ವಉದ್ಯೋಗ ತರಬೇತಿಯನ್ನು ನೀಡುವುದಕ್ಕೋಸ್ಕರ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಆದರಿಂದ ನನಗೆ ಸಮಾಧಾನವಿಲ್ಲ ಈ ರಾಜ್ಯದ ಜನರನ್ನು, ಯುವಕರನ್ನು ನಿರುದ್ಯೋಗ ಸಮಸ್ಯೆ ಕಿತ್ತು ತಿನ್ನುತ್ತಿರುವಂತಹ ಕಾಲದಲ್ಲಿ ಅವರಿಗೆ ಇನ್ನೂ ಹೆಚ್ಚು ಅನುಕೂಲಗಳು ಆಗಬೇಕು ಮತ್ತು ಟ್ರೈನಿಂಗ್ ಸಿಗಬೇಕು. ಇದು ಬರೀ ಡಿಗ್ರಿಯನ್ನು ಪಡೆದರೆ ಆಗುವುದಿಲ್ಲ. ಅವನ ಶಿಕ್ಷಣ ಮುಗಿದ ಮೇಲೆ, ಅವನ ಕಾಲ ಮೇಲೆ ನಿಂತು ನೆಮ್ಮದಿಯಿಂದ ಅವನ ಕುಟುಂಬವನ್ನು ಅವನು ನೋಡಿಕೊಳ್ಳಬೇಕು. ಈ ಸಮಾಜಕ್ಕೆ ಅವನು ಭಾರವಾಗಬಾರದು, ಎನ್ನುವಂತಹ ಕಲ್ಪನೆ ನಿಮಗೂ ಹಾಗೂ ನಮಗೂ ಇದೆ. ಆ ದಿಕ್ಕಿನಲ್ಲಿ ಬರುವಂತಹ ದಿನಗಳಲ್ಲಿ ವಿಶೇಷವಾದಂತಹ ಗಮನವನ್ನು ಕೊಡಬೇಕಾಗಿದೆ. ಇದು ನಮ್ಮ ಆದ್ಯಕರ್ತವ್ಯ, ಆಕಡೆಗೆ ನಾವು ಚಿಂತನೆಯನ್ನು ಮಾಡುತ್ತೇವೆನ್ನುವಂತ ಮಾತನ್ನು ಈ ಸಂದರ್ಭದಲ್ಲಿ

ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಹಿಂದುಳಿದ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕೆಗಳ ವಲಯದ ಉದ್ಯಮಶೀಲರಿಗೆ ಅನುಕೂಲವಾಗುವಂತೆ 25 ಕೈಗಾರಿಕಾ ಸಮುಚ್ಚಯಗಳನ್ನು ಸ್ಥಾಪಿಸುವುದಕ್ಕೆ 8 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ. ಅದರ ಮೂಲಕ ಈ ಉದ್ಯಮವನ್ನು ಕೊಡುವುದಕ್ಕೆ ಅನುಕೂಲವಾಗಬಹುದು ಹಾಗೂ ತರಬೇತಿಯನ್ನು ಕೊಡಬಹುದು ಎನ್ನುವಂತಹ ಉದ್ದೇಶದಿಂದ ಇದನ್ನು ನಾನು ಮಾಡುತ್ತಿದ್ದೇನೆ. ಖಾದಿ ಮತ್ತು ಗುಡಿಕೈಗಾರಿಕೆಗಳ ಸುಧಾರಣೆಗೋಸ್ಕರ 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮಗಳು ಇದಕ್ಕೆ 25ಕೋಟಿ 75ಲಕ್ಷ ರೂಪಾಯಿಗಳನ್ನು ನಾನು ತೆಗೆದಿಟ್ಟಿದ್ದೇನೆ. ಹೀಗೆ ಬಹಳ ಪ್ರಮುಖವಾಗಿ ಮೂಲ ಸೌಕರ್ಯ ಅಭಿವೃದ್ಧಿ, ಪ್ರವಾಸೋದ್ಯಮ ಅಭಿವೃದ್ಧಿ, ಆಸ್ತಿ ಸೃಜನೆ ಉದ್ಯೋಗ ಸೃಜನೆ ಮೊದಲಾದ ಕಾರ್ಯಕ್ರಮಗಳ ಮೂಲಕ ರಾಜ್ಯದ ಸಂಪನ್ಮೂಲಗಳ ಯೋಗ್ಯ ಬಳಕೆಗಾಗಿ ಆದಾಯ ಹೆಚ್ಚಳಕ್ಕೆ ಗೌರವಾನ್ವಿತ ರಾಷ್ಟ್ರಪತಿಗಳು ನೀಡಿರುವಂತಹ ಸೂತ್ರಗಳ ಅನುಷ್ಠಾನಕ್ಕೆ ನಮ್ಮ ಸರ್ಕಾರ ಒತ್ತು ನೀಡಿದೆ. ನಾವು ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅತ್ಯಂತ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ. ಇದರಲ್ಲಿ ನಮಗೆ ರಾಜಕೀಯ ಇಚ್ಛಾಶಕ್ತಿ ಇದೆ ಎನ್ನುವಂತಹ ಮಾತನ್ನೂ ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ಸುಮಾರು 5–6 ವರ್ಷಗಳಿಂದ ಸಣ್ಣ ಕೈಗಾರಿಕೆಗಳಿಗೆ ಬಾಕಿ ಉಳಿದಿರುವಂತಹ ಹಣದಲ್ಲಿ ಸುಮಾರು 300 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಹಣವನ್ನು ಕೊಡಬೇಕಾಗಿದೆ. ಯಾರು ಅವರೆಲ್ಲಾ? ಏನೋ ಉದ್ಯೋಗ ಸಿಕ್ಕಿ ಸಬ್ಸಿಡಿ ಸಿಗುತ್ತದೆ ಎಂದು ಹೇಳಿ ಬಾಗಿಲು ಹಾಕಿಕೊಂಡು ಅವರು ರಸ್ತೆಯಲ್ಲಿ ತಲೆತಗ್ಗಿಸಿ ಓಡಾಟ ಮಾಡುವಂತಹ ಧಾರುಣ ಪರಿಸ್ಥಿತಿ ಬಂದಿದೆ. ಆಯಾಯ ಕಾಲಕ್ಕೆ ನಾವು ಸಬ್ಸಿಡಿಯನ್ನು ಬಿಡುಗಡೆ ಮಾಡಬೇಕಾಗಿತ್ತು. ಸಣ್ಣ ಕೈಗಾರಿಕೆಗಳನ್ನು ನಾವು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿಕೊಂಡು ಬರುತ್ತಿದ್ದೇವೆ. ಇವತ್ತು ಏನು ಉದ್ದಿಮೆಗಳು ಬರುತ್ತಿವೆ ಅದರಲ್ಲಿ ಶೇಕಡಾ 95ರಷ್ಟು ಭಾಗ ಹೊರರಾಜ್ಯದವರು, ಹೊರದೇಶದವರು ಬರುತ್ತಿದ್ದಾರೆ. ಇಲ್ಲಿ ನಾವೇನು ಮಾಡುತ್ತಿದ್ದೇವೆ? ಶೇಕಡಾ 50 ಭಾಗ ಸಣ್ಣ ಕೈಗಾರಿಕೆಗಳು ಬಾಗಿಲು ಹಾಕಿಯಾಗಿದೆ. ಅದಕ್ಕೆ ನಾವು ಹೆಚ್ಚಿನ ಒತ್ತನ್ನು ಕೊಡಬೇಕಾಗಿದೆ. ಅದಕ್ಕಾಗಿ ಮೊದಲ ಬಾರಿಗೆ ಎಷ್ಟೇ ತೊಂದರೆ ಆದರೂ ಪರವಾಗಿಲ್ಲ, 80 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಬಿಡುಗಡೆ ಮಾಡಿದ್ದೇವೆ. ಬರುವಂತಹ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಸಬ್ಸಿಡಿಯನ್ನು ಬಿಡುಗಡೆ ಮಾಡಿ ಅವನು ಋಣಮುಕ್ತನಾಗಿ ತನ್ನ ಕಾಲಮೇಲೆ ನಿಲ್ಲಬೇಕು ಎನ್ನುವಂತಹ ನಮ್ಮ ಅಪೇಕ್ಷೆ ಇದೆ. ಸಿಕ್ ಇಂಡಸ್ಟ್ರಿಗಳ ಬಗ್ಗೆ ವಿಶೇಷವಾದಂತಹ ಒತ್ತನ್ನು ಬರುವ ದಿವಸಗಳಲ್ಲಿ ಕೊಡುತ್ತೇನೆ ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳುವುದಾದರೆ 'ಗಾಲಿಗಳ ಮೇಲೆ ಅರಮನೆ' ಯೋಜನೆಗೆ ರಾಜ್ಯದ ಪಾಲು 16 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ನಾನು ಈಗಾಗಲೇ ಹೇಳಿದಂತೆ ದಯಮಾಡಿ ನಮ್ಮ ಆ ಕಡೆಗೆ ಕುಳಿತಿರುವಂತಹ ಮಾನ್ಯ ಸದಸ್ಯರು ಪರಾಂಭರಿಸಬೇಕು ಮತ್ತು ಇದನ್ನು ನೋಡಬೇಕು. ನಮ್ಮ ಬಜೆಟ್‌ನ ವಿಶೇಷವೆಂದರೆ, ಪ್ರತಿ ಇಲಾಖೆಯ ಕಾರ್ಯಕ್ರಮಗಳಿಗೆ ಈ ವರ್ಷ ಆಯವ್ಯಯ ಹಂಚಿಕೆಯನ್ನು ಹೆಚ್ಚಿಗೆ ಮಾಡಿದ್ದೇವೆ. ಕನಿಷ್ಠ ಶೇಕಡಾ 12 ರಿಂದ ಗರಿಷ್ಠ ಶೇಕಡ 300ರವರೆಗೆ ಹೆಚ್ಚಳವಾಗಿದೆ ಎಂದು ಈ ಸದನದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ನಾನು ಈಗಾಗಲೇ ಹೈಕೋರ್ಟ್ ಪೀಠದ ಬಗ್ಗೆ ಮಾನ್ಯ ವಿರೋಧಪಕ್ಷದ

ನಾಯಕರು ಸದನಕ್ಕೆ ಬರುವುದಕ್ಕೆ ಮುಂಚೆ ಭರವಸೆಯನ್ನು ಕೊಟ್ಟಿದ್ದೇನೆ. 2006–07ನೇ ಸಾಲಿಗೆ 20 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ. ಈಗ ಅನುದಾನವನ್ನು ಹೆಚ್ಚಿಸಬೇಕೆಂದು ಮಾನ್ಯ ಸದಸ್ಯರುಗಳು ಕೋರಿದ ಮೇರೆಗೆ ಇನ್ನೂ 10 ಕೋಟಿ ರೂಪಾಯಿಗಳನ್ನು ಇದಕ್ಕೆ ಸೇರಿಸಿ ಒಟ್ಟು 30 ಕೋಟಿ ರೂಪಾಯಿಗಳನ್ನು ಈ ವರ್ಷವೇ ಒದಗಿಸಲಾಗಿದೆ. ನಾಳೇನೆ ಅವರು ಫಾರ್ಮಲಿಟಿಸನ್ನು ಮುಗಿಸಿಕೊಂಡು ಕೆಲಸವನ್ನು ಪ್ರಾರಂಭ ಮಾಡಬಹುದು. ಅಗತ್ಯ ಬಿದ್ದರೆ ಇನ್ನೂ ಹೆಚ್ಚಿಗೆ ಹಣವನ್ನು ನಾವು ಕೊಡುವುದಕ್ಕೆ ಸಿದ್ಧರಿದ್ದೇವೆ. ಈ ವರ್ಷ ಆ ಕೆಲಸ ಪ್ರಾರಂಭವಾಗಬೇಕು. ಮತ್ತು ಆದಷ್ಟು ಬೇಗ ಪೂರ್ಣವಾಗಬೇಕು. ಕೇವಲ ಭರವಸೆ ಕೊಟ್ಟು ಮೂಗಿಗೆ ತುಪ್ಪ ಹಚ್ಚುವ ಕಾಲ ಮುಗಿದು ಅದು ಕಾರ್ಯ ರೂಪಕ್ಕೆ ಬರಬೇಕು ಎಂಬ ಹೆಬ್ಬಯಕೆ ನಮಗೆ ಇದೆ. ಆ ಕೆಲಸವನ್ನು ನಾವು ಮಾಡುತ್ತೇವೆನ್ನುವಂತಹ ಮಾತನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಇದರಲ್ಲಿ ಎಲ್ಲರ ಭಾವನೆಯೂ ಕೂಡ ಇದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟುಪೀಠ ಅದಷ್ಟು ಬೇಗ ಅಸ್ತಿತ್ವಕ್ಕೆ ಬರಬೇಕು. ಈಗ ಮಾನ್ಯ ಸಚಿವರಾದ ಶ್ರೀ ಬಸವರಾಜಹೊರಟ್ಟಿಯವರು ಬಂದರು. ಆದ್ದರಿಂದ ನಾವು ಆ ಕಡೆಗೆ ವಿಶೇಷ ಗಮನವನ್ನು ಕೊಡುತ್ತೇವೆ. ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಇನ್ನೂ ರಾಷ್ಟ್ರೀಯ ಕುಟುಂಬ ನಿರ್ವಹಣಾ ಯೋಜನೆ. ಗ್ರಾಮೀಣ ಪ್ರದೇಶದಲ್ಲಿ ಬಡತನದ ರೇಖೆಗಿಂತ ಕೆಳಗಿರುವಂತಹ ಕುಟುಂಬದ ದುಡಿಯುವ ಸದಸ್ಯ ಆಕಸ್ಮಿಕವಾಗಿ ಮರಣವನ್ನು ಹೊಂದಿದರೆ ಆತನ ಕುಟುಂಬದ ಸದಸ್ಯರಿಗೆ ರಾಷ್ಟ್ರೀಯ ಕುಟುಂಬ ಯೋಜನೆಯಡಿಯಲ್ಲಿ ಪರಿಹಾರವನ್ನು ಕೊಡುತ್ತೇವೆ. ಅದರ ವಿವರವನ್ನು ಹೇಳುವುದಕ್ಕೆ ಹೋದರೆ 2 ಗಂಟೆಗಳ ಕಾಲ ಆಗುತ್ತದೆ. ನಾನು ಯಾವುದೇ ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೇ, ಎಲ್ಲರೂ ನಾವು ಇಷ್ಟು ವರ್ಷ ಅನುಭವ ಇರುವಂತಹವರು ಹಿರಿಯರು ನೀವು ಆ ಕಡೆಗೆ ಕುಳಿತಿರಬೇಕಾದರೆ ಈಗಾಗಲೇ ಆಯವ್ಯಯ ಮಂಡನೆ ಮಾಡಿರುವಂತಹ ಕಾಲದಲ್ಲಿ ಯಾವುದಕ್ಕೆ ಹೆಚ್ಚು ಒತ್ತನ್ನು ಕೊಟ್ಟಿದ್ದೇನೆ ಎನ್ನುವಂತಹ ಮಾತನ್ನು ಮತ್ತು ಈ ಯೋಜನೆಯಡಿ ಕಳೆದ 5 ವರ್ಷಗಳಿಂದ ಇತ್ಯರ್ಥವಾಗದ 20 ಸಾವಿರ ಅರ್ಜಿಗಳು, ಇದೆ. ನೀವು ಆಶ್ಚರ್ಯಪಡುತ್ತೀರಾ? 5 ವರ್ಷದ ಹಳೆಯದು ಹಿಂದಿನ ಸರ್ಕಾರದ್ದಕ್ಕೆ ನಾನ್ಯಾಕೆ ಕೊಡಬೇಕು, ಅದರ ಬಗ್ಗೆ ನಾನು ಚೆನ್ನಾಗಿ ಯೋಚನೆ ಮಾಡಿದ್ದೇನೆ. ನನ್ನ ಗಮನಕ್ಕೆ ಬಂದಂತಹ ಸಂದರ್ಭದಲ್ಲಿ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆ ಹಾಗೂ ಧರ್ಮಸಿಂಗ್‌ರವರ, ಈ ಎಲ್ಲಾ ಅರ್ಜಿಗಳು ವಿಲೇವಾರಿಯಾಗಬೇಕು ಹಾಗೂ ಎಲ್ಲರಿಗೂ ಅನುಕೂಲ ಸಿಗಬೇಕು ಎನ್ನುವುದಕ್ಕೋಸ್ಕರ 20 ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ತೆಗೆದು ಇಟ್ಟಿದ್ದೇನೆ. ಎಲ್ಲಾ 20 ಸಾವಿರ ಅರ್ಜಿಗಳನ್ನು ಮುಕ್ತಗೊಳಿಸಿ ಅವುಗಳಿಗೆ ಪರಿಹಾರ ಸಿಗುವ ಕಡೆಗೆ ಗಮನವನ್ನು ಕೊಡುವುದರ ಬಗ್ಗೆ ನಾನು ಆದ್ಯತೆಯನ್ನು ಕೊಟ್ಟಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ಬಜೆಟ್‌ನಲ್ಲಿ ಆದ್ಯತೆಯ ಪ್ರಶ್ನೆ ಬಂದಾಗ ಹೈದರಾಬಾದ್ ಕರ್ನಾಟಕದ ಬಗ್ಗೆ, ಮಲೆನಾಡು ಅಭಿವೃದ್ಧಿಯ ಬಗ್ಗೆ ಬಂದೇ ಇಲ್ಲ ಎನ್ನುವ ಮಾತನ್ನು ನಾನು ಕೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: 39 ಕೋಟಿ ರೂಪಾಯಿಗಳು ಮಾತ್ರ ಇದೆ. 29 ತಾಲ್ಲೂಕುಗಳು ಇವೆ. ನೀವು ಏನು ಹೇಳಿದ್ದೀರಿ. ಅಷ್ಟು ಇಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ನಿಮ್ಮಂತಹ ಅನುಭವವುಳ್ಳ ಹಿರಿಯರು ಅಲ್ಲಿ ಕುಳಿತು ನೀವು ಕೇಳುವಂತಹದ್ದನ್ನು ನಾವು ಕೊಡುವಂತಹ ಕಾಲ ಬಂದಾಗ, ನೀವು ನನಗೆ ಕೊಡದೇ ಇರಬಹುದು. ಆದರೆ ನಾನು ಕೊಡುವುದಕ್ಕೆ ಸಿದ್ದನಿದ್ದೇನೆ. ಏಕೆಂದರೆ ನಾನು ನಿಮಗೆ ಕೊಡುತ್ತಿಲ್ಲ. ಯಾವ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗೋಸ್ಕರ 2003–04ನೇ ಸಾಲಿನಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರೇ, ತಾವು ಗಮನಿಸಬೇಕು. ನಮ್ಮ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಹಾಗೂ ಧರ್ಮಸಿಂಗ್‌ರವರ ಕಿವಿಗೆ ಬೀಳಬೇಕೆಂದು ನಾನು ಹೇಳುತ್ತಿದ್ದೇನೆ. ಹೈದರಾಬಾದ್ ಕರ್ನಾಟಕ ಮಂಡಳಿಗೆ 2003–04ನೇ ಸಾಲಿನಲ್ಲಿ ಇಟ್ಟಿರುವುದು 29 ಕೋಟಿ ರೂಪಾಯಿಗಳು. 2004–05ನೇ ಸಾಲಿನಲ್ಲಿ 28 ಕೋಟಿ ರೂಪಾಯಿಗಳು ಇತ್ತು. 2005–06ನೇ ಸಾಲಿನಲ್ಲಿ 60 ಕೋಟಿ ರೂಪಾಯಿಗಳು. ಈ ವರ್ಷ ಸಹ ನಾನು ಈ ಸಾಲಿನಲ್ಲಿ 60 ಕೋಟಿ ರೂಪಾಯಿಗಳನ್ನು ತೆಗೆದು ಇಡುತ್ತಿದ್ದೇನೆ. ಆಯವ್ಯಯ ಪುಸ್ತಕದಲ್ಲಿ ಲೆಕ್ಕಶೀರ್ಷಿಕೆ 2515–00–800–001ನಲ್ಲಿ 43 ಕೋಟಿ 20 ಲಕ್ಷ ರೂಪಾಯಿಗಳು ಎಂದು ನಮೂದಿಸಿದ್ದೇನೆ. ಏಕೆಂದರೆ 16 ಕೋಟಿ 80 ಲಕ್ಷ ರೂಪಾಯಿಗಳನ್ನು ಎಸ್‌ಸಿಪಿ, ಟಿಎಸ್‌ಪಿಯೋಜನೆಗಳಲ್ಲಿ ಪೂಲ್ ಮಾಡುತ್ತಿದ್ದೇವೆ. ಒಟ್ಟು 60 ಕೋಟಿ ರೂಪಾಯಿಗಳನ್ನು ನಾವು ತೆಗೆದು ಇಟ್ಟಿದ್ದೇವೆ. ಇನ್ನೂ ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ಈ ಭಾಗದ ಅನೇಕ ನಮ್ಮ ಸದಸ್ಯರ ಒಟ್ಟಾರೆ ಇಚ್ಛೆ ಹೆಚ್ಚು ಹಣವನ್ನು ಕೊಡಬೇಕೆಂದು ಇದೆ. ಎಂಐಡಿಬಿಗೆ 2003–04ನೇ ಸಾಲಿನಲ್ಲಿ ನೀಡಿದ ಹಣ 13 ಕೋಟಿ 50 ಲಕ್ಷ ರೂಪಾಯಿಗಳು, 2004–05ನೇ ಸಾಲಿನಲ್ಲಿ ಸುಮಾರು 7 ಕೋಟಿ ರೂಪಾಯಿಗಳು ಎಂದರೆ ಅದು ಇಳಿಯಿತು. 2005–06ನೇ ಸಾಲಿನಲ್ಲಿ ನೀಡಿದ ಹಣ 20 ಕೋಟಿ ರೂಪಾಯಿಗಳು, ಕೊಟ್ಟಂತಹ ಹಣವೆಲ್ಲಾ ಬಾಕಿ ಬಿಲ್ಲಿಗೆ ಜಮೆಯಾಯಿತು. ನಿನ್ನೆ ನಾನು ಅಧಿಕಾರಿಗಳನ್ನು ಕರೆಸಿದ್ದೆ. ಕೆಲಸವೇನಾಗಲಿಲ್ಲ, ಕೊಟ್ಟ ದುಡ್ಡು ಹಳೆಯ ಬಾಕಿ ಉಳಿಸಿಕೊಂಡಿರುವುದಕ್ಕೆ ಜಮಾ ಆಯಿತು. ಆದರೆ ಈ ವರ್ಷ 2006–07ನೇ ಸಾಲಿನಲ್ಲಿ ನಾನು 40 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇನೆ.

ಕಳೆದ ವರ್ಷಕ್ಕೆ ನೀವು ಹೋಲಿಕೆ ಮಾಡಿದರೆ ದುಪ್ಪಟ್ಟು ಅಂದರೆ ಎರಡು ಪಟ್ಟು ಹಣವನ್ನು ನಾನು ಕೊಟ್ಟಿದ್ದೇನೆ. ಏಕೆಂದರೆ ಆ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಶಾಸಕರು ಗೌರವದಿಂದ ಆ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಬೇಕೆನ್ನುವ ದೃಷ್ಟಿಯಿಂದ ಹಾಗೆ ಮಾಡಿದ್ದೇನೆ. ಬಯಲು ಸೀಮೆ ಬಗ್ಗೆ ಈ ಬಯಲುಸೀಮೆ ಅಭಿವೃದ್ಧಿ ಬಗ್ಗೆ ರಾಜ್ಯದ ಪಾಲು 2003–04ನೇ ಸಾಲಿನಲ್ಲಿ 1ಕೋಟಿ 93 ಲಕ್ಷ ರೂ.ಗಳು ಮಾತ್ರ ಇತ್ತು ಮಾನ್ಯ ವಾಟಾಳ್ ನಾಗರಾಜ್‌ರವರೇ. 2004–05ರಲ್ಲಿ 3ಕೋಟಿ 25 ಲಕ್ಷ ರೂ.ಗಳನ್ನು ಒದಗಿಸಿದ್ದರು. 2005–06ನೇ ಸಾಲಿನಲ್ಲಿ 9.00 ಕೋಟಿ ರೂ.ಗಳನ್ನು ಒದಗಿಸಿದ್ದರು. ಅದು ಏನಾಗಿದೆ ಎಂಬುದು ನಿಮಗೆ ಗೊತ್ತಿದೆ. ಆದರೆ ಈ ವರ್ಷ 2006–07ನೇ ಸಾಲಿನಲ್ಲಿ 10.00 ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ಅದನ್ನು ಹೆಚ್ಚಿಗೆ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದು ಬಹಳ ಕಡಿಮೆಯಾಯಿತು, ಬಯಲು ಸೀಮೆಗೆ ಕೊಟ್ಟಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ರೈಲ್ವೇ ಯೋಜನೆಗೆ ರಾಜ್ಯದ ಪಾಲು 2003–04ನೇ ಸಾಲಿನಲ್ಲಿ 14.05 ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. ಇದಕ್ಕಿಂತ ಎಷ್ಟು ಹೆಚ್ಚಾಗಿದೆಯೆಂಬುದನ್ನು ಗಮನಿಸಬೇಕಾಗಿದೆ. ನೀವು ಟೀಕೆ ಮಾಡಬಹುದು, ನಮ್ಮ ಬೊಕ್ಕಸದಲ್ಲಿ ಹಣವಿದ್ದರೆ ನೀವೇನು ಮಾಡುವುದು ಅಂತ ಅಂದರೆ ಬೊಕ್ಕಸದಲ್ಲಿ ಅಭಿವೃದ್ಧಿಯಾಗುತ್ತಿದೆ, ಹಣ ಬರುತ್ತಿದೆ. ಬಂದ ಹಣವನ್ನು ಯಾವ ಆದ್ಯತೆ ಕ್ಷೇತ್ರಕ್ಕೆ ಬಿಡುಗಡೆ ಮಾಡಬೇಕೆನ್ನುವ ಬಗ್ಗೆ ಇಚ್ಛಾಶಕ್ತಿಯಿದೆಯೆಲ್ಲಾ ಅದು ಬಹಳ ಮುಖ್ಯವಾದುದು. ಆ ಕೆಲಸವನ್ನೂ ನಮ್ಮ ಸಮ್ಮಿಶ್ರ ಸರ್ಕಾರ ಮಾಡಿದೆಯೆಂದು ಬಹಳ ಹೆಮ್ಮೆಯಿಂದ ಹೇಳಲಿಚ್ಛಿಸುತ್ತೇನೆ. ರೈಲ್ವೇ ಯೋಜನೆಗೆ 2003–04 ರಲ್ಲಿ 14.05 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. 2004–05ನೇ ಸಾಲಿನಲ್ಲಿ 49.00 ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. 2005–06ನೇ ಸಾಲಿನಲ್ಲಿ ಈ ಪ್ರಸಕ್ತ ವರ್ಷದಲ್ಲಿ 45.00 ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. ಈಗ ಎಷ್ಟು ಮೊತ್ತವನ್ನು ಒದಗಿಸಿದ್ದೇವೆ ಸ್ವಾಮಿ? ಈಗ 2006–07ನೇ ಸಾಲಿನಲ್ಲಿ 95.00 ಕೋಟಿ ರೂ.ಗಳನ್ನು ನಾನು ಒದಗಿಸಿದ್ದೇನೆ. ಇನ್ನೂ ಹೆಚ್ಚು ಅಗತ್ಯವಿದ್ದರೆ ಒದಗಿಸಲಿಕ್ಕೆ ನಾವು ಸಿದ್ಧವಿದ್ದೇವೆ. ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ ನಾವು ಒದಗಿಸಿರುವ ಮೊತ್ತ ಎರಡು ಪಟ್ಟು ಹೆಚ್ಚಾಗಿದೆ. ಈ ಹಣವನ್ನು ಹಂಚಿಕೆ ಮಾಡಲಾಗಿರುವ ಯೋಜನೆಗಳು ಎಂದರೆ ಹಾಸನ–ಮಂಗಳೂರು ಗೇಜ್ ಪರಿವರ್ತನೆ, ಗದಗ–ಸೊಲ್ಲಾಪುರ ಗೇಜ್ ಪರಿವರ್ತನೆ, ಬೆಂಗಳೂರಿನ ರೈಲು ಓಡಾಟ ಸೇವೆಗಳು, ರಾಮನಗರ–ಮೈಸೂರು ರೈಲ್ವೆಯ ದ್ವಿಮಾರ್ಗ, ವಿವಿಧ ಮೇಲ್‌ಸೇತುವೆ ಹಾಗೂ ಕೆಳ ಸೇತುವೆಗಳ ನಿರ್ಮಾಣ, ತುಮಕೂರು ಶೆಟ್ಟಿಹಳ್ಳಿಯ ರೈಲ್ವೆ ಮೇಲ್ ಸೇತುವೆಯ ನಿರ್ಮಾಣ, ಹುಬ್ಬಳ್ಳಿಯ ರೈಲ್ವೆ ಸರಕು ಸಂಕೀರ್ಣದ ನಿರ್ಮಾಣಕ್ಕೆ ಜಮೀನು ಖರೀದಿ, ಬೀದರ್ ಹಾಗೂ ಗುಲ್ಬರ್ಗಾಕ್ಕೆ ಹೊಸ ರೈಲು ಮಾರ್ಗ. ಶೋಲಾಪುರ–ಗದಗ್ ರೈಲ್ವೆ ಲೈನಿಗಾಗಿ ರಾಜ್ಯಸರ್ಕಾರ ನೀಡ ಬೇಕಾಗಿದ್ದಂತಹ 20 ಕೋಟಿ 36 ಲಕ್ಷ ರೂಪಾಯಿಗಳನ್ನು ನಿನ್ನೆ ದಿವಸ ನಾನು ಬಿಡುಗಡೆ ಮಾಡಿದ್ದೇನೆ. ಅದನ್ನು ಸೇರಿಸೋಣ, ಮಾತನಾಡೋಣ. ಬಾಗಲಕೋಟೆ ಪ್ಯಾಕೇಜ್ ನಾನು ಅಲ್ಲಿ ಹೋಗಿ ಈ ಪ್ಯಾಕೇಜ್‌ಗೋಸ್ಕರ ಸತ್ಯಾಗ್ರಹ, ಚಳುವಳಿ ಮಾಡಿದ್ದೇನೆ, ಆದರೆ ಹಣ ಬಿಡುಗಡೆಯಾಗಲಿಲ್ಲ, ಅಲ್ಲಿ ರೈತರು ತಮ್ಮ ಜಮೀನುಗಳಿಗೆ ನೀರುಣಿಸಲು ತಮ್ಮ ಮೂಲ ನೆಲೆಗಳಿಂದ ದೂರವಾಗಿದ್ದಾರೆ, ಬೀದಿಪಾಲಾಗಿದ್ದಾರೆ. ಎಷ್ಟೇ ಪರಿಹಾರವನ್ನು ಕೊಟ್ಟರೂ ಸಹ ಅವರ ತ್ಯಾಗಕ್ಕೆ ಸರಿಸಮಾನವಾದಂಥದ್ದಕ್ಕೆ ಯಾವುದೂ ಇಲ್ಲವೆಂಬ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. 'ಬಾಗಲಕೋಟೆ ಪ್ಯಾಕೇಜ್' ಎಂಬ ಶಬ್ದವನ್ನು ಉಪಯೋಗಿಸದಿದ್ದರೂ ಕೂಡ ಬಾಗಲಕೋಟೆ ಅಭಿವೃದ್ಧಿಯ ಬಗ್ಗೆ ನಾವು ಬದ್ಧರಾಗಿದ್ದೇವೆ. 2005–06ನೇ ಸಾಲಿನಲ್ಲಿ ಕೃಷ್ಣ ಭಾಗ್ಯ ಜಲ ನಿಗಮಕ್ಕೋಸ್ಕರ 25.00 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ. ಜೊತೆಗೆ ಈ ವರ್ಷ ಈಗಿರುವ 25.00 ಕೋಟಿ ರೂ.ಗಳಲ್ಲದೆ, ಇನ್ನೂ 25.00 ಕೋಟಿ ರೂ.ಗಳಲ್ಲದೆ, ಇನ್ನೂ 25.00 ಕೋಟಿ ರೂ.ಗಳನ್ನು ಇನ್ನೂ ಹೆಚ್ಚಿಗೆ ಒದಗಿಸಲಿಕ್ಕೆ ನಾನು ಬದ್ಧನಾಗಿದ್ದೇನೆ. ಬಾಗಲಕೋಟೆ ಅಭಿವೃದ್ಧಿಯ ಬಗ್ಗೆ ನಾವು ಕಂಕಣಬದ್ಧರಾಗಿದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಭದ್ರಾ ಯೋಜನೆ ಅತ್ಯಂತ ಹಳೆಯ ನೀರಾವರಿ ಯೋಜನೆ, ಈ ಯೋಜನೆಯ ಕಾಲುವೆಗಳನ್ನು ನವೀಕರಿಸಲಿಕ್ಕೆ 2005–06ನೇ ಸಾಲಿನಲ್ಲಿ 10.00 ಕೋಟಿ ರೂ.ಗಳನ್ನು ನಾನು

ಒದಗಿಸಿದ್ದೇನೆ. 2006-07ನೇ ಸಾಲಿನಲ್ಲಿ ಈ ಯೋಜನೆ ತ್ವರಿತವಾಗಿ ಮುಗಿಯಬೇಕೆಂದು ಹೇಳಿ 45ಕೋಟಿ 15 ಲಕ್ಷ ರೂ.ಗಳನ್ನು ನಾವು ತೆಗೆದಿರಿಸಿದ್ದೇವೆ. ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ನಮ್ಮ ಸರ್ಕಾರ ಹೊಸ ಯೋಜನೆ ಮಾಡಿದೆ. ಸಾರ್ವಜನಿಕವಾಗಿ ವಿಶೇಷವಾಗಿ ಮಹಿಳೆಯರು ಯೋಜನೆಗೆ ವಿಶೇಷವಾಗಿ ಅಪಾರವಾದ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಬಜೆಟ್‌ನಲ್ಲಿ ಹೇಳಿದಂತೆ ಬಡತನದ ಕಾರಣಕ್ಕಾಗಿ ಅಥವಾ ಅಭದ್ರತೆಯ ಭಾವನೆಯಿಂದಲೋ ಎಷ್ಟೋ ಜನ ಹೆಣ್ಣುಮಕ್ಕಳ ಜನನವಾದಾಗ ಸಂತೋಷಪಡುವುದರ ಬದಲಾಗಿ ಕಣ್ಣೀರು ಇಡುವಂತಹ ದಾರುಣ ದೃಶ್ಯವನ್ನು ನಾವು ನೋಡುತ್ತಿದ್ದೇವೆ. ಬಡತನ ರೇಖೆಗಿಂತ ಕೆಳಗೆ ಇರುವ ಮನೆಗಳಲ್ಲಿ ಹುಟ್ಟುವಂತಹ ಹೆಣ್ಣುಮಗು ಶಾಪವಾಗಿ ಪರಿಣಾಮವಾಗುತ್ತಿರುವುದು, ಮತ್ತು ಆ ಕುಟುಂಬದವರು ಕಣ್ಣೀರು ಹಾಕುವುದನ್ನು ನಾವು ನೋಡುತ್ತಿದ್ದೇವೆ. ಅದಕ್ಕಾಗಿ ಈ ದೇಶದಲ್ಲಿ, ಯಾವುದೇ ರಾಜ್ಯಗಳಲ್ಲಿ ಬಹುಶಃ ಈ ಬಗ್ಗೆ ಚಿಂತನೆ ನಡೆದಿರಲಿಕ್ಕಿಲ್ಲ. ಬಡತನದ ರೇಖೆಗಿಂತ ಕೆಳಗಿರುವಂತಹ ಮನೆಗಳಲ್ಲಿ ಹುಟ್ಟುವ ಪ್ರತಿಯೊಂದು ಹೆಣ್ಣುಮಗುವಿಗೆ 10,000 ರೂಪಾಯಿಗಳನ್ನು ಡಿಪಾಸಿಟ್ ಮಾಡುವಂಥಾದ್ದು, ನಾನು ಈ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಅಧಿಕಾರಿಗಳೊಂದಿಗೆ ಸಮಾಲೋಚಿಸಿದ್ದೇನೆ. ಏಪ್ರಿಲ್ 1 ರಿಂದ ಹುಟ್ಟುವಂತಹ ಹೆಣ್ಣುಮಗುವನ್ನು ಅಲ್ಲಿನ ಅಂಗನವಾಡಿ ಕಾರ್ಯಕರ್ತೆಯರು ತತ್‌ಕ್ಷಣದಿಂದ ಐಡೆಂಟಿಫೈ ಮಾಡಬೇಕೆಂಬ ಸೂಚನೆಯನ್ನು ಕಳುಹಿಸುತ್ತಿದ್ದೇವೆ. ಅಂದರೆ ತಕ್ಷಣ ಆ ಯೋಜನೆ ಅವರಿಗೆ ತಲುಪಬೇಕು. ಇಲ್ಲಿ ಈ ಯೋಜನೆ ಬಗ್ಗೆ ಸದಸ್ಯರೇನು ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ, ಇನ್‌ಶೂರೆನ್ಸ್ ಕವರ್ ಆಗಬೇಕು, ಭದ್ರತೆ ಆಗಬೇಕು, ಆಕಸ್ಮಾತ್ ಹೆಣ್ಣುಮಗು ತೀರಿಕೊಂಡರೆ ಮುಂದೇನು – ಈ ಎಲ್ಲಾ ಚಿಂತನೆಗಳನ್ನೊಳಗೊಂಡಂತೆ ಚಿಂತನೆ ಮಾಡುತ್ತಿದ್ದೇವೆ. ಆ ಇನ್‌ಶೂರೆನ್ಸ್ ಕವರ್ ಆಗಿ ಬೇರೆ ರೂಪದಲ್ಲಿ ಹಣವಿಟ್ಟು ಆ ಮಗುವಿಗೆ 18 ವರ್ಷವಾದಾಗ 50-60 ಸಾವಿರ ರೂ.ಗಳು ಆ ಮಗುವಿಗೆ ಕೈಗೆ ಸಿಗಬೇಕೆನ್ನುವ ದೃಷ್ಟಿಯಿಂದ ನಿಮ್ಮೆಲ್ಲರ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅದಕ್ಕೆ ಪೂರಕವಾಗುವ ರೀತಿಯಲ್ಲಿ ಈ ಯೋಜನೆಯನ್ನು ತಯಾರು ಮಾಡುತ್ತೇವೆಂಬ ಭರವಸೆಯನ್ನು ಈ ಮನೆಯಲ್ಲಿ ನಾನು ಕೊಡ ಬಯಸುತ್ತೇನೆ. ಮಾನ್ಯ ದೇಶಪಾಂಡೆಯವರು, ರಾಜೇಂದ್ರನ್‌ರವರು, ಆ ಕಡೆ ಮಾತನಾಡಿದ ಎಲ್ಲರೂ ಸಹ ಆರೋಗ್ಯ ವಿಮೆ ಕವರ್ ಆಗುವುದು ಒಳ್ಳೆಯದು ಎಂಬ ಸಲಹೆಯನ್ನು ಕೊಟ್ಟಿದ್ದಾರೆ. ಅದು ಬಹಳ ಒಳ್ಳೆಯ ಸೂಕ್ತವಾದ ಸಲಹೆ. ಆ ದಿಕ್ಕಿನಲ್ಲಿ ನಾವು ಚಿಂತನೆ ಮಾಡುತ್ತಿದ್ದೇವೆ ಎನ್ನುವಂಥ ಮಾತನ್ನು ಹೇಳಲಿಚ್ಛಿಸುತ್ತೇನೆ. ಸ್ವಾಮಿ, ಈಗ ಯಾವ್ಯಾವ ಬಾಬಿನಲ್ಲಿ ಹಣ ಕೊಟ್ಟಿದ್ದೇವೆ ಎಂದರೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಬಾಬಿಗೆ 2003-04ನೇ ಸಾಲಿನಲ್ಲಿ ಒದಗಿಸಿದ ಹಣ 45 ಕೋಟಿ 38 ಲಕ್ಷ ರೂ.ಗಳು, 2004-05ನೇ ಸಾಲಿನಲ್ಲಿ ಇಟ್ಟ ಹಣ 693.96 ಕೋಟಿ ರೂ.ಗಳು, 2005-06ನೇ ಸಾಲಿನಲ್ಲಿ ಹೋದ ವರ್ಷ ಇಟ್ಟಿದ್ದ ಹಣ 879 ಕೋಟಿ 78 ಲಕ್ಷ ರೂ.ಗಳು. ಈ ವರ್ಷ ಅಂದರೆ 2006-07ನೇ ಸಾಲಿನಲ್ಲಿ ಈ ಇಲಾಖೆಗೆ 961.95 ಕೋಟಿ ರೂ.ಗಳನ್ನು ನಾವು ಒದಗಿಸಿದ್ದೇವೆ. ಅಂದರೆ ಅದಕ್ಕೆ ಕೊರತೆ ಮಾಡುವಂಥ ಕೆಲಸವನ್ನು ಮಾಡಿಲ್ಲ. 2005-06ನೇ ಸಾಲಿನಲ್ಲಿ ಜಿಲ್ಲಾ ವಲಯಕ್ಕೆ 2,500.00 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿತ್ತು. ಆದರೆ ಸಚಿವ ಸಂಪುಟದ ಉಪ ಸಮಿತಿಯ ತೀರ್ಮಾನದಿಂದ ಬಂಡವಾಳ ಯೋಜನೆಗಳು ಮತ್ತು ವಿಶೇಷ ನೆರವಿನ ಯೋಜನೆಗಳನ್ನು

ರಾಜ್ಯ ವಲಯಕ್ಕೆ ವಾಪಸ್ಸು ಮಾಡುವಂಥ ಸಂದರ್ಭ ಬಂದಿದ್ದರಿಂದ 2005–06ನೇ ಸಾಲಿನಲ್ಲಿ ಜಿಲ್ಲಾ ವಲಯದ ಅನುದಾನ 2,002 ಕೋಟಿ ರೂ.ಗಳಾಗಿತ್ತು. ಆದರೆ ಈ ವರ್ಷ ಜಿಲ್ಲಾ ವಲಯಕ್ಕೆ ಬಜೆಟ್ ಹಣವನ್ನು 2,002 ಕೋಟಿ ರೂ.ಗಳಿಂದ 2, 354 ಕೋಟಿ ರೂ.ಗಳವರೆಗೆ ಹೆಚ್ಚಿಸಿದ್ದೇನೆ, 170 ಯೋಜನೆಗಳನ್ನು ಜಿಲ್ಲಾ ವಲಯಕ್ಕಾಗಿ ವರ್ಗಾವಣೆ ಮಾಡಲಾಗಿದೆ. ಇಷ್ಟು ದೊಡ್ಡ ಮೊತ್ತವನ್ನು ಕೊಡುವಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ಕುಡಿಯುವ ನೀರಿನ ಯೋಜನೆಗಳು, ರಾಜ್ಯದಲ್ಲಿ ಕುಡಿಯುವ ನೀರು ಹಾಗೂ ನೈರ್ಮಲ್ಯ ಯೋಜನೆಗೆ ಈ ವರ್ಷ 1,029 ಕೋಟಿ 34 ಲಕ್ಷ ರೂ.ಗಳನ್ನು ನಾನು ಒದಗಿಸಿದ್ದೇನೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚು ಹಣವನ್ನು ನಾವು ಕೊಟ್ಟಿದ್ದೇವೆ. ಇದಿಷ್ಟೇ ಅಲ್ಲ, ಕುಡಿಯುವ ನೀರಿಗೆ ನಾವು ಆದ್ಯತೆಯನ್ನು ಕೊಡುತ್ತೇವೆ. ಹುಬ್ಬಳ್ಳಿಯ ಶಾಸಕರು ಗಡಿಬಿಡಿ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಅದು ಬಿಜಾಪುರ, ಶಿವಮೊಗ್ಗ ಆಗಿರಬಹುದು ಅಥವಾ ಯಾವುದೇ ನಗರ ಪ್ರದೇಶಗಳಿಗೆ ಕುಡಿಯುವ ನೀರಿನ ಯೋಜನೆಗಳಿರಬಹುದು. ಅದಕ್ಕೆ ಹಣಕಾಸನ್ನು ಒದಗಿಸುತ್ತಿದ್ದೇವೆ, ಕೆಲಸವನ್ನು ಪ್ರಾರಂಭಿಸುತ್ತೇವೆ, ಅದಕ್ಕೆ ಬೇಕಾದ ಫಾರ್ಮಾಲಿಟೀಸ್ ಮುಗಿಯದೆ ಫೈಲ್‌ಗಳು ಪೆಂಡಿಂಗ್ ಬಿದ್ದಿವೆ, ಅದೆಲ್ಲವನ್ನೂ ತರಾತುರಿಯಲ್ಲಿ ತರಿಸಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡುತ್ತೇವೆಂಬ ಮಾತನ್ನು ಹೇಳಿದ್ದೇನೆ. ಕೃಷಿ ವಲಯದ ಬಗ್ಗೆ ನಮ್ಮ ಸ್ನೇಹಿತರು ಬಹಳ ಜನ ಮಾತನಾಡಿದರು, ಬಹುಶಃ ನನಗನ್ನಿಸುತ್ತದೆ. ನನಗೇನಾದರೂ ಸ್ವಾತಂತ್ರ್ಯ ಇದ್ದರೆ, ನೀವೆಲ್ಲಾ ಒಪ್ಪಿಗೆ ಕೊಟ್ಟಿದ್ದರೆ ಬರುವಂಥ ನಮ್ಮ ಆದಾಯದಲ್ಲಿ 75% ಪೂರ್ತಿ ಕೃಷಿ ವಲಯಕ್ಕೆ ಯಡಿಯೂರಪ್ಪನವರೇ ಕೊಡಿ ಎಂದಿದ್ದರೆ ನಾನೇನೂ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಆದರೆ ಇವತ್ತು ಆ ಸ್ವಾತಂತ್ರ್ಯ ನನಗಿಲ್ಲ, ಎಲ್ಲಾ ವಲಯಗಳಿಗೂ ಆದ್ಯತೆಯನ್ನು ಕೊಡಬೇಕಾದಂಥ ಒಂದು ವ್ಯವಸ್ಥೆಯಲ್ಲಿ ನಾವಿರುವುದರಿಂದ ಸ್ವಾತಂತ್ರ್ಯ ಬಂದು 57–58 ವರ್ಷಗಳಾದರೂ ಸಹ ಕೃಷಿ ವಲಯವನ್ನು ಕಡೆಗಣಿಸಿ, ಆ ಬ್ರಿಟಿಷರ ಕಾಲದಲ್ಲಿಯೂ ಸಾಲಗಾರರು, ಸ್ವಾತಂತ್ರ್ಯ ಬಂದು 57–58 ವರ್ಷಗಳಾದರೂ ನಮ್ಮ ರೈತರು ಸಾಲಗಾರರು. ಅವರಿಗೆ ನಾವು ಏನು ಕೊಡುತ್ತಿದ್ದೇವೆ ಸ್ವಾಮಿ? ಅವರಿಗೆ ಕೊಡುತ್ತಿರುವಂಥ ಪರಿಹಾರ ಯಾವ ಮೂಲೆಗೆ ಸಾಲುತ್ತದೆ? ಇವತ್ತು ಅವನಿಗೆ ಬೇಕಾಗಿರುವುದು ಬಿತ್ತನೆ ಸಮಯದಲ್ಲಿ ಉತ್ತಮವಾದ ಬಿತ್ತನೆ ಬೀಜ, ಸರಿಯಾದ ಸಮಯಕ್ಕೆ ರಸಗೊಬ್ಬರ, ಅವನು ಬೆಳೆದಂತಹ ಬೆಳೆಗೆ ಯೋಗ್ಯ ಬೆಲೆ, ಅವನಿಗೆ ಅಗತ್ಯವಿರುವಂಥ ಸಾಲ ಸವಲತ್ತುಗಳು, ಇಷ್ಟಾದರೆ ಅವನೇನೂ ಭಿಕ್ಷೆ ಕೇಳುವುದಿಲ್ಲ. ಆದರೆ ಇವತ್ತು ಅದಾಗುತ್ತಿಲ್ಲ. ಆದರೆ ನಮ್ಮ ಸರ್ಕಾರ ಇದಕ್ಕೆ ಬದ್ಧವಾಗಿದೆ. ಕಳಪೆ ಬೀಜವನ್ನು ಕೊಟ್ಟು ಟೋಪಿ ಹಾಕುವಂಥವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಅವರಿಗೆ ಶಿಕ್ಷೆ ಕೊಡುವುದಕ್ಕೆ ನಾವು ನೀವು ಸೇರಿ ಏನು ಬೇಕಾದರೂ ಬಿಗಿ ಮಾಡೋಣ. ಅವನ್ಯಾರೋ ಒಬ್ಬ ಕಳಪೆ ಬೀಜವನ್ನು ಕೊಡುತ್ತಾನೆ, ಅವನ ಹೆಂಡತಿ ಮಕ್ಕಳು ಬೆವರು ಸುರಿಸಿ ದುಡಿಯುತ್ತಾರೆ. ಆದರೆ ಸರಿಯಾದಂಥ ಬೆಳೆಯನ್ನು ಬೆಳೆಯಲಿಲ್ಲ, ಎಂದರೆ ಅವನಿಗೆ ಒಂದು ವರ್ಷ ಸರ್ವನಾಶವಾಗುತ್ತದೆ. ಡೂಪ್ಲಿಕೇಟ್ ಸೀಡ್ಸ್ ಬರುವಂಥಾದ್ದು ಪ್ರಾರಂಭವಾಗಿದೆ. ನಮ್ಮ ಕೃಷಿ ಇಲಾಖಾಧಿಕಾರಿಗಳು ಏನು ಮಾಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ. ಕಾನೂನು ಕ್ರಮ ತೆಗೆದುಕೊಳ್ಳಲಿಕ್ಕೆ ಅವರು ಸಿದ್ಧವಿಲ್ಲ. ಇನ್ನು ಮುಂದಿನ ದಿವಸಗಳಲ್ಲಿ ಇದು ನಡೆಯಲಿಕ್ಕೆ ನಾವು ಬಿಡುವುದಿಲ್ಲ. ಇದರ ಬಗ್ಗೆ ಬಿಗಿ ನಿಲುವನ್ನು ತೆಗೆದುಕೊಳ್ಳುತ್ತೇವೆ. ನಾನು ಹೇಳುತ್ತಿದ್ದೇನೆ, ಕೃಷಿ ಇಲಾಖೆಗೆ

2003–04ನೇ ಸಾಲಿನಲ್ಲಿ 329 ಕೋಟಿ 51 ಲಕ್ಷ ರೂ.ಗಳನ್ನು ಒದಗಿಸಲಾಗಿತ್ತು. 2004–05ನೇ ಸಾಲಿನಲ್ಲಿ 483 ಕೋಟಿ 12 ಲಕ್ಷ ರೂ.ಗಳನ್ನು ಒದಗಿಸಲಾಗಿತ್ತು, 2005–06ನೇ ಸಾಲಿನಲ್ಲಿ ನಾವು ಬಹಳ ಮಾತಾನಾಡುತ್ತಿದ್ದೆವು, 375.08 ಕೋಟಿ ರೂ.ಗಳನ್ನು ಒದದಿಸಿದ್ದರೆಂದರೆ ಹಿಂದಿನ ವರ್ಷಕ್ಕಿಂತ ಕಡಿಮೆಯಾಯಿತು. 2004–05ನೇ ಸಾಲಿನಲ್ಲಿ 483 ಕೋಟಿ 12. ಲಕ್ಷ ರೂ., 2005–06ನೇ ಸಾಲಿನಲ್ಲಿ 375 ಕೋಟಿ 08 ಲಕ್ಷ ರೂ.ಗಳು, ಆದರೆ ಈ ವರ್ಷ 2006–07ನೇ ಸಾಲಿನಲ್ಲಿ ಕೃಷಿ ವಲಯಕ್ಕೆ 699 ಕೋಟಿ 66 ಲಕ್ಷ ರೂ.ಗಳನ್ನು ನಾನು ಕೊಟ್ಟಿದ್ದೇನೆ. ಅಂದರೆ ಇದನ್ನು ಗಣನೀಯವಾಗಿ ಹೆಚ್ಚು ಮಾಡಿದ್ದೇನೆ. ಬರುವಂಥ ದಿವಸಗಳಲ್ಲಿ ಅದಕ್ಕೆ ಇನ್ನೂ ಹೆಚ್ಚು ಒತ್ತನ್ನು ಕೊಡುತ್ತೇವೆನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಕೆಲವು ಬಹಳಷ್ಟು ಚರ್ಚೆಯಾಯಿತು. ನಮ್ಮ ನುರಿತ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅದೇ ಇಲಾಖೆಯನ್ನು ನೋಡಿಕೊಂಡವರು. ಮಾನ್ಯ ಧರ್ಮಸಿಂಗ್‌ರವರೂ ಸಹ ಇಲ್ಲಿದ್ದಾರೆ. ನೀರಾವರಿ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ನುರಿತ ಅನೇಕ ಪಂಡಿತರು ಇಲ್ಲಿದ್ದಾರೆ. ಆದರೆ ನಾನು ನನ್ನ ಬಜೆಟ್‌ನಲ್ಲಿ ಕೊಟ್ಟಂತಹ ಅಂಕಿ ಅಂಶಗಳು ಸರಿ ಇಲ್ಲ ಎನ್ನುವ ರೀತಿ ತರ್ಕ ಮಾಡುವ ಮಟ್ಟಕ್ಕೆ ಹೋಯಿತು. ನಮ್ಮ ಮಾಜಿ ಹಣಕಾಸಿನ ಸಚಿವರಾಗಿದ್ದಂತಹ ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ನಮಗೆ ಗೌರವವಿದೆ. ಅವರು ಏನಾದರೂ ಸ್ವಲ್ಪ ಹೆಚ್ಚು ಕಡಿಮೆ ಹೇಳಬೇಕು ಅಂತ ಹೇಳಿದರೋ ಏನೋ ನನಗೆ ಗೊತ್ತಿಲ್ಲ ಅವರಿಗೆ ಏಕೆ ಅರ್ಥವಾಗಲಿಲ್ಲ ಈ ಸಂಗತಿ ಅಂತ. ನಾನು ನಿಮಗೆ ಹೇಳುತ್ತೇನೆ, ನೀರಾವರಿ ಯೋಜನೆಗೆ 2004–05ನೇ ಸಾಲಿನಲ್ಲಿ 3282.40 ಕೋಟಿ ರೂಪಾಯಿಗಳನ್ನು ಒದಗಿಸಿತ್ತು. 2005–06ನೇ ಸಾಲಿನಲ್ಲಿ 3942.41 ಕೋಟಿ ರೂ. ಒದಗಿಸಿತ್ತು. ಈ ವರ್ಷ 2006–07ನೇ ಸಾಲಿನಲ್ಲಿ 4280 ಕೋಟಿ ರೂ.ಯನ್ನು ಒದಗಿಸಿದ್ದೇವೆ. ಇದಲ್ಲದೇ ನಮ್ಮ ಆ ಪ್ರದೇಶದ ನೀರಾವರಿ, ಕಾವೇರಿ, ಕೃಷ್ಣಾ ಬೇಸಿನ್‌ನಲ್ಲಿರುವವರು ಗಮನಿಸಬೇಕಾದ ಅಂಶ ಅಂದರೆ ನೀರಾವರಿ ಕಾಮಗಾರಿಗಳಿಗೆ ಇದು ಬಹಳ ಮುಖ್ಯ. ನೀರಾವರಿ ಕಾಮಗಾರಿಗಳಿಗೆ 2005–06ನೇ ಸಾಲಿನಲ್ಲಿ ಒದಗಿಸಿದ್ದ ಹಣ 2068.44 ಕೋಟಿ ರೂ. ಈ ವರ್ಷ 2006–07ನೇ ಸಾಲಿನಲ್ಲಿ 2972.27 ಕೋಟಿ ರೂಗಳನ್ನು ಒದಗಿಸಿದ್ದೇನೆ. ನೀವು 2068.44 ಕೋಟಿ ರೂಪಾಯಿಗಳಿಗೆ ನೀವು ಹೋಲಿಕೆ ಮಾಡಿದರೆ 44 ಪರ್ಸೆಂಟ್ ಏರಿಕೆಯಾಗಿದೆ. ಇದರ ಬಗ್ಗೆ ತರ್ಕ, ಚರ್ಚೆ, ಇದು ಏಕೋ ಏನೋ ನನಗೆ ಅರ್ಥವಾಗುತ್ತಿಲ್ಲ. ಏಕೆ ಈ ತರ್ಕ ಅಂತ. ಸಾಮಾನ್ಯ ಮಗುವಿಗೆ 5ನೇ ತರಗತಿಯಲ್ಲಿ ಓದುವಂತಹ ಮಗುವಿಗೆ ಹೇಳಿದರೆ ಅರ್ಥವಾಗುತ್ತದೆ. ವರ್ಕ್ಸ್‌ಗೆ ಹೋದ ವರ್ಷ ಇಷ್ಟು ಕೊಟ್ಟಿತ್ತು, ಈ ವರ್ಷ ಇಷ್ಟು ಕೊಟ್ಟಿದ್ದೇವೆ. ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಮಾನ್ಯ ಯಡಿಯೂರಪ್ಪನವರೇ, ಅಂತ ಹೇಳುವುದರ ಬದಲಾಗಿ ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ .....

ಶ್ರೀ ಬಿ. ಎಸ್. ಯಡಿಯೂರಪ್ಪ : ಆಮೇಲೆ ಹೇಳಿ, ನಾನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲಾ ಇಲ್ಲಾ ರೆಕಾರ್ಡ್ಸ್ ಸರಿ ಇರಬೇಕು. ಈ ರೀತಿಯಾಗಿ ರಾಂಗ್ ಇಂಪ್ರೆಷನ್ ಹೋಗಬಾರದು. ಈ ರೀತಿಯಾಗಿ ರಾಂಗ್ ಫಿಗರ್ಸ್ ಹಿಡಿದುಕೊಂಡು ಹೇಳಿದರೆ ಹೇಗೆ? ತಾವು ಆ ಬಜೆಟ್‌ನ್ನು ತಂದು ನೋಡಿ. ಎಷ್ಟು ಪರ್ಸೆಂಟ್ ಕಡಿಮೆಯಾಗಿದೆ ಎನ್ನತಕ್ಕಂಥಾದ್ದು ಗೊತ್ತಾಗುತ್ತದೆ. ನೀವೇ ಒಂದು ರೂಪಾಯಿ ಮೇಲೆ ಎಷ್ಟು ಖರ್ಚು ಮಾಡಿದೆ

ಅಂತ ಪರ್ಸೆಂಟೇಜ್ ಹಾಕಿ. ತಾವು ಅಲಾಟ್‌ಮೆಂಟ್, ಖರ್ಚು ಎರಡೂ ನೋಡಿಕೊಂಡು ಹೇಳಿ, ಅದು ಬಿಟ್ಟು ಮಕ್ಕಳಿಗೆ ಅರ್ಥವಾಗುತ್ತದೆ, ನಿಮಗೆ ಅರ್ಥವಾಗುವುದಿಲ್ಲವೇ ಎನ್ನುವ ರೀತಿಯಲ್ಲಿ ಮಾತನಾಡಿದರೆ ನಾವು ಸುಮ್ಮನೆ ಕುಳಿತು ಕೇಳುವುದಕ್ಕೆ ಆಗುತ್ತದೆಯೇ?

ಬಜೆಟ್ ಎಕ್ಸ್‌ಪೆಂಡೆಚರ್ ಇನ್ನೂ ಮಾರ್ಚ್‌ನಲ್ಲಿ ಆಗುವುದು. ಈಗ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಹಾಗಾದರೆ ಒಂದು ಕೆಲಸ ಮಾಡಿ, ನಾನು ನೀರಾವರಿ ಕಾಮಗಾರಿಗಳ ಕೋಷ್ಟಕವನ್ನು ಓದುತ್ತೇನೆ. ಯಾರಾದರೂ ಅದನ್ನು ಡಿಸ್‌ಪ್ಯೂಟ್ ಮಾಡಲಿ, ನಾನು ಒಂದು ಕ್ಷಣ ಈ ಕುರ್ಚಿಯಲ್ಲಿ ಕುಳಿತುಕೊಳ್ಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಈಗ ಇಟ್ಟಿರುವ ಬಂಡವಾಳ ಖರ್ಚಾಗುವುದು 2006–07ನೇ ಸಾಲಿಗೆ, ಈಗ ಖರ್ಚಾಗಿರುವ ಹಣವನ್ನು ಕಂಪೇರ್ ಮಾಡಿ 140 ಪರ್ಸೆಂಟ್ ಹೆಚ್ಚು ಮಾಡಿದ್ದೇವೆಂದು ಹೇಳಿದರೆ ಹೇಗೆ? ಹೋದ ವರ್ಷದ ಬಜೆಟ್‌ನ್ನೂ ತಾವು ತೆಗೆದುಕೊಳ್ಳಿ. ಮಾನ್ಯ ಎಸ್. ಎಂ. ಕೃಷ್ಣಾರವರ ಕಾಲದ ಬಜೆಟ್ ತೆಗೆದುಕೊಳ್ಳಿ, ನೀರಾವರಿದು 31 ಪರ್ಸೆಂಟ್‌ನಿಂದ 33 ಪರ್ಸೆಂಟ್‌ವರೆಗೂ ಹೆಚ್ಚು ಒಂದು ರೂಪಾಯಿ ಡಿಸ್ಟ್ರಿಬ್ಯೂಟ್ ಮಾಡಬೇಕಾಗಿದ್ದರೆ 33 ಪೈಸೆ ಅದರೊಳಗೆ ನೀರಾವರಿಗೆ ಆ ಕಾಲದಲ್ಲಿ ಕೊಟ್ಟಿದ್ದೇವೆ. ಅವರು ಇಲ್ಲ ಅಂತ ಹೇಳಲಿ ಬೇಕಾದರೆ. ಮಾನ್ಯ ಸಿದ್ದರಾಮಯ್ಯನವರು ಒಂದು ಕಡಿಮೆ ಮಾಡಿದರು, 24 ಪರ್ಸೆಂಟ್ ಕೊಟ್ಟರು. ಪುನಃ ನಾವು ಇದು ಸರಿಯಲ್ಲ ಅಂತ ಹೇಳಿದ ಮೇಲೆ ಹೋದ ವರ್ಷ ಅವರು 29 ಪರ್ಸೆಂಟ್ ಕೊಟ್ಟರು. ಇವತ್ತು ನೀವು ನಿಮ್ಮ ಪುಸ್ತಕ ತೆಗೆದುಕೊಂಡು ನೋಡಿ, ನೀವು ಇವತ್ತು ಒಂದು ರೂಪಾಯಿಯಲ್ಲಿ 26 ಪರ್ಸೆಂಟ್ ಕೊಟ್ಟಿದ್ದೀರಿ. ಇದು ಕಡಿಮೆಯೋ ಹೆಚ್ಚೋ, ನಮಗೆ ಬುದ್ಧಿ ಇಲ್ಲವೋ ಅಥವಾ ನಾವು ಮಕ್ಕಳೋ ಅಥವಾ ನೀವು ಮಕ್ಕಳೋ ಎನ್ನುವುದನ್ನು ನೀವು ತೀರ್ಮಾನ ಮಾಡಿ. ಎರಡನೆಯದಾಗಿ, ಈಗ ಮಾರ್ಚ್ ಕೊನೆಗೆ ಎಕ್ಸ್‌ಪೆಂಡೆಚರ್ ಆಗುತ್ತದೆ. ಟೋಟಲ್ ಅಮೌಂಟ್ ಬರುತ್ತದೆ. ಬಂದ ಮೇಲೆ ಇದು ಎಕ್ಸ್‌ಪೆಂಡೇಚರ್. ನಾನು ಇಷ್ಟು ಎಕ್ಸ್‌ಪೆಂಡೇಚರ್ ಮಾಡುತ್ತಿದ್ದೇನೆಂದು ಹೇಳುತ್ತಿದ್ದೀರಿ. ಅದು ಯಾವಾಗ? ಆದ ಮೇಲೆ ಆ ಎಕ್ಸ್‌ಪೆಂಡೇಚರ್. ಆದರೆ ಇವತ್ತು ಅಲೋಕೇಷನ್ ಏನು ಇದೆ ಅದು ಮುಖ್ಯವೇ ಹೊರತಾಗಿ ನಾನು ಮುಂದೆ ಇಷ್ಟು ಮಾಡುತ್ತೇನೆಂದರೆ, ನೀವು ಅಷ್ಟು ಹಣ ಅಲೋಕೇಶನನ್ನೇ ಮಾಡಿಲ್ಲ. ನೀವು 33 ಪರ್ಸೆಂಟ್, 31 ಪರ್ಸೆಂಟ್, 29 ಪರ್ಸೆಂಟ್ ಹಿಂದೆ ಮಾಡಿ ಈಗ 26 ಪರ್ಸೆಂಟ್ ಕೊಟ್ಟು ನಾವು ಜಾಸ್ತಿ ಹಣ ಕೊಟ್ಟಿದ್ದೇವೆಂದು ಹೇಳಿಕೊಳ್ಳುತ್ತಾ ಹೋದರೆ ನಾವು ಸುಮ್ಮನೇ ಕೇಳಿಸಿಕೊಂಡು ಕೂರಬೇಕಾ?

ಶ್ರೀ ಬಿ. ಎಸ್. ಯಡಿಯೂರಪ್ಪ: ಸ್ವಾಮಿ, ನೀವು ಸುಮ್ಮನೇ ಕೂರಿ ಅಂತ ಹೇಳುವುದಕ್ಕೆ ನಾನು ಯಾರು? ಈ ಮನೆಯಲ್ಲಿ ಪ್ರತಿಯೊಂದು ವಿಷಯ ಚರ್ಚೆಯಾಗಬೇಕು. ಆ ರೈತನಿಗೆ ವಾಸ್ತವಿಕ ಸತ್ಯಾಂಶ ತಿಳಿಯಬೇಕು. ನಾನು ಏನು ಹೇಳಿದೆ ಎಂದರೆ ನೀರಾವರಿ ಕಾಮಗಾರಿಗಳಿಗೆ 2005–06ನೇ ಸಾಲಿನಲ್ಲಿ ಒದಗಿಸಲಾಗಿದ್ದ ಅನುದಾನ 2068.44 ಕೋಟಿ ರೂ. ನೀರಾವರಿ ವಲಯ ಅಂತ ನಾನು ಹೇಳುತ್ತಿಲ್ಲ. ನೀರಾವರಿ ಕಾಮಗಾರಿಗೆ. ಈ ವರ್ಷ 2006–07ನೇ ಸಾಲಿಗೆ 2972.27 ಕೋಟಿ ರೂ. ಒದಗಿಸಿದ್ದೇನೆ. ನೀರಾವರಿ ಕಾಮಗಾರಿಗೆ ಒದಗಿಸಿರುವಂತಹ ಹಣ ಕಳೆದ ವರ್ಷಕ್ಕೆ ಹೋಲಿಸಿದರೆ ಶೇಕಡ 44ರಷ್ಟು ಹೆಚ್ಚಳ ಆಗಿದೆ. ನಾನು ಡಿಟೇಲ್ಸ್ ಹೇಳುತ್ತೇನೆ. ಕಾಮಗಾರಿಗಳ

ವಿವರ. ತುಲನಾತ್ಮಕ ಚಿತ್ರ. ನಾನು ಇದನ್ನು ಎಲ್ಲರಿಗೂ ಕಳುಹಿಸಿಕೊಡುತ್ತೇನೆ. 135 ಬಂಡವಾಳ ವೆಚ್ಚಗಳು ಅಂತ ಇದೆ. 2005-06ನೇ ಸಾಲಿನಲ್ಲಿ 821.75 ಕೋಟಿ ರೂ ಬಿಡುಗಡೆ ಮಾಡಿದ್ದೇವೆ. 2006-07ನೇ ಸಾಲಿನಲ್ಲಿ 1373.06 ಕೋಟಿ ರೂ ನಾವು ಇಟ್ಟಿದ್ದೇವೆ. ಭಾರೀ ನೀರಾವರಿ ಕಾಮಗಾರಿಗೆ 139 ಹೆಡ್ ಆಫ್ ಅಕೌಂಟ್‌ನಲ್ಲಿ 509.10 ಕೋಟಿ ರೂ. ಹೋದ ವರ್ಷ ಇಟ್ಟಿದ್ದರು. ಈ ವರ್ಷ 663.75 ಕೋಟಿ ರೂ ತೆಗೆದು ಇಟ್ಟಿದ್ದೇನೆ. ಸಣ್ಣ ನೀರಾವರಿ ಕಾಮಗಾರಿ ಅಂತ ಮಧ್ಯೆ ಬರುತ್ತದೆ. ಇದು ಹೋದ ಸಲ ಇರಲಿಲ್ಲ. ಈ ಸಾರಿ 2.88 ಕೋಟಿ ರೂ. ತೆಗೆದು ಇಟ್ಟಿದ್ದೇನೆ. ನಿರ್ವಹಣೆಗೆ ಹೋದ ಸಲ 62.32 ಕೋಟಿ ರೂ. ಇದ್ದರೆ, ಈ ವರ್ಷ 65.47 ಕೋಟಿ ರೂ. ತೆಗೆದು ಇಟ್ಟಿದ್ದೇನೆ. ನಬಾರ್ಡ್ ಕಾಮಗಾರಿಗೆ ಹೋದ ವರ್ಷ 75.21 ಕೋಟಿ ರೂ ಕೊಟ್ಟಿದ್ದರೆ, ಈ ಬಾರಿ 167.29 ಕೋಟಿ ರೂ. ಕೊಟ್ಟಿದ್ದೇನೆ. ಐ.ಇ.ಬಿ.ಯಲ್ಲಿ ...

ಶ್ರೀ ಎನ್. ಧರ್ಮಸಿಂಗ್ (ಅವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ತಾವು ಕ್ಲಾರಿಫಿಕೇಶನ್ ಕೊಡುತ್ತಿಲ್ಲ. 20ನೇ ತಾರೀಖು ಬಜೆಟ್ ಮಂಡನೆ ಮಾಡತಕ್ಕಂಥ ಕಾಲದಲ್ಲಿ ಯಾವ ರೀತಿಯಾಗಿ ಹೇಳಿದ್ದೀರಿ ಅದೇ ರೀತಿಯಾಗಿ ರೀ ಪ್ರೊಡ್ಯೂಸ್ ಮಾಡುತ್ತಿದ್ದೀರಿ. ಇವತ್ತು ಮಾನ್ಯ ಉಪ ಮುಖ್ಯಮಂತ್ರಿಗಳೇ, ತಾವು ಏನು ಹೆಚ್ಚಿನ ಹಣವನ್ನು ಒದಗಿಸಿ ಕೊಡುತ್ತೇನೆ ಎನ್ನುವ ಮಾತನ್ನು ಹೇಳುತ್ತಿದ್ದೀರಲ್ಲಾ, ಅದಕ್ಕೆ ನಾನು ಏನೇನು ಮಾತನಾಡಿದ್ದೇನೆ, ಅದೇ ರೀತಿ ಮಾನ್ಯ ಖರ್ಗೆಯವರು ಮಾತನಾಡಿದ್ದಾರೆ, ಮಾನ್ಯ ಸಿದ್ದರಾಮಯ್ಯನವರು ಮಾತನಾಡಿದ್ದಾರೆ, ಇತರೇ ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಇವತ್ತು ಬಜೆಟ್ ಮಂಡನೆಯಲ್ಲಿ ನೀವು ಮಾಡಿದಂತಹ ಭಾಷಣಕ್ಕೆ ಯಾವ ರೀತಿಯಾಗಿ ನಾವು ಈ ಸದನದಲ್ಲಿ ಮಾತನಾಡಿದ್ದೇವೆ ಅದರ ಬಗ್ಗೆ ಹೇಳಬೇಕು. ತಾವು ಏನು ಹೇಳುತ್ತಿದ್ದೀರಿ? ಇದು ಕೋರ್ ಸೆಕ್ಟರ್ ಅಲಾಟ್‌ಮೆಂಟ್. ನಾವು ಏನು ಮಾಡುತ್ತಿದ್ದೇವೆ ಅಂದರೆ ಹೋದ ಸಲ 13ನೇ ಜನವರಿಯಲ್ಲಿ ನಾವು ಪ್ಲಾನ್ ಔಟ್ ಲೇ ನಲ್ಲಿ 16,166.00, ಕೋಟಿ ಇದ್ದರೆ ಇವತ್ತು 800 ಕೋಟಿ ರೂ ಫಸ್ಟ್ ಟೈಮ್ ಪ್ಲಾನ್ ಡಿಸ್‌ಕರ್ಷನ್‌ಗೆ ಹೋದಾಗ 19.2 % ಇಲ್ಲಿಯವರೆಗೂ ಯಾರ ಕಾಲದಲ್ಲಿಯೂ ಸಹ ಇಷ್ಟು ಹೆಚ್ಚು ಮಾಡಿಲ್ಲ. ನಾವು ಮಾಡಿದ್ದೇವೆ. ಅದಕ್ಕೆ ತಾವು ಏನು ಮಾಡುತ್ತಿದ್ದೀರಿ ಎಂದರೆ 40 ದಿವಸಗಳ ಹಿಂದೆ ತಾವು ಬಂದ ಮೇಲೆ ಹೆಚ್ಚಿನ ಹಣ ಒದಗಿಸಿ ಕೊಡುತ್ತೇವೆ, ಹೆಚ್ಚಿನ ಹಣ ಒದಗಿಸಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಈಗಾಗಲೇ ಕೃಷಿಯಲ್ಲಿ 6.33 ಪರ್ಸೆಂಟ್ ಇತ್ತು. ಈ ಸಲ ಎಷ್ಟು ಕೊಟ್ಟಿದ್ದೀರಿ. 5.7 ಪರ್ಸೆಂಟ್ ನಾನು ಈಗಾಗಲೇ ಸದನದಲ್ಲಿ ಹೇಳಿದ್ದೇನೆ. ಇದರ ಬಗ್ಗೆ ಹೇಳಿ. ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಹಣ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಪರ್ಸೆಂಟೇಜ್ ವೈಜ್ 4.51 ಪರ್ಸೆಂಟ್ ಆದರೆ, ಇವತ್ತು ನೀವು ಕೊಟ್ಟಿರುವುದು 4.1 ಪರ್ಸೆಂಟ್. ಇವತ್ತು ನೀರಾವರಿಗೆ ಕಳೆದ ಸಲ 29 ಪರ್ಸೆಂಟ್ ಇದ್ದರೆ ಈ ವರ್ಷ 26 ಪರ್ಸೆಂಟ್ ಆಗಿದೆ. ಈ ಬಗ್ಗೆ ತಾವು ಉತ್ತರ ಕೊಡಬೇಕಲ್ಲಾ. ತಾವು ಭರಾಟೆಯಲ್ಲಿ ಯಾವ ರೀತಿಯಲ್ಲಿ ಇಷ್ಟು ಹೊತ್ತು 20ನೇ ತಾರೀಖು ಬಜೆಟ್ ಭಾಷಣ ಯಾವ ರೀತಿಯಲ್ಲಿ ಓದಿದಿರಿ ಅದೇ ರೀತಿ ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಪ್ಯಾಕೇಜ್‌ಗಳನ್ನು ಘೋಷಣೆ ಮಾಡಿ ಹಣ ಬಿಡುಗಡೆ ಮಾಡಲಿಲ್ಲ ...

ಶ್ರೀ ಎನ್. ಧರ್ಮಸಿಂಗ್: ನಾವು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇವೆ. ನಮ್ಮನ್ನು ಕೇಳುತ್ತಿಲ್ಲ. ನಿಮಗೆ ಕೇಳಿದಾಗ ನೀವು ಉತ್ತರ ಕೊಡಿ.

ಶ್ರೀ ಅರಗ ಜ್ಞಾನೇಂದ್ರ: 3000 ಕೋಟಿ ರೂಪಾಯಿಗಳ ಪ್ಯಾಕೇಟ್ ಘೋಷಣೆ ಮಾಡಿ ಎಷ್ಟು ಹಣ ಬಿಡುಗಡೆ ಮಾಡಿದಿರಿ? ಸತ್ಯವನ್ನು ಒಪ್ಪಿಕೊಳ್ಳಬೇಕಲ್ಲಾ ನೀವು?

ಶ್ರೀ ಎನ್. ಧರ್ಮಸಿಂಗ್: ತಾವು ಬಜೆಟ್ ಮಂಡನೆ ಮಾಡಿ ಯಾವ ಯಾವ ವಲಯಗಳಿಗೆ ಆದ್ಯತೆ ಕೊಡಬೇಕು ಅಂತ ಹೇಳುವಾಗ ಕೋರ್ ಸೆಕ್ಟರ್‌ಗಳ ಬಗ್ಗೆ ನಾನು ಹೇಳಿದ್ದೇನೆ. ಅದರ ಬಗ್ಗೆ ಇವತ್ತು ತಾವು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾವು ಅಡ್ಡಿಪಡಿಸಬೇಕು ಅಂತ ಅಲ್ಲ. ರೆಕಾರ್ಡ್ ಸ್ಟ್ರೈಟ್ ಇರಲಿ ಅಂತ ಬಾಯಿ ಇದ್ದವನೇ ಬರಗಾಲದಲ್ಲಿ ಬದುಕಿದ ಎನ್ನತಕ್ಕಂಥ ರೀತಿಯಲ್ಲಿ ನೀವು ಹೇಳಿದ್ದು ಸರಿ, ನಾವು ಮಾಡಿದ್ದೂ ಸರಿ ಎನ್ನತಕ್ಕಂಥ ರೀತಿಯಲ್ಲಿ ಬರಬಾರದು. ಅಂಕಿ ಅಂಶಗಳನ್ನು ತಾವೇನು ಟೈಪ್ ಮಾಡಿ ಪುಸ್ತಕ ಮಾಡಿ ಕೊಟ್ಟಿದ್ದೀರಿ, ಆ ಪ್ರಕಾರ, ಅದರ ಆಧಾರದ ಮೇಲೆ ಹೋದ ವರ್ಷದ ಕಂಪ್ಯಾರಿಸನ್, ಈ ಹಿಂದೆ ಮೂರು ವರ್ಷದಲ್ಲಾದ ಕಂಪ್ಯಾರಿಸನ್, ಅದು ಪವರ್ ಸೆಕ್ಟರ್ ಇರಲಿ, ಅಗ್ರಿಕಲ್ಚರ್ ಸೆಕ್ಟರ್ ಇರಲಿ, ಇರಗೇಷನ್ ಇರಲಿ ಹೇಳಿದ್ದೇವೆ ಅಷ್ಟೆ.. ಅದಕ್ಕೆ ತಾವು ಹೇಳಿದರೆ ಸರಿ, ಹೇಳದೆ ಇದ್ದರೂ ಸುಮ್ಮನೆ ಕುಳಿತಿರುತ್ತೇವೆ, ಸಂದರ್ಭ ಬಂದಾಗ ನಾವು ಹೇಳುತ್ತೇವೆ.

ಶ್ರೀ. ಅರಗಜ್ಞಾನೇಂದ್ರ: ಸರ್, ನೀವು ಪ್ಯಾಕೇಜ್ ಘೋಷಣೆ ಮಾಡಿಕೊಂಡು ಇಡೀ ಕರ್ನಾಟಕ ತಿರುಗಿದರಲ್ಲಾ ಆ ಪ್ಯಾಕೇಜ್‌ಗಳಿಗೆ ಹೆಚ್ಚು ಹೆಚ್ಚು ಪ್ರಚಾರ ಕೊಟ್ಟಿರಲ್ಲಾ, ಆ ಪ್ಯಾಕೇಜ್‌ಗಳಿಗೆ ಎಷ್ಟೆಷ್ಟು ಬಿಡುಗಡೆ ಮಾಡಿದ್ದೇವೆಂದು ನೀವು ಹೇಳಿ, ಸಾವಿರ ಕೋಟಿ ರೂ, ಎಂಟನೂರು ಕೋಟಿ ರೂ ಅಂತ ಹೊಡೆದಿದ್ದೇ ಹೊಡೆದಿದ್ದಲ್ಲಾ ಏನೋ ಅದಕ್ಕೆ ನೀವು ಎಷ್ಟು ಹಣ ಬಿಡುಗಡೆ ಮಾಡಿದಿರಿ, ಯಾವುದಕ್ಕೆ ಬಿಡುಗಡೆ ಮಾಡಿದಿರಿ. ಹೇಳಿ ಒಂದು ಶ್ರಮ ಶಕ್ತಿ ಅಂತ ಹೇಳಿದರಲ್ಲಾ ಅದೇನಾಯಿತು? ನೀವು ಬರೀ ಘೋಷಣೆ ಮಾಡಿಕೊಂಡು 20 ತಿಂಗಳು ಕಾಲಹರಣ ಮಾಡಿದಿರಿ .... ಈವತ್ತು ನಾವು ಹಣ ಕೊಡುತ್ತಿದ್ದೇವೆ.

(ಗೊಂದಲ)

ಶ್ರೀ. ಸಿ. ಟಿ. ರವಿ: ಒಲ್ಲದ ಗಂಡ ಮೊಸರಲ್ಲಿ ಕಲ್ಲು ಹುಡುಕಿದಂತೆ ತಪ್ಪು ಹುಡುಕುವುದಕ್ಕೆ ನೀವು ಹೊರಟಿದ್ದೀರಿ, ನಿಮ್ಮ ಹಣೆಬರಹವೆಲ್ಲಾ ಗೊತ್ತು, ನಿಮಗೆ ಕೇಳುವ ತಾಳ್ಮೆಯೇ ಇಲ್ಲ, ನಿಮಗೆ, ಈಗ ಮೆಣಸಿನ ಕಾಯಿ ಹಾಕಿದಂತಾಗಿದೆ, ಅದಕ್ಕೆ ಹೀಗೆ ಮಾತನಾಡುತ್ತಿದ್ದೀರಿ.

ಡಾ : ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಯಾವ ನಿಯಮದಡಿ ತೆಗೆದುಕೊಂಡಿದ್ದೀರಿ, ಹೇಳಿದ್ದನ್ನೇ ಹೇಳಿದರೆ ಏನು ಉಪಯೋಗವಿದೆ?

ಅಧ್ಯಕ್ಷರು: ಅವರು ಉತ್ತರ ಕೊಡುತ್ತಿದ್ದಾರೆ. ನೋಡಿ ಈಗ ನೀವು ಮಧ್ಯೆ ಮಧ್ಯೆ ಮಾತನಾಡಿದರೆ ನಾನು ಹೊರಗೆ ಕಳುಹಿಸಬೇಕಾಗುತ್ತದೆ.

ಶ್ರೀ. ಬಿ. ಎಸ್. ಯಡಿಯೂರಪ್ಪ: ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಮ್ರವಾಗಿ ನಮ್ಮ ಸದಸ್ಯರಲ್ಲಿ ಪ್ರಾರ್ಥನೆ ಮಾಡುವುದು ಏನೆಂದರೆ, ದಯಮಾಡಿ ನಾನು ಪೂರ್ಣ ಮಾಡುವುದಕ್ಕೆ ಬಿಡಿ, ನಾನು ಈಲ್ಡ್ ಆಗದೇ ಇದ್ದಾಗ ಮಧ್ಯದಲ್ಲಿ ಎದ್ದು ನನಗೆ ಡಿಸ್ಟರ್ಬ್ ಮಾಡಿದರೆ ನನ್ನ ಥಾಟ್ಸ್‌ಗೆ ತೊಂದರೆಯಾಗುತ್ತದೆ. ಇಷ್ಟು ನೀವು ಸಹಕಾರ ಕೊಟ್ಟರೆ ಸಾಕು. ನಾನು ಇಷ್ಟೇ ಹೇಳುತ್ತೇನೆ. ನೀರಾವರಿ ಕಾಮಗಾರಿಗಳಿಗೆ ಒದಗಿಸಿರುವಂತಹ ಹಣ ಕಳೆದ ವರ್ಷಕ್ಕೆ ಹೋಲಿಸಿದಾಗ ಶೇಕಡಾ 44 ರಷ್ಟು ಹೆಚ್ಚು ಕೊಟ್ಟಿದ್ದೇನೆ. 2005–06ನೇ ಸಾಲಿನಲ್ಲಿ ಒಟ್ಟು 2068 ಕೋಟಿ 44 ಲಕ್ಷ ರೂಪಾಯಿಗಳನ್ನು ಕಾಮಗಾರಿಗೆ ಬಿಡುಗಡೆ ಮಾಡಿದ್ದರೆ, ಈ ವರ್ಷ ನಾನು 2972.27 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ಇದು ಹೋದ ವರ್ಷಕ್ಕಿಂತ ಶೇಕಡಾ 44ರಷ್ಟು ಹೆಚ್ಚಳವೆಂದು ಹೇಳಿದ್ದೇನೆ. ಈ ವರ್ಷ ನಾವು ಈಗಾಗಲೇ 39 ಭಾರಿ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಯೋಚನೆ ಮಾಡಿದ್ದೇವೆ, ಮತ್ತು ಕಾರ್ಯಪ್ರವೃತ್ತರಾಗಿದ್ದೇವೆ. ಕರ್ನಾಟಕ ಮತ್ತು ಕಾವೇರಿ ನಿಗಮಗಳ ವ್ಯಾಪ್ತಿ ಯೋಜನೆಗಳಲ್ಲದ ಭದ್ರಾ ಮತ್ತು ತುಂಗಭದ್ರಾ ಯೋಜನೆಗಳ ಆಧುನೀಕರಣವನ್ನೂ ಸಹ ನಾವು ಕೈಗೆತ್ತಿಕೊಳ್ಳುತ್ತಿದ್ದೇವೆ, ದೀರ್ಘಕಾಲ ನೆನೆಗುದಿಗೆ ಬಿದ್ದಿರುವಂತಹ ಕಳಸ ಬಂಡೂರಿನಾಲಾ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಹಿಂದೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ನಾವು ಪ್ರಧಾನಮಂತ್ರಿಯವರನ್ನು ಅನೇಕ ಸಾರಿ ಭೇಟಿ ಮಾಡಿದ್ದೆವು. ಈಗ ನಾಲ್ಕನೇ ತಾರೀಖು ದಿನಾಂಕ ನಿಗದಿಯಾಗಿದೆ, ಗೋವಾ ಮುಖ್ಯಮಂತ್ರಿಗಳನ್ನು ಕರೆಯಿಸಿ ಪ್ರಧಾನಿಯವರ ಜೊತೆ ಕುಳಿತು ಚರ್ಚೆ ಮಾಡಲಿದ್ದೇವೆ, ಪ್ರಧಾನ ಮಂತ್ರಿಗಳು ಬಹಳ ಸ್ಪಷ್ಟವಾಗಿ, ಇದನ್ನು ಮಾಡಿಕೊಡುತ್ತೇನೆ, ಇದು ಕುಡಿಯುವ ನೀರಿನ ಸಮಸ್ಯೆ ಇರುವಂತಹದ್ದು ಎಂದು ನಿರ್ದಿಷ್ಟವಾಗಿ ಹೇಳಿದ್ದಾರೆ. ನಾಲ್ಕನೇ ತಾರೀಖು ಸಭೆ ಇದೆ, ಆ ಸಂದರ್ಭದಲ್ಲಿ ಈ ಕಳಸ ಬಂಡೂರಿನಾಲೆಗೆ ನೀರಾವರಿ ಯೋಜನೆಗೆ ಅನುಮತಿಯನ್ನು ಪಡೆದು ಅದನ್ನು ಅನುಷ್ಠಾನಗೊಳಿಸುವುದಕ್ಕೆ ನಮ್ಮ ಶಕ್ತಿಮೀರಿ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆ ಮತ್ತು ಅದಕ್ಕೆ ನಾವು ಬದ್ಧರಾಗಿದ್ದೇವೆನ್ನುವ ಮಾತನ್ನು ಹೇಳುತ್ತೇನೆ. ಈ ಗಂಗಾಕಲ್ಯಾಣ ಯೋಜನೆಗಳ ವಿದ್ಯುದ್ಧೀಕರಣದ ಬಗ್ಗೆ, ನಮ್ಮ ಇಲಾಖೆಗೆ ಏನಾಗಿದೆಯೋ ಗೊತ್ತಿಲ್ಲ. ಆ ಬಡವರಿಗೆಂದು ಬೋರ್‌ವೆಲ್ ತೆಗೆದೆವು. ಕೋಟ್ಯಾಂತರ ರೂಪಾಯಿಯನ್ನು ಡ್ರಾ ಮಾಡಿದೆವು. ಆ ಡೂಪ್ಲಿಕೇಟ್ ಮೋಟಾರ್‌ಗಳನ್ನು ಹಾಕಿದೆವು. ಮತ್ತು ಡೂಪ್ಲಿಕೇಟ್ ಉಪಕರಣಗಳನ್ನು ಹಾಕಿದೆವು. ಆದರೆ ಅವರಿಗೆ ವಿದ್ಯುತ್ ಕೊಡಲಿಲ್ಲ. ಇದನ್ನು ಅನೇಕ ಭಾರಿ ಎರಡೂ ಕಡೆ ಒಟ್ಟಾಗಿ ನಾವು ಚರ್ಚೆ ಮಾಡಿದ್ದೇವೆ. ಆದ್ದರಿಂದ ಅದನ್ನು ತುದಿ ಮುಟ್ಟಿಸುವಂತಹ ಚಿಂತನೆ ಮಾಡಬೇಕಾಗಿದೆ. ವಿದ್ಯುದ್ದೀಕರಣಗೊಳ್ಳಬೇಕಾದ ಕೊಳವೆ ಬಾವಿಗಳು ಈ ರೀತಿ ಇದ್ದಾವೆ, ಪರಿಶಿಷ್ಟ ಜಾತಿ : ವರ್ಗ 9381 ಇದಕ್ಕೆ 5 ಕೋಟಿ ರೂ. ಬೇಕಾಗಿದೆ. ಹಿಂದುಳಿದ ವರ್ಗ 1141 ಇದ್ದು ಇದಕ್ಕೆ 72 ಲಕ್ಷ ರೂ. ಬೇಕಾಗಿದೆ. ಅಲ್ಪಸಂಖ್ಯಾತರು 1000, ಕೊಳವೆ ಬಾವಿಗಳು ಇದಕ್ಕೆ 70 ಲಕ್ಷ ರೂ. ಬೇಕಾಗಿದೆ. ರಾಜ್ಯಾದ್ಯಂತ ಈ ಗಂಗಾ ಕಲ್ಯಾಣ ಯೋಜನೆಯಡಿ ಬರುವ ಸುಮಾರು 11800 ಕೊಳವೆಬಾವಿಗಳಿಗೆ ಈವರೆಗೆ ವಿದ್ಯುದ್ದೀಕರಣವಾಗಿಲ್ಲ. ಈ ಕೊಳವೆ ಬಾವಿಗಳನ್ನು ಕೊರೆದಿದ್ದೇವೆ, ಖರ್ಚು ಮಾಡಿದ್ದೇವೆ, ಮೂರ್‍ನಾಲ್ಕು ವರ್ಷವಾಗಿದೆ. ಆದರೆ ವಿದ್ಯುತ್ ಸಂಪರ್ಕವಾಗಿಲ್ಲ, ಈ ಎಲ್ಲಾ ಕೊಳವೆ ಬಾವಿಗಳಿಗೆ

ಇನ್ನೂ ಮೂರು ತಿಂಗಳೊಳಗಾಗಿ ವಿದ್ಯುತ್ ಸಂಪರ್ಕ ಒದಗಿಸಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ, ಇಲಾಖೆಯವರಿಗೆ ನಾವು ಸೂಚನೆ ಕೊಟ್ಟಿದ್ದೇವೆ, ಅದಕ್ಕೆ ಅಗತ್ಯವಿರುವ ಸಂಪೂರ್ಣ ಹಣವನ್ನು ಬಜೆಟ್‌ನಲ್ಲಿ ಅಳವಡಿಸಿಕೊಂಡು ಅವಕಾಶ ಮಾಡಿಕೊಟ್ಟಿದ್ದೇವೆ. ಆದುದರಿಂದ ತತ್‌ಕ್ಷಣ ಈ 11800 ಬಡಜನರೇನು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಕನಸು ಕಾಣುತ್ತಿದ್ದಾರೆ, ನನ್ನ ಹೊಲಕ್ಕೆ ನೀರು ಬರುತ್ತದೆ ಎಂದೇನು ಎರಡು ವರ್ಷದಿಂದ ಜಾತಕಪಕ್ಷಿಯಂತೆ ಕಾಯುತ್ತಿದ್ದಾರೆ. ಅವರಿಗೇನಾದರೂ ಪರಿಹಾರ ಹುಡುಕಬೇಕೆನ್ನುವ ನಿಲುವನ್ನು ನಾವು ತೆಗೆದುಕೊಂಡಿದ್ದೇವೆ. ಮತ್ತು ಅದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇನೆ. ಈ ಮೊರಾರ್ಜಿ ವಸತಿ ಶಾಲೆಗಳ ನಿರ್ವಹಣೆಯ ಮತ್ತು ಕಾಮಗಾರಿಗೆ ಒದಗಿಸುತ್ತಿರುವ ಅನುದಾನ. 2003–04ನೇ ಸಾಲಿನಲ್ಲಿ 2656 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಅಂದರೆ 26 ಕೋಟಿ 56 ಲಕ್ಷ ಇಟ್ಟಿದ್ದೇವೆ, 2004–05ನೇ ಸಾಲಿನಲ್ಲಿ 3942 ಲಕ್ಷ ಇಟ್ಟಿದ್ದಾರೆ. 2005–06ನೇ ಸಾಲಿನಲ್ಲಿ 30 ಕೋಟಿ 37 ಲಕ್ಷ ಇಟ್ಟಿದ್ದೇವೆ. ಈ ವರ್ಷ 2006–07ನೇ ಸಾಲಿನಲ್ಲಿ 47 ಕೋಟಿ ರೂಪಾಯಿಗಳನ್ನು ಮೊರಾರ್ಜಿ ಶಾಲೆಗಳನ್ನು ಪೂರ್ಣ ಮಾಡಬೇಕೆನ್ನುವ ದೃಷ್ಟಿಯಿಂದ ಇಟ್ಟಿದ್ದೇವೆ. ಏತನೀರಾವರಿ, ಇದೊಂದು ಕರ್ಮಕಥೆ. ಲಿಫ್ಟ್ ಇರಿಗೇಷನ್ ಮಾಡಿದೆವು. ಆದರೆ ಆ ವಿದ್ಯುತ್‌ಬಿಲ್ ಕಟ್ಟಲಿಲ್ಲ, ಅದು ನೆನೆಗುದಿಗೆಗೆ ಬಿದ್ದಿದೆ. ವಿವಿಧ ಏತನೀರಾವರಿಗೆ ಸಂಬಂಧಿಸಿದಂತೆ ಸುಮಾರು 11 ಕೋಟಿ ರೂಪಾಯಿಗಳ ವಿದ್ಯುತ್ ಬಿಲ್ ಬಾಕಿ ಉಳಿದಿದೆ ಎಂದು ಸುಮಾರು ಅಂದಾಜು ಮಾಡಿದ್ದೇನೆ. ಲಿಫ್ಟ್ ಇರಿಗೇಷನ್‌ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ನೀರು ಮಾತ್ರ ರೈತರ ಹೊಲಕ್ಕೆ ಬರುತ್ತಿಲ್ಲ, ಸರ್ಕಾರದ ವತಿಯಿಂದ ಹಣವನ್ನು ಬಿಡುಗಡೆ ಮಾಡಿ ತುಂಬುವಂತಹ ಕೆಲಸ ಮಾಡುತ್ತಿದ್ದೇವೆ. ಆ ಲಿಫ್ಟ್ ಇರಿಗೇಷನ್ ಪ್ರಾರಂಭವಾಗಬೇಕು ರೈತನ ಹೊಲಕ್ಕೆ ನೀರು ಬರಬೇಕು ಎಂದು ಈ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇನೆ. ಶಿಕ್ಷಣ ಇಲಾಖೆಗೆ 2003–04 ನೇ ಸಾಲಿಗೆ 3609 ಕೋಟಿ 93 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ, 2004–05 ಸಾಲಿನಲ್ಲಿ 4183 ಕೋಟಿ 86 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೆವು. 2005–06ನೇ ಸಾಲಿನಲ್ಲಿ 4620 ಕೋಟಿ 76 ಲಕ್ಷ ರೂ. ಒದಗಿಸಲಾಗಿದೆ, ಈ ವರ್ಷ 2006–07ನೇ ಸಾಲಿನಲ್ಲಿ 5103 ಕೋಟಿ 27 ಲಕ್ಷ ರೂ. ಒದಗಿಸಿ ಹೆಚ್ಚು ಅನುದಾನವನ್ನು ಕೊಟಿದ್ದೇವೆ. ನೀವೆಲ್ಲಾ ಕಾತರದಿಂದ ಕೇಳುವುದಕ್ಕೆ ಮುಂಚೆಯೇ ಮಾಡಿರುವಂತಹ ಒಂದು ಕೆಲಸವೆಂದರೆ ನಮ್ಮ ಶಾಸಕರ ನಿಧಿ. 50 ಲಕ್ಷ ರೂಪಾಯಿ ಕಾಮಗಾರಿಗೆ ನೀವು ಉಪಯೋಗ ಮಾಡುತ್ತಿದ್ದೀರಿ ಅಷ್ಟು ನಾವು ಶಾಸಕರ ನಿಧಿಗೆ ಕೊಟ್ಟಿದ್ದೇವೆ. 50 ಲಕ್ಷ ರೂಪಾಯಿಗಳನ್ನು ಒಬ್ಬೊಬ್ಬ ಶಾಸಕರಿಗೆ ಕೊಟ್ಟಿದ್ದೆವು ಈ ವರ್ಷ ಇನ್ನೂ 50 ಲಕ್ಷ ರೂಪಾಯಿಗಳನ್ನು ಪಿಡಬ್ಲ್ಯೂ ರಸ್ತೆಗೆಂದು ನಾವು ಕೊಟ್ಟಿದ್ದೇವೆ. ಎಲ್ಲಾ ಶಾಸಕರೆಲ್ಲಾ ನೀವು ಒಮ್ಮತದ ಅಭಿಪ್ರಾಯವನ್ನು ಆ ರೀತಿ ಕಂಡೀಷನ್ ಹಾಕದೆ ಕೊಡಬೇಕೆಂದು ಕೊಟ್ಟಿದ್ದೀರಿ. ಅದಕ್ಕೋಸ್ಕರ ಒಂದು ಕೋಟಿ ರೂಪಾಯಿ ಶಾಸಕರ ನಿಧಿಯಿಂದ ಪರಿವರ್ತನೆ ಮಾಡಿ 50 ಲಕ್ಷ ರೂಪಾಯಿ ರಸ್ತೆ ಕಾಮಗಾರಿಗೆ ಆ ಕಂಡೀಷನ್ ಆಧಾರದ ಮೇಲೆ ನೀವು ಉಪಯೋಗಿಸಲೇ ಬೇಕು, ಅದನ್ನು ಪಿಡಬ್ಲ್ಯೂಡಿಗೆ ಮಾಡಿ, ಗ್ರಾಮೀಣ ರಸ್ತೆಗಳಿಗೆ ಮಾಡಿ, ನಗರ ಪ್ರದೇಶಗಳ ರಸ್ತೆಗಳಿಗೆ ಉಪಯೋಗ ಮಾಡಿ, ಆ ಸ್ವಾತಂತ್ರ್ಯ ಶಾಸಕರುಗಳಿಗೆ ಬಿಟ್ಟಿದ್ದು. 50 ಲಕ್ಷ ರೂಪಾಯಿಗೆ ಬದಲಾಗಿ ನಾವು ಒಂದು ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇವೆ, ಅದರ ಸದುಪಯೋಗವನ್ನು ನಮ್ಮ ಶಾಸಕರು ಮಾಡಿಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಏನಾದರೂ ನಿಮಗೆ ಗೌರವ ಇದೆಯೇನ್ರಿ? ಕುಳಿತುಕೊಂಡೇ ನೀವು ಮಾತನಾಡುವುದು, ಗಲಾಟೆ ಮಾಡಿದರೆ ಹೇಗೆ? ದಯವಿಟ್ಟು ಕುಳಿತುಕೊಳ್ಳಿ ಯಾರೂ ಮಾತನಾಡಬಾರದು ನಿಮಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾಜಿ ಶಾಸಕರ ಮತ್ತು ಕುಟುಂಬ ವರ್ಗದವರ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡುವ ಸಂಬಂಧ 2005 ರಲ್ಲಿ ಕಾಯಿದೆ ಜಾರಿಯಾಗಿದೆ. ಆ ನಿಯಮಾವಳಿಗಳನ್ನು ರೂಪಿಸುತ್ತಿದ್ದೇವೆ. ಸದ್ಯದಲ್ಲೇ ಇದನ್ನು ಜಾರಿಗೆ ತಂದು, ಮಾಜಿ ಶಾಸಕರ ಹಾಗೂ ಅವರ ಕುಟುಂಬವರ್ಗದವರ ವೈದ್ಯಕೀಯ ವೆಚ್ಚವನ್ನು ಸಹ ಸರ್ಕಾರವೇ ಭರಿಸುತ್ತದೆ. ಇದಕ್ಕೆ ಸೂಕ್ತವಾದ ತಿದ್ದುಪಡಿಯನ್ನು ತರುತ್ತಿದ್ದೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತಿದ್ದೇನೆ. 5ನೇ ವೇತನ ಆಯೋಗದ ಬಗ್ಗೆ, ನಾನು ಒಂದು ಸ್ಪಷ್ಟನೆಯನ್ನು ಕೊಡುವುದಕ್ಕೆ ಇಚ್ಚೆಪಡುತ್ತೇನೆ, ನಮ್ಮ ಸರ್ಕಾರಿ ನೌಕರರು ಕಾತುರದಿಂದ ನೋಡುತ್ತಿರುತ್ತಾರೆ. 5ನೇ ವೇತನ ಆಯೋಗವು ನೀಡಿರುವ ಮಧ್ಯಂತರ ವರದಿಯಲ್ಲಿನ ಶಿಫಾರಸ್ಸುಗಳ ಅನುಷ್ಠಾನದ ವಿಚಾರ, ಸಚಿವ ಸಂಪುಟದ ಮುಂದಿದೆ. ನಿನ್ನೆ ನಾವು ಸಚಿವಸಂಪುಟದ ಸಭೆಯಲ್ಲಿ ಚರ್ಚೆ ಮಾಡಬೇಕಾಗಿತ್ತು, ಬೇರೆ ಯಾವುದು ಅನಿವಾರ್ಯ ಕಾರಣದಿಂದ ಅದು ಮುಂದಕ್ಕೆ ಹೋಗಿದೆ. ಈ ಆಯೋಗದ ಶಿಫಾರಸ್ಸುಗಳು ಜಾರಿಗೆ ಬರಬೇಕಾದರೆ 550 ಕೋಟಿ ರೂಪಾಯಿಗಳ ಅಗತ್ಯವಿದೆ. ಈ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ಸಚಿವಸಂಪುಟ ತೀರ್ಮಾನ ತೆಗೆದುಕೊಂಡು ಆ ಬಗ್ಗೆ, ಮುಂದೇನು ಸವಲತ್ತುಗಳನ್ನು ಕೊಡಬೇಕೆಂಬುದನ್ನು ಈ ಸರ್ಕಾರಿ ನೌಕರರಿಗೆ ನಾವು ತಿಳಿಸುವವರಿದ್ದೇವೆ. ನಾವು ಅವರ ಜೊತೆಯಲ್ಲಿದ್ದೇವೆ. ಈ ಸರ್ಕಾರ ನಿಮ್ಮ ಜೊತೆಯಲ್ಲಿದೆ ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಅವರಿಗೆ ಕೊಡುವುದಕ್ಕೆ ಇಚ್ಚೆಪಡುತ್ತೇನೆ.

ಇನ್ನು ಸುಧಾರಣಾ ಕ್ರಮಗಳು. ಈ ಮುಂಗಡಪತ್ರದಲ್ಲಿ ಘೋಷಿಸಿರುವ ಕಾರ್ಯಕ್ರಮಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳಬೇಕು ಎಂಬುದು ನಮ್ಮ ಧ್ಯೇಯ, ನಮ್ಮಿಬ್ಬರ ಅಪೇಕ್ಷೆ. ಬಜೆಟ್‌ನಲ್ಲಿ ಹಂಚಿಕೆಯಾದ ಹಣ ಸಮರ್ಪಕವಾಗಿ ವಿನಿಯೋಗವಾಗಬೇಕು ಮತ್ತು ಫಲಾನುಭವಿಗಳಿಗೆ ತಲುಪಬೇಕು ಎಂಬುದು ನಮ್ಮ ಹೆಬ್ಬಯಕೆ. ಈ ಹಿನ್ನೆಲೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಕಾರ್ಯಕ್ರಮದ ಅನುಷ್ಠಾನದ ಪ್ರಗತಿ ಬಗ್ಗೆ ವ್ಯವಸ್ಥಿತವಾದ ಒಂದು ಪರಿಶೀಲನೆಗೆ ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಿದೆ. ಮೂರು ತಿಂಗಳಿಗೊಮ್ಮೆ ನಮ್ಮೆಲ್ಲಾ ಶಾಸಕರನ್ನು ಕರೆದು ಅವರ ಜತೆ ಸಮಾಲೋಚನೆ ಮಾಡಿ ವರ್ಷದ ಕೊನೆಯಲ್ಲ ಮೂರು ತಿಂಗಳಲ್ಲೇ ಏನು ಪ್ರಗತಿಯಾಗಿದೆ ಯಾವುದರಲ್ಲಿ ಕೊರತೆಯಾಗಿದೆ ಎಂದು ನೋಡುವುದು. ಆಯಾ ತ್ರೈಮಾಸಿಕಗಳಲ್ಲಿ ಬಿಡುಗಡೆಯಾದ ಹಣ ಆಯಾ ತ್ರೈಮಾಸಿಕದಲ್ಲೇ ವೆಚ್ಚವಾಗಬೇಕು, ವರ್ಷದ ಕೊನೆಯಲ್ಲಲ್ಲ, ಆ ಮೂರು ತಿಂಗಳಲ್ಲಿ ಬಿಡುಗಡೆಯಾದ ಹಣ ಸಮರ್ಪಕವಾಗಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಹೋಗಬೇಕು, ಕ್ವಾಲಿಟಿ ವರ್ಕ್ ಆಗಬೇಕು. ತಲುಪಿತು ಅಂತ ಲೆಕ್ಕ ತೋರಿಸುವುದಲ್ಲ, ಅದು ತಲುಪಿರಬೇಕು. ಆರ್ಥಿಕ ವರ್ಷಾಂತ್ಯದಲ್ಲಿ ಹಣ ಬಿಡುಗಡೆ ಮಾಡುವಂತಹ ಹಳೇ ಪದ್ಧತಿಗೆ ಇತಿಶ್ರೀ ಹಾಡಬೇಕು ಅಂತ ನಾನು ನಿರ್ಧಾರ ಮಾಡಿದ್ದೇನೆ. ಡಾ: ಡಿ.ಎಂ. ನಂಜುಂಡಪ್ಪನವರು ಪ್ರಾದೇಶಿಕ ಅಸಮತೋಲನ ನಿವಾರಣೆಗೆ ನೀಡಿರುವ ಶಿಫಾರಸ್ಸುಗಳ ಅನ್ವಯ ಜಾರಿಯಾಗುತ್ತಿರುವ ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆಗೆ

ಅಭಿವೃದ್ಧಿ ಆಯುಕ್ತರ ಒಂದು ನೇತೃತ್ವದಲ್ಲಿ ಹಣಕಾಸು ಇಲಾಖೆ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳುಳ್ಳ ಒಂದು ಉನ್ನತ ಸಮಿತಿಯನ್ನು ನಾವು ರಚನೆ ಮಾಡುತ್ತಿದ್ದೇವೆ. ಡಾ : ನಂಜುಂಡಪ್ಪ ವರದಿಯನ್ನು ಜಾರಿಗೆ ತರುವಲ್ಲಿ ಈ ಉನ್ನತ ಪರಿಶೀಲನಾ ಸಮಿತಿ ಕ್ರಮವನ್ನು ತಗೊಳ್ಳುವುದಿದೆ. ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಜೆಟ್ ಮೇಲೆ ಚರ್ಚೆ ನಡೆದ ಸಂದರ್ಭದಲ್ಲಿ ಇದರಲ್ಲೇನೋ ಹಿಡನ್ ಅಜೆಂಡಾ ಇದೆ ಎಂದು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದ ಧರಂಸಿಂಗ್‌ರು ಆಗಾಗ್ಗೆ ಪ್ರೀತಿಯಿಂದ ಹೇಳುತ್ತಿರುತ್ತಾರೆ. ಅವರು ಹಾಗೆ ಹೇಳದೇ ಹೋದರೆ ಸರಿಹೋಗಲಿಕ್ಕಿಲ್ಲ, ಅವರೇನಾದರೂ ಟೀಕೆ ಮಾಡಬೇಕಲ್ಲಾ? 'ಯಡಿಯೂರಪ್ಪ ಈ ಬಜೆಟ್ ಒಳ್ಳೆಯದಿದೆ' ಅಂತ ಹೇಳಲು ಸಾಧ್ಯವಾ? ಹಾಗಾಗಿ ಕೆಲವು ಸಲ ಟೀಕೆ ಮಾಡುತ್ತ ಇರುತ್ತಾರೆ. ಟೀಕೆ ಮಾಡುವುದು ಒಳ್ಳೆಯದು. ಆ ತರಹ ಟೀಕೆಗಳು ಬಂದಾಗ ಈ ಕಡೆಯಿರುವವರು ಎಚ್ಚರ ವಹಿಸಬೇಕಾಗುತ್ತದೆ. ಹಿರಿಯರಿದ್ದೀರಿ, ಅನುಭವಿಗಳಿದ್ದೀರಿ, ನೀವಲ್ಲದೆ ಇನ್ನ್ಯಾರು ನಮಗೆ ಹೇಳಬೇಕು? ಆದರೆ ನಮಗೆ ಯಾವುದೇ ಹಿಡನ್ ಅಜೆಂಡ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮದು ಯಾವಾಗಲೂ ನೇರ. ಯಡಿಯೂರಪ್ಪ ಅಂತೂ ಒಳಗೊಂಡು ಹೊರಗೊಂದು ಒಳಗೊಂದು ಮಾತನಾಡುವುದು ಗೊತ್ತೂ ಇಲ್ಲ, ನೇರವಾಗಿ ಏನು ಮಾಡುತ್ತೇವೋ ಅದನ್ನು ಸ್ಪಷ್ಟವಾಗಿ ಹೇಳುವಂತಹ ಜನ. ಆದರೆ ಇರುವಂತಹ ಒಂದೇ ಒಂದು ಅಜೆಂಡಾ ಅಂದರೆ ರಾಜ್ಯದ ಅಭಿವೃದ್ಧಿ ಅಜೆಂಡಾ, ಹಿಡನ್ ಅಜೆಂಡಾ ಬೇರೆ ಏನೂ ಇಲ್ಲ ನಮ್ಮ ಹತ್ತಿರ. ನಾನು ಕೇಳುತ್ತೇನೆ, ಹಿರಿಯ ನಾಯಕರು, ಆ ಕಡೆ ಕೂತಿರುವವರಿಗೆ. ನಮ್ಮ ಪ್ರಾಚೀನ ಪರಂಪರೆಯನ್ನು ಸಂಕೇತಿಸುವ ಐತಿಹಾಸಿಕ ಸ್ಮಾರಕಗಳ ದೇವಾಲಯಗಳ ಪುನರುಜ್ಜೀವನ ಹೇಗೆ ಹಿಡನ್ ಅಜೆಂಡಾ ಆಗುತ್ತದೆ? ಹೇಗೆ ತಪ್ಪಾಗುತ್ತದಾ ಇದು? ತಾವು ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಹೇಗೆ ಗೌರವಿಸುತ್ತೀರಿ, ಹಾಗೆಯೇ ನಾವೂ ಸಹ ಗೌರವಿಸುತ್ತೇವೆ. ಇದರಲ್ಲಿ ಹಿಡನ್ ಅಜೆಂಡಾ ಏನು ಬಂತು? ಅವತ್ತು ಒಂದು ದಿನ ಉಪಪ್ರಧಾನಮಂತ್ರಿ ಮತ್ತು ಕಾಂಗ್ರೆಸ್ ನೇತಾರರಾಗಿದ್ದ ಸರ್ದಾರ್ ವಲ್ಲಭಬಾಯ್ ಪಟೇಲರು ಸೋಮನಾಥ ದೇವಾಲಯದ ಜೀರ್ಣೋದ್ಧಾರ ಕಾರ್ಯ ಕೈಗೊಂಡರಲ್ಲವೇ? ಅಂತಹ ಒಂದು ಹಿನ್ನೆಲೆಯಿಂದ ಬಂದಿರುವ ಕಾರ್ಯಕರ್ತರು ನಾವು ತಾನೇ? ಈ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಂತಹ ಮಹಾತ್ಮಗಾಂಧೀಜಿಯವರು ರಾಷ್ಟ್ರದ ಗೋಸಂಪತ್ತಿನ ರಕ್ಷಣೆ ಬಗ್ಗೆ ಹಲವು ಬಾರಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಅದ್ಯಾವುದೂ ಕಾರ್ಯ ರೂಪಕ್ಕೆ ಬಂದಿಲ್ಲ. ಆಧುನಿಕ ಕೃಷಿ ತಜ್ಞರೂ ಕೂಡ ಗೋಸಂಪತ್ತಿನ ರಕ್ಷಣೆ ಬಗ್ಗೆ ಒತ್ತಾಯ ಮಾಡುತ್ತಿದ್ದಾರೆ. ಅದು ನಮ್ಮ ಕರ್ತವ್ಯ ಇದೆ. ನಾನು ಚಿಕ್ಕವನಿದ್ದಾಗ ನಮ್ಮ ಹಳ್ಳಿಗಳಿಗೆ ನಾವು ಹೋದಾಗ ನಮ್ಮ ಮನೆ ಮುಂದೆ ನಾಲ್ಕು ಹಸು, ನಾಲ್ಕು ಎಮ್ಮೆ ಒಂದೆರಡು ಎತ್ತು, ಅಲ್ಲೊಂದು ಗಾಡಿ ಈ ಸುಂದರ ದೃಶ್ಯ ನೋಡುತ್ತಿದ್ದೆವು. ಎಲ್ಲಿದೆ ಈಗ ಅದು? ಗೋಸಂಪತ್ತು ಸರ್ವನಾಶವಾಗುತ್ತಾ ಇದೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಅವರು ಕರ್ನಾಟಕದಲ್ಲಿ ಪ್ರಗತಿಪರ ವಿಚಾರಧಾರೆಯ ಒಂದು ರಂಗ ಮಾಡಿದ್ದೇವೆ ಎಂದಿದ್ದಾರೆ. ಹೇಗೆ ಹೇಳುವಾಗ ಮಾನ್ಯ ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾಗಿದ್ದಾರೆ. ಅವರು

ಬಿಜೆಪಿಯಿಂದ ಬಂದವರು. ಅವರು ಹಾರ್ಡ್‌ಕೋರ್ ಆರ್‌ಎಸ್‌ಎಸ್, ಅದರಲ್ಲೂ ಎರಡು ಬಣ ಇದೆ, ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹಿಡನ್ ಅಜೆಂಡಾ ಏನೆಂದರೆ ಹಿಂದೂ ದೇವಾಲಯಗಳ ಜೀರ್ಣೋದ್ಧಾರ ಮಾಡುವಾಗ, ಈ ರೀತಿಯಾದ ಪ್ರಗತಿರಂಗ ರಚಿಸಿ, ಇವತ್ತು ಮಿರಾಜುದ್ದೀನ್‌ಪಟೇಲ್ ಎಲ್ಲಿ ಕೂತಿದ್ದಾರೆ, ಇಕ್ಬಾಲ್ ಅನ್ಸಾರಿ ಎಲ್ಲಿ ಕೂತಿದ್ದಾರೆ ....

ಶ್ರೀ ಅರಗ ಜ್ಞಾನೇಂದ್ರ: ಅಲ್ಪ ಸಂಖ್ಯಾತರಿಗೆ ಜಾಸ್ತಿ ಕೊಟ್ಟಿದ್ದಾರಲ್ಲಾ?

(ಗೊಂದಲ)

ಎನ್. ಧರ್ಮಸಿಂಗ್ (ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡ ತೊಡಗಿದರು): ಸದನದಲ್ಲಿ ಪ್ರಸ್ತಾಪಿಸಿದ್ದು ನಾನೇ. ಇವತ್ತು ಅವರು ಉಪಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ನಾನು ಹೇಳುವುದು ಇಷ್ಟೇ : ಬಿಜೆಪಿಯವರದ್ದು ಒಂದು ಹಿಡನ್ ಅಜೆಂಡಾ ಇದೆ ಅವರು ಚರ್ಚ್‌ಗಳ ಬಗ್ಗೆ ಹೇಳಿದ್ದಾರಾ? ಮಸೀದಿಗಳ ಬಗ್ಗೆ ಹೇಳಿದ್ದಾರಾ? ಬೇರೆ ಬೇರೆಯದಕ್ಕೆ ಹೇಳಿದ್ದಾರಾ? ಹೇಳಿಲ್ಲ. ಮಹಮದ್ ಘಜನಿ ಬಗ್ಗೆ ಉಲ್ಲೇಖ ಮಾಡಿದ್ದಾರೆ. ರಾಹು ಲಸಾಂಕೃತ್ಯಾಯನ ಒಂದು ಪುಸ್ತಕ 'ವೋಲ್ಗಾ ಟುಗಂಗಾ' ಅಂತ ಬರೆದಿದ್ದಾರೆ. ರಷ್ಯಾದ ವೋಲ್ಗಾ ನದಿಯಿಂದ ನಮ್ಮ ದೇಶದಲ್ಲಿ ಹರಿಯುವ ಗಂಗಾ ನದಿಯ ಮಧ್ಯೆ ಇರುವ ಈ ಒಂದು ಸಂಸ್ಕೃತಿ ಬಗ್ಗೆ, ಸಭ್ಯತೆಗಳ ಬಗ್ಗೆ ಮೌಲ್ಯಗಳ ಬಗ್ಗೆ ಅವರು ಉಲ್ಲೇಖ ಮಾಡಿದ್ದಾರೆ. ಅದಕ್ಕೆ ಅವರು ಏನು ಹೇಳಿದ್ದಾರೆ ಎಂದರೆ ಮಹಮದ್ ಘಜನಿ 17 ಸಲ ಧಾಳಿ ಮಾಡಿದ, ಸೋಮನಾಥ ದೇವರ ಮೇಲೆ ಅಭಿಷೇಕ ಎಂದು ಸಾವಿರಾರು ಕೂಡ ಹಾಲು ಚೆಲ್ಲುವುದು ಈ ದೇಶದ ಸಂಸ್ಕೃತಿ, ಅದೇ ಹಾಲನ್ನು ಮಕ್ಕಳಿಗೆ ಕುಡಿಸಿದ್ದರೆ ಹೊರಗಡೆಯಿಂದ ಬಂದ ಮಹಮದ್ ಘಜನಿಯನ್ನು ಅವರು ಎದುರಿಸುತ್ತಿದ್ದರು ಎಂಬ ಮಾತನ್ನೂ ಹೇಳಿದ್ದಾನೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆ ಅಂದರೆ ಬಿಜೆಪಿದ್ದು ಹಿಡನ್ ಅಜೆಂಡಾ ಇದೆ, ಇವತ್ತು ಮಾನಸ ಸರೋವರದ ಬಗ್ಗೆ ಮಾನ್ಯ ರಾಜೇಂದ್ರನ್ ಚೆನ್ನಾಗಿ ಹೇಳಿದ್ದಾರೆ. ಪದಗಳನ್ನು ಒಳಗಿಂದೊಳಗೇ ಬಿಡ್ತೀರಿ ಗೊತ್ತಾಗುವುದಿಲ್ಲ ಜನರಿಗೆ. ಇದು ಮಾನ್ಯ ಚೆಲುವರಾಯಸ್ವಾಮಿ ತಲೆಗೆ ಹೋಗುವುದಿಲ್ಲ. ಅದು ಹೋಗಬೇಕಾದರೆ ಬಹಳ ದಿವಸ ಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರು ದೇವಾಲಯಗಳ ಜೀರ್ಣೋದ್ಧಾರ, ಗೋಮೂತ್ರದ ಬಗ್ಗೆಯೆಲ್ಲಾ ಹೇಳಿದ್ದಾರೆ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್: ಇವರನ್ನು ಬಾಬಾಬುಡನ್‌ಗಿರಿ ದತ್ತ ಜಯಂತೀನೇ ಆರಿಸಿ ಕಳುಹಿಸಿದ್ದು. ಅದೇ ಕೆಲಸ ಮಾಡಿದ್ದಾರೆ. ಮತ್ತೇನೂ ಇಲ್ಲ. ನಾನು ಮುಖ್ಯಮಂತ್ರಿಯಾದಾಗ ದತ್ತಜಯಂತಿಗೆ ಹೋಗುವವರಿಗೆ ನಾವು ಯಾವ ರೀತಿಯ ಅಡೆ ತಡೆ ಮಾಡಲಿಲ್ಲ. ಆದರೆ ಅಲ್ಪ ಸಂಖ್ಯಾತರಿಗೆ ಹೆಚ್ಚು ರಕ್ಷಣೆ ಕೊಡುವ ರೀತಿಯಲ್ಲಿ ನಾನು ಮಾಡಿದ್ದೇನೆ. ನಿಮಗೇನೋ ಇವತ್ತು ಸ್ವಾತಂತ್ರ್ಯ ಇದೆ, ಎರಡೂ ಪಕ್ಷಗಳು ಕೂಡಿದ್ದೀರಿ. ನಮಗೆ ಹೇಳಿದಿರಿ. ದೇವರು ಏನೋ ಪರಿಸ್ಥಿತಿ ಕೊಟ್ಟಿದ್ದಾನೆ. ನಾವು ಕೇಳತಕ್ಕಂಥ ಸ್ಥಾನದಲ್ಲಿದ್ದೀರಿ, ನೀವು ಕೊಡತಕ್ಕಂಥ ಸ್ಥಾನದಲ್ಲಿದ್ದೇವೆ. ಅದೆಲ್ಲಾ ಒಪ್ಪುತ್ತೇನೆ. ಆದರೆ ನಿಮ್ಮ ಹಿಡನ್ ಅಜೆಂಡಾದಲ್ಲಿ ದೇಶದ ಜನತೆಗೆ ಏನು ಹೇಳುತ್ತಿದ್ದೀರೋ ಅದನ್ನು ನಾವು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಎಚ್. ಡಿ. ಬಸವರಾಜು: ಹಿಡನ್ ಅಜೆಂಡಾ ಅನ್ನುವ ಭೂತವನ್ನು ನೀವು ಸೃಷ್ಟಿ ಮಾಡಲು ಹೋಗಬೇಡಿ. ಅಂತಹ ಯಾವ ಹಿಡನ್ ಅಜೆಂಡಾನೂ ಇಲ್ಲ. ಓಪನ್ ಅಜೆಂಡಾನೇ. ಬಿಜೆಪಿದ್ದು ಓಪನ್ ಅಜೆಂಡಾನೇ.

ಅಧ್ಯಕ್ಷರು: ಬಜೆಟ್ ಮೇಲಿನ ಉತ್ತರ ಕೊಡುತ್ತಿದ್ದಾರೆ. ಕೇಳೀಯಪ್ಪ. ನಿಮ್ಮ ಹಿಡನ್ ಅಜೆಂಡಾನೇ ಆಗಿ ಹೋಯಿತಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರ ಕೊಡಲು ನಾನಿದ್ದೇನಲ್ಲಾ? ವಿರೋಧ ಪಕ್ಷದ ನಾಯಕರು ನಿಂತು ಏನಾದರೂ ಹೇಳಿದಾಗ ಶಾಂತವಾಗಿರಿ. ನಾನು ಹೇಳುತ್ತಿದ್ದೆ, ಮಹಾತ್ಮ ಗಾಂಧೀಜಿಯವರು ರಾಷ್ಟ್ರದ ಗೋಸಂಪತ್ತಿನ ರಕ್ಷಣೆ ಬಗ್ಗೆ ಹಲವು ಬಾರಿ ಪ್ರಸ್ತಾಪ ಮಾಡಿದ್ದಾರೆ. ಎನ್ನುವ ಮಾತನ್ನು ನಾನು ಹೇಳಿದ್ದೇನೆ.

ಆಧುನಿಕ ಕೃಷಿ ತಜ್ಞರು ಕೂಡ ದೇಶದ ಗೋಸಂಪತ್ತಿನ ರಕ್ಷಣೆಗೆ ಒತ್ತಾಯಿಸಿದ್ದಾರೆ. ನಾವು ಮೊದಲು ಯಾವ ರೀತಿ ನಮ್ಮ ರೈತರು ಆ ಗೋತಳಿ ಸಂರಕ್ಷಣೆ ಬಗ್ಗೆ, ಬೇಸಾಯವನ್ನು ಎತ್ತಿನ ಮೂಲಕ ಮಾಡುತ್ತಿದ್ದ ಬಗ್ಗೆ, ಅದರಿಂದ ಹೊಲಕ್ಕೆ ಬೇಕಾದ ಗೊಬ್ಬರ ಶೇಖರಣೆ ಬಗ್ಗೆ ಮಹತ್ವ ಕೊಡುತ್ತಿದ್ದೆವು, ಈ ಆಧುನಿಕ ಯುಗದಲ್ಲಿ ಅದೆಲ್ಲಾ ಕಡಿಮೆಯಾಗುತ್ತಿದೆ. ಅದಕ್ಕಾಗಿ ಈ ಗೋಸಂಪತ್ತನ್ನು ರಕ್ಷಣೆ ಮಾಡುವ ಕಡೆ ಸರ್ಕಾರ ಇದಕ್ಕೆ ಹೆಚ್ಚು ಒತ್ತನ್ನು ಕೊಡಬೇಕೆಂಬ ಯೋಚನೆಯನ್ನು ನಾವು ಮಾಡಿದ್ದೇವೆ. ಒಂದು ಮಾತನ್ನು ನಾನು ಹೇಳುತ್ತೇನೆ, ಗೋಮೂತ್ರ ಕ್ಯಾನ್ಸರ್ ಮೊದಲಾದ ಖಾಯಿಲೆಗಳಿಗೆ ಔಷಧಿ ಗುಣವನ್ನು ಹೊಂದಿದೆ ಎಂಬುದೂ ಸಹ ಒಂದು ವಾಸ್ತವಿಕ ಸತ್ಯಾಂಶ. ಇದನ್ನು ಎಲ್ಲೆಲ್ಲಿ ಪ್ರಯೋಗ ಮಾಡಿದ್ದಾರೆ,ಆ ರಾಮಚಂದ್ರಪುರ ಮಠದ ಶ್ರೀಗಳವರು ತಮ್ಮ ಜೀವನವನ್ನೇ ಗೋಸಂರಕ್ಷಣೆಗೆ ಮುಡುಪಾಗಿಡುತ್ತೇನೆ, ಎಂದು ಹೇಳಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಕ್ಯೂನಲ್ಲಿ ನಿಂತು ಈ ಪರಿಷ್ಕೃತ ಗೋಮೂತ್ರವನ್ನು ತೆಗೆದುಕೊಂಡು ಹೋಗಿ ಅನೇಕ ರೋಗರುಜಿನಗಳನ್ನು ವಾಸಿ ಮಾಡುವುದಕ್ಕೆ ಉಪಯೋಗ ಮಾಡುತ್ತಿದ್ದಾರೆ. ಇದರ ಅಭಿವೃದ್ಧಿಯಾಗಬೇಕು. ನಶಿಸಿ ಹೋಗುತ್ತಿರುವ ಸ್ಥಳೀಯ ಗೋತಳಿಗಳ ಸಂರಕ್ಷಣೆಗೆ ನಮ್ಮ ಸರ್ಕಾರ ಮುಂದಾಗಿರುವುದು ಯಾವ ರೀತಿ ಇಲ್ಲಿ ಪ್ರಶ್ನೆಯಾಗುತ್ತದೆ? ಯಾವ ರೀತಿ ಪ್ರಶ್ನೆ ಮಾಡುವುದಕ್ಕೆ ಬೇರೆಯವರಿಗೆ ಸಾಧ್ಯವಾಗುತ್ತದೆ? ಈಗ ಸಾಂಸ್ಕೃತಿಕ ರಕ್ಷಣೆ ಪ್ರಾಧಿಕಾರ ರಚನೆ ಕೇವಲ ಹಿಂದೂಗಳಿಗೆ ಮಾತ್ರ ಅಲ್ಲವಲ್ಲಾ. ಇದು ಎಲ್ಲಾ ವರ್ಗದ ಜನರಿಗೆ ಸಮಗ್ರ ಪರಂಪರೆ ರಕ್ಷಣೆಗಾಗಿ ಮಾಡುತ್ತಿರುವಂಥದ್ದು ತಾನೇ? ಇದು ಕೇವಲ ಹಿಂದೂಗಳು ಎಂದು ನಾವು ಹೇಳಿಲ್ಲ. ಹಾಗೆಯೇ ಐತಿಹಾಸಿಕ ದೇವಾಲಯಗಳ ಪುನರುಜ್ಜೀವನಕ್ಕೆ ಕಾರ್ಯಕ್ರಮ ಹೊರತು ಬರೀ ಹಿಂದೂ ದೇವಾಲಯಗಳಿಗೆ ಮಾತ್ರವಲ್ಲ. ಯಾವುದೇ ದೇವಾಲಯ ಇರಬಹುದು. ಅದು ಚರ್ಚ್ ಇರಬಹುದು, ಮಸೀದಿ ಇರಬಹುದು. ಅದು ಯಾವುದೇ ಇರಬಹುದು. ಅಂಥ ಐತಿಹಾಸಿಕ ಒಂದು ದೇವಾಲಯಗಳನ್ನು ರಕ್ಷಣೆ ಮಾಡುತ್ತೇವೆಂದು ಹೇಳಿದರೆ ಅದು ಹೇಗೆ ಅಪಾರ್ಥವಾಗುತ್ತದೆ? ಮತ್ತು ಅದಕ್ಕೆ ಅವಕಾಶವಾಗುತ್ತದೆ ಎಂದು ನನಗೇನೂ ಖಂಡಿತಾ ಅರ್ಥವಾಗುತ್ತಿಲ್ಲ. ನಾವಂತೂ ನಮ್ಮ ಕಾರ್ಯಕ್ರಮಕ್ಕೆ ಬದ್ಧರಾಗಿದ್ದೇವೆ. ನಮ್ಮ ಸರ್ಕಾರ ಎಲ್ಲಾ ವರ್ಗಗಳನ್ನು ಏಕರೀತಿಯಲ್ಲಿ ನೋಡುತ್ತದೆ. ಹೀಗೆ ಮಾಡುವಾಗ ಸಾಮಾಜಿಕ ನ್ಯಾಯದ ಒಂದು ಪರಿಕಲ್ಪನೆ ಏನಿದೆ, ಅದಕ್ಕೆ ಪ್ರಾಧಾನ್ಯತೆಯನ್ನು ನಾವು ಕೊಡುತ್ತೇವೆ. ಈ ಮನೆಯಲ್ಲಿ ನಿಂತು ಯಾರಾದರೂ ಒಬ್ಬರು ಈ 40 ತಿಂಗಳ ನಮ್ಮ ಆಡಳಿತದ ಅವಧಿಯಲ್ಲಿ ಈ ರೀತಿ ಹಿಂದೂಗಳಿಗೆ ಬೇರೆ, ಅಲ್ಪಸಂಖ್ಯಾತರಿಗೆ ಬೇರೆ ಎಂದು, ಭೇದಭಾವನೆ ಆಯಿತು ಎನ್ನುವಂಥ ಯಾವುದೇ ಒಂದು ಘಟನೆಗೆ ಅವಕಾಶವನ್ನು

ಕೊಡುವುದಿಲ್ಲ, ಇದಕ್ಕೆ ಬದ್ಧರಾಗಿದ್ದೇವೆ ಎನ್ನುವ ಭರವಸೆಯನ್ನು ಅಲ್ಪಸಂಖ್ಯಾತ ಬಂಧುಗಳಿಗೆ ಈ ನಾಡಿನ ಜನರಿಗೆ ಕೊಡುವುದಕ್ಕೆ ನಾವು ಇಚ್ಛೆಪಡುತ್ತೇವೆ. ಪರಿಶಿಷ್ಟರ ಕಲ್ಯಾಣ ಕಾರ್ಯಕ್ರಮಕ್ಕೆ ಶೇಕಡಾ 126ರಷ್ಟು, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಶೇಕಡಾ 45ರಷ್ಟು, ಅಲ್ಪ ಸಂಖ್ಯಾತ ಕಲ್ಯಾಣ ಕಾರ್ಯಕ್ರಮಗಳಿಗೆ ಶೇಕಡಾ 300 ರಷ್ಟು ಹೆಚ್ಚು ಅನುದಾನವನ್ನು ನಾವು ಒದಗಿಸಿದ್ದೇವೆ. ಇದಕ್ಕೆ ಉದಾಹರಣೆ ಎಂದರೆ ಇದೇನೇ. ಇದಕ್ಕಿಂತ ಉದಾಹರಣೆ ಅಗತ್ಯವಿಲ್ಲ. ಮತ್ತೆ ಅಲ್ಪ ಸಂಖ್ಯಾತರನ್ನು ಮುಖ್ಯ ವಾಹಿನಿಗೆ ತರಬೇಕು ಎನ್ನುವುದು ನಮ್ಮ ಉದ್ದೇಶ ಇದೆ. ಕೆಲವರು ಯಾರೋ ಮೂಗಿಗೆ ತುಪ್ಪ ಸವರಿ ವೋಟ್ ಬ್ಯಾಂಕ್ ರಾಜಕಾರಣ ಮಾಡಿದರೆ ಅದರಲ್ಲಿ ನಮಗೇನೂ ಆಸಕ್ತಿ ಇಲ್ಲ. ಎಲ್ಲಾ ವರ್ಗದ ಜನರ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಬೇಕು ಎನ್ನುವುದೇ ನಮ್ಮ ಚಿಂತನೆ ಇದೆ. ಅದನ್ನು ನಾವು ಕಾರ್ಯಕ್ರಮಕ್ಕೆ ತರುತ್ತೇವೆ. 1935 ರಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ರಾಜ್ಯದ ಮೊಟ್ಟಮೊದಲ ಸಚಿವರಾದ ಮತ್ತು ಪಾನ ನಿರೋಧಕಕ್ಕಾಗಿ ಸಚಿವಸ್ಥಾನವನ್ನು ತ್ಯಾಗ ಮಾಡಿದ ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಜನ್ಮಶತಮಾನೋತ್ಸವವನ್ನು ಆಚರಿಸುವುದಕ್ಕೆ ಘೋಷಿಸಿದ್ದೇವೆ. ಆ ಘೋಷಣೆ ಹಿಂದೆ ಆಗಿತ್ತು. ಆದರೆ ಅದು ಆಗಿಲ್ಲ. ಅದಕ್ಕೆ ಹಣಕಾಸಿನ ನೆರವನ್ನು ನೀಡಿರಲಿಲ್ಲ. ನಾವು ಈಗ ಆ ಕಾರ್ಯವನ್ನು ಮಾಡುತ್ತಿದ್ದೇವೆ. ಮತ್ತು ಅದಕ್ಕೆ ಹಣಕಾಸನ್ನು ತೆಗೆದಿಡುತ್ತಿದ್ದೇವೆ. ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಸ್ಮರಣೆಗಾಗಿ ಗ್ರಂಥವೊಂದನ್ನು ಪ್ರಕಟಿಸುವುದಲ್ಲದೆ, ಅತ್ತಿಮಬ್ಬೆಯಿಂದ ಹಿಡಿದು ಕಿತ್ತೂರು ರಾಣಿ ಚೆನ್ನಮ್ಮನವರೆಗೆ ಮತ್ತು ತದನಂತರ ಮಹಿಳೆಯರ ಸಾಧನೆಯನ್ನು ಬಿಂಬಿಸುವ ಆಕರ ಗ್ರಂಥವನ್ನೂ ನಾವು ಪ್ರಕಟ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಹಿರಿಯರು ಸಲಹೆಗಳನ್ನು ಕೊಡುವ ಕಾಲದಲ್ಲಿ ಸನ್ಮಾನ್ಯ ಸಿದ್ದರಾಮಯ್ಯನವರು ಕೆಲವು ಪ್ರಮುಖವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಒಬ್ಬ ಹಣಕಾಸಿನ ಸಚಿವರಾಗಿ ಅವರು ಕೆಲಸವನ್ನು ಮಾಡಿದ್ದಾರೆ. ಒಂದು ಪ್ರಗತಿಯತ್ತ ಈ ನಾಡನ್ನು ಏನು ತೆಗೆದುಕೊಂಡು ಹೋಗುತ್ತಿದ್ದರು, ಆ ದಾರಿಯಲ್ಲೇ ನಾವೂ ಮುಂದುವರೆಯುತ್ತೇವೆ. ಏಕೆಂದರೆ ಯಾವುದನ್ನು ಅವರು ಪ್ರಾಮಾಣಿಕವಾಗಿ ಸಂಪನ್ಮೂಲವನ್ನು ಕ್ರೋಢೀಕರಿಸುವುದಕ್ಕೆ ವಿಶೇಷವಾದ ಪ್ರಯತ್ನವನ್ನು ಅವರು ಮಾಡಿದರು. ಅದಕ್ಕೆ ಯಾವುದೇ ಕೊರತೆಯಾಗದ ರೀತಿ ಯಾವುದೇ ಲಾಬಿಗೂ ಮಣಿಯದೇ ಪ್ರಾಮಾಣಿಕವಾಗಿ ನಾವು ಮುಂದುವರಿಯುತ್ತೇವೆ. ಏನಾಗಿದೆ, ಏನು ಸಾಧನೆಯಾಗಿದೆ, ಎನ್ನುವುದನ್ನು ಇನ್ನು 3–4 ತಿಂಗಳಲ್ಲಿ ನೀವೇ 'ಹೌದು, ಯಡಿಯೂರಪ್ಪನವರೇ, ನೀವು ಹೇಳಿದಂತೆ ನಡೆದುಕೊಂಡಿದ್ದೀರಿ' ಎಂದು ಹೇಳುವ ರೀತಿಯಲ್ಲಿ ನಾವು ಪ್ರಯತ್ನವನ್ನು ಮಾಡುತ್ತೇವೆ. ಕರ್ನಾಟಕ ರಾಜ್ಯದಲ್ಲಿ ವಿತ್ತೀಯ ಸುಧಾರಣೆಯಾಗಿರುವುದನ್ನು ನೀವು ವಿವರಿಸಿದ್ದೀರಿ. ಇನ್ನು ಮುಂದೆ ಫಿಸ್ಕಲ್ ಕನ್‌ಸಲ್ಟೇಷನ್ ಆಗಬೇಕೆಂದು ನೀವು ತಿಳಿಸಿದ್ದೀರಿ. ಯೋಜನೆ ಗಾತ್ರ ದೊಡ್ಡದಾಗಿರುವುದರಿಂದ ಇನ್ನೂ ಹೆಚ್ಚಿನ ಹಣವನ್ನು ಕೃಷಿ, ನೀರಾವರಿ, ವಿದ್ಯುಚ್ಛಕ್ತಿ ಕ್ಷೇತ್ರಗಳಿಗೆ ನೀಡಬೇಕೆಂದು ನೀವು ಹೇಳಿದ್ದೀರಿ. ಮಾನ್ಯ ಉಪಮುಖ್ಯಮಂತ್ರಿಯಾಗಿ ನಾನೇನು ಇವತ್ತು ಹಣಕಾಸಿನ ವಿವರವನ್ನು ನೀಡಿದ್ದೇನೆ, ಹಿಂದಿನ ಹಣಕಾಸು ಸಚಿವರು ತಾವೇನು ತಮ್ಮ ಸಲಹೆಯನ್ನು ಕೊಟ್ಟಿದ್ದೀರಿ, ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ಒಂದು ಬಜೆಟನ್ನು ತಯಾರು ಮಾಡತಕ್ಕಂಥ ಪ್ರಯತ್ನವನ್ನು

ನಾನು ಮಾಡುತ್ತಿದ್ದೇನೆ. ಈ ವಿದ್ಯುತ್ ವಲಯಕ್ಕೆ ನೀಡಿರುವ ಹಣ ಕಡಿಮೆಯಾಗಿದೆಯೆಂದು ಹೇಳುತ್ತೀರಿ. ಅದನ್ನು ನಾನು ಒಪ್ಪುತ್ತೇನೆ. ಆ ಕಡೆ ವಿಶೇಷ ಗಮನವನ್ನು ಕೊಡುತ್ತೇನೆ. ಸಮಾಜ ಕಲ್ಯಾಣ ವಲಯ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಹೆಚ್ಚು ಹಣವನ್ನು ನಾವು ಒದಗಿಸಬೇಕಾಗಿದೆ. ನಾವು ಅದನ್ನು ಕೊಡುತ್ತಿದ್ದೇವೆ. ಒಂದು ನಾನು ಈ ರಾಜ್ಯದ ರೈತ ಸಮೂಹದಲ್ಲಿ ಕೈಜೋಡಿಸಿ ಪ್ರಾರ್ಥನೆ ಮಾಡುವಂಥದ್ದು, ನಾನು ಒಂದು ಮಾತನ್ನು ಹೇಳುತ್ತೇನೆ, ಇವತ್ತು ಹಿಂದಿನ ಹಣಕಾಸು ಸಚಿವರಾದ ಮಾನ್ಯ ಸಿದ್ದರಾಮಯ್ಯನವರು ಹೇಳಿದಂತೆ ಈ ಕೆಪಿಟಿಸಿಎಲ್ ಒಂದು ರೀತಿ ಬಿಳಿ ಆನೆಯಾಗಿದೆ. ಹೇಳುವವರೂ ಕೇಳುವವರೂ ಇಲ್ಲ, ಅಕಾಂಟಬಿಲಿಟಿ ಇಲ್ಲ. ಈ ಒಂದು ಭಾವನೆ ಇದೆ. ಏಕೆ ಹೀಗೆ ಆಗುತ್ತಿದೆ? ಸೋರಿಕೆ ಎಷ್ಟಿದೆ ಎಂದು ದೇವರಿಗೇ ಗೊತ್ತಿಲ್ಲ. ಇದನ್ನು ನಾನು ಮನದಟ್ಟು ಮಾಡಿಕೊಂಡಿದ್ದೇನೆ. ಅದಕ್ಕೆ ನನ್ನ ರಾಜ್ಯದ ರೈತ ಸಮೂಹದಲ್ಲಿ ವಿನಂತಿ ಮಾಡುವುದು ಯಾವ ಕಾರಣಕ್ಕೂ ನೀವು ಮೀಟರನ್ನು ಅಳವಡಿಸುವುದರಿಂದ ನಿಮ್ಮ ಪಂಪುಸೆಟ್ಟುಗಳಿಗೆ ವಿದ್ಯುತ್ ದರ ಜಾಸ್ತಿಯಾಗುತ್ತದೆ ಎಂಬ ಚಿಂತನೆಯನ್ನು ಮಾಡ ಬೇಡಿ. ಆ ಭಯ ನಿಮಗೆ ಬೇಡ. ಪ್ರತಿಯೊಬ್ಬ ರೈತರೂ ಸಹಾ ದಯಮಾಡಿ ನಿಮ್ಮ ಪಂಪು ಸೆಟ್ಟುಗಳಿಗೆ ಮೀಟರನ್ನು ಅಳವಡಿಸಿ. ಇದರ ಪರಿಣಾಮವೇನಾಗುತ್ತದೆ ಎಂದರೆ ಈಗೇನು ಥೆಫ್ಟ್ ಆಗುತ್ತಿದೆ, ದೊಡ್ಡದೊಡ್ಡ ಕೈಗಾರಿಕೋದ್ಯಮಿಗಳು ಹಿಂಬಾಗಿಲಿನಿಂದ ಮೀಟರ್ ಲೈನನ್ನು ಎಳೆದುಕೊಂಡು ದುರುಪಯೋಗ ಮಾಡುತ್ತಿದ್ದಾರೆ, ಅದು ಈಗಲೂ ಮುಂದುವರಿದಿದೆ. ಅದರಲ್ಲೇನೂ ಯಾವ ಅನುಮಾನವೂ ಬೇಡ. ಟ್ರಾನ್ಸ್‌ಮಿಷನ್ ಲಾಸ್, ಥೆಫ್ಟ್ ಯಾವನೋ ಶ್ರೀಮಂತ ಲೂಟಿ ಮಾಡುವುದು. ಎಲ್ಲವೂ ಸಹಾ ರೈತರ ಹೆಸರಿನಲ್ಲಿ ಲೆಕ್ಕ ಬುಕ್ ಮಾಡುತ್ತಿದ್ದೇವೆ. ಅದರ ಬಗ್ಗೆ ಇಲಾಖೆಯ ಅಧಿಕಾರಿಗಳ ಹತ್ತಿರ ಮಾತನಾಡಿದರೆ ಏನೂ ಉಪಯೋಗ ಇಲ್ಲ. ಅವರಿಂದ ಅಂಕಿಅಂಶಗಳು ಹೇಗೆ ಸಿಗುವುದಕ್ಕೆ ಸಾಧ್ಯ ಇದೆ? ಆದ್ದರಿಂದ ನಾನು ಈ ರಾಜ್ಯದ ರೈತ ಸಮೂಹದಲ್ಲಿ ವಿನಂತಿ ಮಾಡುವಂಥದ್ದು ದಯಮಾಡಿ ನಿಮ್ಮ ಪಂಪುಸೆಟ್ಟುಗಳಿಗೆ ಮೀಟರನ್ನು ಅಳವಡಿಸಿಕೊಳ್ಳಿ. ಅದು 'ಭಾಗ್ಯ ಜ್ಯೋತಿ' ಇರಬಹುದು. ಅದು 'ಕುಟೀರ ಜ್ಯೋತಿ' ಇರಬಹುದು. ಆಗ ಇವರನ್ನು ಹಿಡಿದು ಕೇಳಬೇಕಾಗುತ್ತದೆ. ಆ ದಿಕ್ಕಿನಲ್ಲಿ ನಾನು ಈ ರಾಜ್ಯದ ರೈತ ಸಮೂಹಕ್ಕೆ ಒತ್ತಾಯವನ್ನು ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಆಯಿತು. ಅವರು ಉತ್ತರವನ್ನು ಕೊಡಲಿ. ಆಮೇಲೆ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಈ ಟೈಲರ್‌ಗಳಿಗೂ ಸಹಿತ ಅಸಂಘಟಿತ ಕಾರ್ಮಿಕರ ಕಲ್ಯಾಣ ಇದೆ. ಡೋಬಿ, ಕ್ಷೌರಿಕ ಮುಂತಾದವರು. ಸರ್ಕಾರ ಇವರ ಬಗ್ಗೆ ಚಿಂತನೆಮಾಡುತ್ತಿದೆ. ಅವರ ಕ್ಷೇಮಕ್ಕೇನು ಬೇರೆ ಪಕ್ಕದ ರಾಜ್ಯಗಳಲ್ಲಿ ಒಂದು ಕ್ಷೇಮನಿಧಿಯನ್ನು ಮಾಡಿ ಅನುಕೂಲವನ್ನು ಮಾಡಿಕೊಡುತ್ತಿದ್ದಾರೆ, ಆ ದಿಕ್ಕಿನಲ್ಲಿ ನಾವೂ ಸಹ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತೆ ಈ ಬಾರಿ ಯಾವುದೇ ರೀತಿಯ ಒಂದು ಹೊಸ ತೆರಿಗೆಯನ್ನು ಹಾಕುವಂಥ ಪ್ರಯತ್ನವನ್ನು ನಾವು ಮಾಡಿಲ್ಲ. ಅದು ಬಹಳ ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಬಾರಿ ಯಾವ ಹೊಸ ತೆರಿಗೆಯನ್ನು ಹೆಚ್ಚಿಸದೆ ಸಂಪನ್ಮೂಲವನ್ನು ಸುಧಾರಿಸಿ ಎಲ್ಲಾ

ವಲಯಗಳಿಗೂ ಹೆಚ್ಚಿನ ಅನುದಾನವನ್ನು ಒದಗಿಸಲಾಗಿದೆ ಎನ್ನುವ ಮಾತನ್ನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮುಂದಿನ ಬಾರಿ ಸಂಪನ್ಮೂಲ ಸಂಗ್ರಹಣೆಗೆ ಇನ್ನೂ ಹೆಚ್ಚು ಪರಿಣಾಮಕಾರಿ ಪ್ರಯತ್ನ ನಡೆಸಿ ಈ ರಾಜ್ಯದ ಅಭಿವೃದ್ಧಿಗೆ ದಾಪುಗಾಲನ್ನು ಹಾಕುವಂಥ ವಿಶ್ವಾಸ ನನಗಿದೆ. ಈ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಜೆಟ್ ಅನುಷ್ಠಾನವೆಂದರೆ ಈ ಮಾನಿಟರಿ ಕಾರ್ಯಕ್ರಮ ಈ ಪ್ರಗತಿಯ ಪರಿಶೀಲನೆ ತಿಂಗಳಿಗೊಮ್ಮೆ ಇಲಾಖಾ ಮಟ್ಟದಲ್ಲಿ ಮೂರು ತಿಂಗಳಿಗೊಮ್ಮೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಯಾದ ನಾನು ಈ ರೆವ್ಯೂ ಮಾಡುವ ಕಡೆ ಹೆಚ್ಚು ಗಮನವನ್ನು ಕೊಡುತ್ತೇವೆ. ಈ ಸಂಬಂಧಪಟ್ಟ ಸಂಸ್ಥೆ ಹಾಗೂ ಅಧಿಕಾರಿಗಳ ಮೇಲೆ ಜವಾಬ್ದಾರಿ ಇದೆ. ಯಾವುದೇ ಅಧಿಕಾರಿ ಏನೋ ಆಯಿತು ಎಂದು ಹೇಳಿ ಕೈಬೀಸಿಕೊಂಡು ಹೋಗುವುದಕ್ಕಾಗು –ವುದಿಲ್ಲ. ಈ ಕಡೆ ನಾನು ಹೆಚ್ಚು ಗಮನವನ್ನು ಕೊಡುತ್ತೇನೆ. ಈ ಇನ್ಸ್‌ಪೆಕ್ಷನ್, ಸರ್‌ಪ್ರೈಸ್ ವಿಸಿಟ್, ಸ್ಥಳಪರಿಶೀಲನೆ ಕೇವಲ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಮಂತ್ರಿಗಳಲ್ಲಿದ್ದು ಮಾತ್ರವಲ್ಲ. ನಮ್ಮ ಶಾಸಕರುಗಳೂ ಕೂಡ ಮಾಡಬೇಕು. ನಾನು ನಿಮಗೆ ಹೇಳುತ್ತೇನೆ. ಒಂದು ತಿಂಗಳಿಗೊಮ್ಮೆಯೋ, ಎರಡು ತಿಂಗಳಿಗೊಮ್ಮೆಯೋ ಆನಂದವಾಗಿ ಒಂದು ಕಡೆ ಸೇರೋಣ. ಪಕ್ಷಭೇದ ಮರೆತು ಸೇರೋಣ. ನಿಮ್ಮ ಮನಸ್ಸಿನಲ್ಲಿ ಏನು ಭಾವನೆಗಳು ಬರುತ್ತವೆ, ಏನು ಸಲಹೆಗಳು ನಿಮಗೆ ಬರುತ್ತವೆ, ಇವುಗಳನ್ನು ನೀವು ನನಗೆ ಕೊಡಬೇಕಾಗುತ್ತದೆ. ನಾನು, ಮುಖ್ಯಮಂತ್ರಿಗಳು, ಈ ನಾಡಿನ ಜವಾಬ್ದಾರಿಯನ್ನು ಹೊತ್ತಿರುವಂಥ ಅವರ ಪ್ರತಿನಿಧಿಗಳಾಗಿ ಬಂದಿರುವಂಥ ನಿಮ್ಮ ಮಾತನ್ನು ಕೇಳದೇನೇ ನಾವು ಡಿಕ್ಟೇಟರ್ಸ್ ರೀತಿ ವರ್ತನೆ ಮಾಡುವುದಕ್ಕೆ ಬರುವುದಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಹುಮತ ಇರುವವರು ಆಡಳಿತ ಪಕ್ಷದಲ್ಲಿ ಕುಳಿತುಕೊಳ್ಳುತ್ತಾರೆ. ಬಹುಮತ ಇಲ್ಲದೇ ಇರುವವರು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುತ್ತಾರೆ. ಇವತ್ತು ಎಲ್ಲರಿಗೂ ಸರಿಸಮಾನವಾದ ಗೌರವವನ್ನು ಕೊಡಬೇಕೆನ್ನುವ ಇಚ್ಛೆ ಇರುವಂಥ ವ್ಯಕ್ತಿ ನಾನು. ಯಾವುದೇ ಸಂದರ್ಭದಲ್ಲಿ ಯಾವುದೇ ಕೊರತೆ ನಿಮಗೆ ಕಂಡರೆ ತಾವು ಹೇಳಬೇಕು. ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಈ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಜನಸಂಪರ್ಕ, ಹಣ ಸಮರ್ಪಕವಾಗಿ ವಿನಿಯೋಗವಾಗಿ ಫಲಾನುಭವಿಗಳಿಗೆ ಅದು ತಲುಪಬೇಕು ಎನ್ನುವಂಥದ್ದು ನಮ್ಮ ಆಸೆ ಇದೆ. ಈ ದಿಕ್ಕಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆನ್ನುವ ಮಾತನ್ನು ನಾನು ಹೇಳುತ್ತೇನೆ. ನಮ್ಮ ಸರ್ಕಾರ ಸಮಗ್ರ ಅಭಿವೃದ್ಧಿ ಮೂಲಕ, ಸಶಕ್ತ ಹಾಗೂ ಸಮೃದ್ಧ ಕರ್ನಾಟಕದ ನಿರ್ಮಾಣಕ್ಕೆ ಬದ್ಧವಾಗಿದೆ. ಎಂಬ ಮಾತುಗಳನ್ನು ಹೇಳಿ, ಮುಂಬರುವ ದಿನಗಳಲ್ಲಿ ಸನ್ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ಕೊಡುತ್ತೀರಿ. ಅವುಗಳನ್ನು ಅಳವಡಿಸಿಕೊಳ್ಳುವುದಕ್ಕೆ ನಾನು ಶಕ್ತಿ ಮೀರಿ, ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಇವತ್ತು ಅನೇಕ ರೀತಿಯ ಸಲಹೆಗಳನ್ನು ತಾವು ಕೊಟ್ಟಿದ್ದೀರಿ. ನಾನು ಬಂದಂತಹ ಕೆಲವೇ ದಿವಸದಲ್ಲಿ ಎಲ್ಲವನ್ನೂ ಮಾಡುವುದಕ್ಕೆ ಆಗಿಲ್ಲ. ತಮ್ಮ ಸಲಹೆಗಳ ಕಡೆಗೆ ವಿಶೇಷವಾದ ಗಮನವನ್ನು ಕೊಡುತ್ತೇನೆಂದು ಭರವಸೆಯನ್ನು ಕೊಟ್ಟು ತಾವು ಈ ಬಜೆಟಿಗೆ ಮಂಜೂರಾತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಬಯಲು ಸೀಮೆ ವಿಚಾರ . . .

ಅಧ್ಯಕ್ಷರು: ಮೊದಲು ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣ ಕೇಳುತ್ತಾರೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಸ್ತಾಪ ಮಾಡಿದ ಹಾಗೆ ಮಾನ್ಯ ಯಡಿಯೂರಪ್ಪನವರು 20ನೇ ತಾರೀಖಿನ ದಿನ ಯಾವ ರೀತಿಯಾಗಿ ಬಜೆಟ್ ಮಂಡನೆ ಮಾಡತಕ್ಕಂಥ ಕಾಲದಲ್ಲಿ ಭರದಿಂದ, ಭರಾಟೆಯಲ್ಲಿ ಹೇಳಿದ್ದಾರೆ. ಅದೇ ರೀತಿಯಾಗಿ ಉತ್ತರ ಕೊಟ್ಟಿದ್ದಾರೆ. ತದನಂತರ ನಮ್ಮ ಎಲ್ಲಾ ನಾಯಕರು ಮತ್ತು ಮಾನ್ಯ ಖರ್ಗೆಯವರಾಗಲಿ, ಮಾನ್ಯ ಮಾಧುಸ್ವಾಮಿಯವರು ಮಾನ್ಯ ಶ್ರೀರಾಮ ರೆಡ್ಡಿಯವರು, ಮಾನ್ಯ ರಾಜೇಂದ್ರನ್ ಅವರು ಹಾಗೂ ವಿಶೇಷವಾಗಿ ನಮ್ಮ ಮಾನ್ಯ ಮಾಜಿ ಹಣಕಾಸಿನ ಸಚಿವರೂ ಹಾಗೂ ಉಪ ಮುಖ್ಯಮಂತ್ರಿ ಆಗಿದ್ದಂತಹ ಶ್ರೀ ಸಿದ್ಧರಾಮಯ್ಯನವರೂ ಕೂಡ ಮಾತನಾಡಿದ್ದಾರೆ. ಇವತ್ತು ಬಜೆಟ್ ಮಂಡನೆ ಮಾಡುವ ಕಾಲದಲ್ಲಿ ನಾವು ಯಾವ್ಯಾವ ಮಾತುಗಳನ್ನು ಹೇಳಿದ್ದೇವೆ, ಅವುಗಳ ಬಗ್ಗೆ ಸ್ಪಷ್ಟವಾದಂತಹ ಉತ್ತರ ಬೇಕು. ಇವತ್ತು ನಾವು ಹೇಳಿದ್ದೇವೆ. ಅಗ್ರಿಕಲ್ಚರ್ ಸೆಕ್ಟರ್‌ನಲ್ಲಿ 4 ಪರ್ಸೆಂಟ್ ಎಂದು ಹೇಳಿದ್ದಾರೆ. ನಾವು ಮಂಡಿಸಿರತಕ್ಕಂಥ ಕಾಲದಲ್ಲಿ 2004–05ರಲ್ಲಿ That was poor and pro-farmer budget - - - -- ಆಗಿತ್ತು. ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದಂತಹ ಕಾಲದಲ್ಲಿ. 6 ಪ್ರತಿಶತ ಮೇಲೆ ಬಡ್ಡಿ ಕೊಡತಕ್ಕಂಥಾದ್ದು ಇತ್ತು. ಆಗ ತಾವು ಮಾನ್ಯ ವಿರೋಧ ಪಕ್ಷದ ನಾಯಕರಾಗಿದ್ದೀರಿ. ಇಡೀ ರಾಷ್ಟ್ರದಲ್ಲಿ ಇದರ ಬಗ್ಗೆ ಚರ್ಚೆಆಗಿದೆ. ತದ ನಂತರ ನೀವೇನು ಮಾಡಿದ್ದೀರಿ? ನಾವು ಇವತ್ತು 4 ಪರ್ಸೆಂಟ್ ಬಡ್ಡಿಯಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ. ಮೊನ್ನೆ ಕೂಡ ಮಾನ್ಯ ಚಿದಂಬರಂ ಅವರು ಪಾರ್ಲಿಮೆಂಟ್‌ನಲ್ಲಿ ಹೇಳಿದ್ದಾರೆ. 7 ಪರ್ಸೆಂಟ್ ಇದೆ, ಆಗ ಕೊಡತಕ್ಕ ಕಾಲದಲ್ಲಿ ಹೆಚ್ಚು. ಇವತ್ತು ನಾವು ಪರ್ಸೆಂಟೇಜ್‌ವೈಸ್ ಕೂಡ ಉಲ್ಲೇಖ ಮಾಡಿ ನಿಮಗೆ ಹೇಳಿದ್ದೇವೆ. ಕೋರ್ ಸೆಕ್ಟರ್‌ನಲ್ಲಿ ಏನೇನು ಹಣ ಎನ್ನತಕ್ಕದ್ದು ಹೇಳಿದ್ದೇವೆ. ಅದನ್ನು ಕೇಳಲಿಕ್ಕೇ ಅವರು ತಯಾರು ಇಲ್ಲ. ನಾವು ಹೋದ ಸಾರಿ 2005–06ರಲ್ಲಿ ಇರಿಗೇಷನ್‌ಗೆ 29 ಪರ್ಸೆಂಟ್ ಕೊಟ್ಟಿದ್ದೆವು, ತಾವೀಗ 26 ಪರ್ಸೆಂಟ್ ಕೊಟ್ಟಿದ್ದೀರಿ. ಹೆಚ್ಚು ಅಂಕಿಗಳನ್ನು ಕೊಟ್ಟಿದ್ದೀರಿ. ಏಕೆಂದರೆ, ನಾನು ಹೇಳುತ್ತೇನೆ. ಆ ನಂತರ ತಾವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಸಾರ್ ಒಂದು ನಿಮಿಷ. ನಾನೇನೋ ಮಾಹಿತಿ ಕೊಟ್ಟಿಲ್ಲ, ಕೊಡುತ್ತೇನೆ ಎಂದು ಹೇಳುತ್ತಿದ್ದೇನೆ. ನಾನು ಮಾತನಾಡುವಂತಹ ಕಾಲದಲ್ಲಿ ಕೆಲವು ತೆರಿಗೆ ರಿಯಾಯಿತಿಗಳನ್ನು ಕೊಟ್ಟಿದ್ದೇನೆ. ಅದನ್ನು ಹೇಳುವುದರಲ್ಲಿ ನನ್ನ ಕಡೆಯಿಂದ ಸ್ವಲ್ಪ ಕೊರತೆ ಆಯಿತು. ಅದಕ್ಕಾಗಿ ನಾನು ಎದ್ದು ನಿಂತಿದ್ದೇನೆ, ಅನ್ಯಥಾ ಯಾರೂ ಭಾವಿಸಬಾರದು. ಈ ಅರಿಶಿನ ಕೊಂಬಿಗೆ ತೆರಿಗೆಯಲ್ಲಿ ನಾನು ವಿನಾಯ್ತಿಯನ್ನು ಕೊಡುತ್ತಿದ್ದೇವೆ. ಈ ಬೀಡಿಗೆ ಪ್ರವೇಶ ತೆರಿಗೆಯಲ್ಲಿ ವಿನಾಯಿತಿ ನೀಡಲಾಗುತ್ತಿದೆ. 2006–07ನೇ ಸಾಲಿಗೆ ಬೀಡಿ ಎಲೆಯ ಜೊತೆಗೆ ಬೀಡಿಗೂ ಸಹ ನಾವು ತೆರಿಗೆ ವಿನಾಯಿತಿಯನ್ನು ಕೊಡುತ್ತಿದ್ದೇವೆ. ತೆಂಗಿನ ನಾರಿಗೆ ವ್ಯಾಟ್‌ನಿಂದ ವಿನಾಯಿತಿ ಇದೆ. ಆದರೆ ತೆಂಗಿನ ನಾರಿನ ಉತ್ಪಾದನೆಗಳಿಗೆ ಶೇಕಡಾ 4 ರಷ್ಟು ವ್ಯಾಟ್ ಇದೆ. ಬೇರೆ ರಾಜ್ಯಗಳಲ್ಲಿ ಇದು ಇಲ್ಲ. ಅದಕ್ಕೋಸ್ಕರವಾಗಿ ಆ ಒಂದು ತೆರಿಗೆ ವಿನಾಯಿತಿಯನ್ನು ನಾನು ಕೊಡುತ್ತಿದ್ದೇನೆ. ಇನ್ನೂ ಚಪ್ಪಲಿಗಳಿಗೆ ವಿನಾಯಿತಿ. ಒಂದೇ ಅಚ್ಚಿನಲ್ಲಿ ಎರಕಗೊಂಡ ಬಹುತೇಕವಾಗಿ ಬಡವರು ಬಳಸುವ ಪ್ಲಾಸ್ಟಿಕ್ ಚಪ್ಪಲಿಗಳಿಗೆ

ವ್ಯಾಟ್‌ನಿಂದ ತೆರಿಗೆ ವಿನಾಯಿತ ಕೊಡುತ್ತಿದ್ದೇವೆ. ಗೋಡಂಬಿ ಮೇಲೆ ಶೇಕಡಾ 4 ರಷ್ಟು ವ್ಯಾಟ್ ಅನ್ವಯ ಆಗುತ್ತಿದೆ. ಆ ಬಗ್ಗೆ ಒಂದು ವಿನಾಯಿತಿಯನ್ನು ನಾನು ಕೊಡುತ್ತಿದ್ದೇನೆ. ಆಶ್ರಯ ಮನೆ ನೋಂದಾವಣ ಮಾಡುವುದಕ್ಕೆ 250 ರೂಪಾಯಿಗಳನ್ನು ಬಡವರು ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವಾಗ ಕಟ್ಟಬೇಕು. ಅದಕ್ಕೆ 2 ರೂಪಾಯಿ ನಾಮಿನಲ್ ಎಂದು ಮಾಡಿದ್ದೇನೆ. ಆ 250 ರೂಪಾಯಿ ಏನು ಇತ್ತು ಮಾನ್ಯ ಹಿರಿಯ ಸದಸ್ಯರುಗಳು ಏನು ಸಲಹೆಗಳನ್ನು ಕೊಟ್ಟಿದ್ದೀರಿ, ಇದನ್ನು ಸಾಂಕೇತಿಕವಾಗಿ 2 ರೂಪಾಯಿಗೆ ನಿಲ್ಲಿಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದನ್ನು ನಿಲ್ಲಿಸುವಾಗ ಇನ್ನೊಂದನ್ನೂ ಕೂಡ ತಾವು ಮಾಡಬೇಕು. ಲ್ಯಾಂಡ್ ಆರ್ಮಿಯವರ ವಿಚಾರ. ಅವರಿಗೆ ನೀವು 4 ಪರ್ಸೆಂಟ್ ವ್ಯಾಟ್‌ನಲ್ಲಿ ಸೇರಿಸಿದ್ದೀರಿ. ಈಗೇನಾಗಿದೆ ಅಂದರೆ ನಾವೇನು 20 ಸಾವಿರ, ಅಥವಾ 25 ಸಾವಿರ ರೂಪಾಯಿ ಮನೆಗಳಿಗೆ ಕೊಡುತ್ತೇವೆ ಅದರಲ್ಲಿ ಪುನಃ 4 ಪರ್ಸೆಂಟ್ ಡಿಡೆಕ್ಟ್ ಮಾಡಿ ಅವರು ಮನೆ ಕಟ್ಟಬೇಕು. ಅದಕ್ಕೆ ನಾನು ಹೇಳುವುದು ಏನೆಂದರೆ ಅದನ್ನು ತಾವು ಪರಿಶೀಲನೆಮಾಡಿ ಮಾಡಿದರೆ ಅನುಕೂಲ ಆಗುತ್ತದೆ. ಅದು ಗವರ್ನಮೆಂಟಿನದ್ದು. ಅದೇನೂ ಪ್ರೈವೇಟ್‌ನವರದ್ದು ಅಲ್ಲ, ಏನೂ ಅಲ್ಲ. ಆದರಿಂದ ಏನಾಗಿದೆ ಎಂದರೆ 4 ಪರ್ಸೆಂಟ್ ವ್ಯಾಟ್‌ನಲ್ಲಿ ತೆಗೆದುಕೊಳ್ಳುತ್ತಾರೆ. ಆಮೇಲೆ ಅವರಿಗೆ 5 ಪರ್ಸೆಂಟ್ ಕಮೀಷನ್. ಆಮೇಲೆ 5 ಪರ್ಸೆಂಟ್ ಇನ್‌ಕಂ ಟ್ಯಾಕ್ಸ್ ಹಾಗೂ ಬೇರೆ ಬೇರೆ ರಾಯಲ್ಟಿ ಇತ್ಯಾದಿ – ಇವೆ. ಇದೆಲ್ಲಾ ಸೇರಿ ಅವರಿಗೆ 12 ಪರ್ಸೆಂಟ್ ಆಗುತ್ತದೆ. 12 ಪರ್ಸೆಂಟ್ ಆಗುವುದರಿಂದ ಇದನ್ನೇನೋ ಚೆನ್ನಾಗಿ ಮಾಡಿದಿರಿ. 250 ರೂಪಾಯಿ ಇದ್ದದ್ದು ಮತ್ತೆ 2 ರೂಪಾಯಿಗೆ ತಂದಿದ್ದು ಸರಿ. ಆದರೆ 12 ಪರ್ಸೆಂಟ್ ಇದ್ದುದ್ದು ಅನೇಕ ಕಡೆ ಮನೆ ಕಟ್ಟುವುದಕ್ಕೇ ಆಗುವುದಿಲ್ಲ. ಸುಮಾರು 2 ಸಾವಿರ ರೂಪಾಯಿ ನಮಗೆ ಕಡಿಮೆ ಆಗುತ್ತದೆ. ಅದಕ್ಕೆ ತಾವು ಯೋಚನೆ ಮಾಡುವುದು ಉತ್ತಮ ಎಂದು ಹೇಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಶ್ರೀ ವಿಶ್ವನಾಥ್ ಪಾಟೀಲ್ ಅವರೇ, ಕುಳಿತುಕೊಳ್ಳಿ. ಈಗ ಹೈದರಾಬಾದ್ ಕರ್ನಾಟಕ ಏರಿಯಾಗೆ ಎಷ್ಟು ಹಣಕೊಟ್ಟಿದ್ದಾರೆ ಎಂದು ನೀವು ಹಾಗೂ ಎಂ. ವೈ. ಪಾಟೀಲ್ ಅವರು ಕೇಳಿರಿ. ಈಗ ಎರಡನೆಯದಾಗಿ ಕೋರ್ ಸೆಕ್ಟರ್‌ನಲ್ಲಿ ಇವತ್ತಿನ ದಿವಸ ಹಣ ಕಡಿಮೆ ಮಾಡಿದ್ದೀರಿ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಹೋದ ಸಲ ಅಗ್ರಿಕಲ್ಚರ್‌ಗೆ 6.33 ಆದರೆ ಈಗ 5.79 ಇದೆ. ಎಲ್ಲಿ ಹೆಚ್ಚು ಹಣ ಒದಗಿಸಿದ್ದೀರಿ? ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಹಣ ಒದಗಿಸಿದ್ದೇವೆ ಎಂದು ಹೇಳಿದಿರಿ. ಹೋದ ವರ್ಷ 4.51. ಈ ವರ್ಷ ಒದಗಿಸಿರುವುದು 4.41 ಇದೆಲ್ಲಾ ಇದೇ ತರಹ ಹೇಳಿದ್ದೀರಿ. ಯಾವ ಕೋರ ಸೆಕ್ಟರ್‌ನಲ್ಲಿ ಕೂಡ ಏರಿಸಿಲ್ಲ. ತಾವೇನು ಇವತ್ತಿನ ಬಜೆಟ್‌ನಲ್ಲಿ ಹೇಳಿದ್ದೀರಿ, ಅದನ್ನು ನಾನು ಒಪ್ಪುತ್ತಿದ್ದೇನೆ. ಮೊದಲು 2004–05ನೇ ಸಾಲಿನಲ್ಲಿ 13, 556 ಇತ್ತು. ಮೊನ್ನೆ 13ನೇ ಜನವರಿಯಲ್ಲಿ ಪ್ಲಾನ್ ಔಟ್‌ಲೇನಲ್ಲಿ ಕೂಡ 16, 156 ಇದೆ. ಇವತ್ತು ಬೊಕ್ಕಸದಲ್ಲಿ ಕೂಡ ಹಣ ಇದೆ. ಅಬೆಲ್ಲವನ್ನೂ ಕೂಡ ನಾವು ಮಾಡುತ್ತಿದ್ದೇವೆ. ಇವತ್ತು ತಾವು ಸ್ಪಷ್ಟವಾಗಿ. ರಾಜ್ಯ ಸರ್ಕಾರ ಏನು ಮಾಡುತ್ತಿದೆ ಎಂದು ಹೇಳಬೇಕು. ರಾಜ್ಯ ಸರ್ಕಾರ ಏನು ಮಾಡುತ್ತಿದೆ ಎಂದರೆ 'ಕೇವಲ ಭಾಗ್ಯಲಕ್ಷ್ಮಿ ಯೋಜನೆ'. 'ಹೆಣ್ಣುಮಕ್ಕಳಿಗೆ ಹೆಚ್ಚಿನ ಅನುಕೂಲತೆ ಕೊಡತಕ್ಕ ಯೋಜನೆ'. ಇದು ಇವೆ. ಇವತ್ತು ತಾವು ಬಹಳಷ್ಟು ಕೂಡ ಜನಪ್ರಿಯವಾದಂತಹ

ರೀತಿಯಲ್ಲಿ ಮಾಡಿದ್ದೇವೆ ಎನ್ನತಕ್ಕ ರೀತಿಯಲ್ಲಿ ತಾವೇನು ಹೋಗುತ್ತಿದ್ದೀರಿ ಅದಕ್ಕೆ ಇದು ಸರಿ ಹೋಗುವುದಿಲ್ಲ. ಇವತ್ತು ನಾವು ಹೇಳಿದ್ದೇವೆ. ಸಂವಿಧಾನ ಆರ್ಟಿಕಲ್ 371ರ ವಿಚಾರದಲ್ಲಿ ಎಷ್ಟು ಸಲ ತಾವು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದೀರಿ? ಯಾವಾಗಲೂ ಕೂಡ ತಾವು ಪ್ರಧಾನ ಮಂತ್ರಿಗಳನ್ನು ಭೇಟಿ ಆದಾಗ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಸಂವಿಧಾನದ ತಿದ್ದುಪಡಿ ಆಗಬೇಕು ಎಂದು ಹೇಳುತ್ತೀರಿ. ಅದು ಇನ್ನೂ ಜೀವಂತ ಇದೆ ಮಾನ್ಯ ಉಪ ಮುಖ್ಯಮಂತ್ರಿಗಳೇ. ಇವತ್ತು ಮಾನ್ಯ ಶಿವರಾಜ್ ಪಾಟೀಲ್ ಅವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದರು. ವಿದರ್ಭ ಮಾದರಿಯ ಮೇಲೆ ಆಗಬೇಕಾ? ಏನು ಅಮೆಂಡ್‌ಮೆಂಟ್ ಆಗಬೇಕಾ ಎಂದು. ಅದರ ಬಗ್ಗೆ ಏನು ಮಾಡಿದಿರಿ? ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಇದೆ. ಸಾಕಷ್ಟು ರಿಯಾಯಿತಿಗಳು ಇದೆ. ಇವತ್ತು ಯಾವ ರೀತಿಯಾಗಿ ತೆಲಂಗಾಣಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ. ಬೇರೆ ಕಡೆಯಲ್ಲಿ ಕೂಡ ಕೊಟ್ಟಿದ್ದೀರಿ, ಅದೇ ರೀತಿ ಸವಲತ್ತು ಕೊಡಬೇಕೆಂದು ಹೇಳಿದಾಗ ಅದರ ಬಗ್ಗೆ ಪ್ರಸ್ತಾಪ ಮಾಡಿದರು. ಇವತ್ತು ನಾವು ಕಳಸಾ-ಬಂಡೂರಿ ಬಗ್ಗೆ ಕೇಳುತ್ತಿದ್ದೇವೆ, ಇವತ್ತು ಮಾನ್ಯ ಪ್ರಧಾನ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ನಿಮಗೇ ಕರೆದುಕೊಂಡು ಹೋಗಿದ್ದೆ. ನಾವಿಬ್ಬರೇ ಹೋಗಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹೋಗಿ ಏನು ಮಾತನಾಡುತ್ತಿದ್ದಾರೆ? ನಾವು ಮತ್ತು ಸಿದ್ಧರಾಮಯ್ಯನವರು, ಮಾನ್ಯ ಖರ್ಗೆಯವರು ಎಲ್ಲರೂ ಕೂಡ 7-8 ಸಲ ಭೇಟಿ ಆಗಿದ್ದೇವೆ. ಕಳಸಾ ಬಂಡೂರಿ ಮೇಲೆ ನೀವು ಸ್ಟೇ ಅನ್ನೂ ವೆಕೇಟ್ ಮಾಡಬೇಕು ಎಂದು ಹೇಳಿದ್ದೇವೆ. ಆವಾಗ ಎಲ್ಲಾ ಕಡೆ ಕೂಡ ಕೇಂದ್ರ ಸರ್ಕಾರ ಒಪ್ಪಿತ್ತು. ಇವತ್ತೂ ಹೋಗುತ್ತಿದ್ದೇವೆ ಎನ್ನತಕ್ಕಂಥ ಮಾತನಾಡುತ್ತಿದ್ದೀರಿ, ಮೆಟ್ರೋ ಬಗ್ಗೆ ಹೇಳಿದ್ದೀರಿ. ಮೆಟ್ರೋ ಬಗ್ಗೆ ನಾವೇ ಮಾಡಿದ್ದೇವೆ. ನಿವೇನು ಮಾಡತಕ್ಕದ್ದು ಇದೆ? ಮೆಟ್ರೋ ಬಗ್ಗೆ ಇವತ್ತು ಮಾನ್ಯ ನಾರಾಯಣ ಮೂರ್ತಿಯವರಿಗೆ ಲ್ಯಾಂಡ್ ಕೊಡ ತಕ್ಕ ಬಗ್ಗೆ, ನಾರಾಯಣ ಮೂರ್ತಿಯವರಿಂದ ನಿಮಗೆ ಅಭಿವೃದ್ಧಿಗೊಳಿಸುವ ಸಂಸ್ಥೆಗಳ ವಿಚಾರವಾಗಿ ಪ್ರತ್ಯೇಕವಾದ ಸದನದಲ್ಲಿ ನಾವು ಮಂಡಿಸುತ್ತೇವೆ. ಇವತ್ತು ಬಜೆಟ್ ಮಂಡನೆಯಲ್ಲಿ ಬಿಸಿ ಊಟದ ಕಾರ್ಯಕ್ರಮದ ಬಗ್ಗೆ ಉಲ್ಲೇಖ ಇಲ್ಲ. ಈಗಾಗಲೇ ಹೇಳಿದ್ದಾರೆ. ಬಹಳಷ್ಟು ಸಲ ನಮ್ಮ ಎಲ್ಲಾ ಸದಸ್ಯರು ಕೂಡ ಹೇಳಿದ್ದಾರೆ. ನಮ್ಮ ಮಾನ್ಯ ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ರಾಯಚೂರಿನಲ್ಲಿ, ದೇವದುರ್ಗದಲ್ಲಿ ಪ್ರಾರಂಭ ಮಾಡತಕ್ಕಂಥ 5ನೇ ತರಗತಿ ಇರತಕ್ಕದ್ದು ಇವತ್ತು ನಾವು 7ನೇ ತರಗತಿಯವರೆಗೆ ಬಿಸಿ ಊಟದ ಕಾರ್ಯಕ್ರಮ ವಿಸ್ತರಿಸಿದ್ದೇವೆ. ನಾವು ಅದರ ಬಗ್ಗೆ 288 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ನಿಮಗೆ ಹೆಣ್ಣು ಮಕ್ಕಳ ಬಗ್ಗೆ ಕಾಳಜಿ ಇರತಕ್ಕಂಥ ಕಾರ್ಯಕ್ರಮ ಮಾಡತಕ್ಕದ್ದು ಈ ರಾಜ್ಯದಲ್ಲಿರತಕ್ಕಂಥ ಡ್ರಾಪ್‌ಔಟ್ಸ್ 11 ಲಕ್ಷ 40 ಸಾವಿರ ಇದೆ. ಅದರ ಬಗ್ಗೆ ಏನು ಕಾರ್ಯಕ್ರಮ ಇದೆ? ಬಿಸಿ ಊಟದ ಕಾರ್ಯಕ್ರಮದ ಬಗ್ಗೆ, ಬಡವರಿಗೆ ಬಿಲೋ ದಿ ಪಾವರ್ಟಿ ಲೈನ್‌ನಲ್ಲಿರತಕ್ಕ ಜನರಿಗೆ ನೀವು ಕೊಟ್ಟಿದ್ದೀರಿ ಎನ್ನತಕ್ಕದ್ದನ್ನೂ ಕೂಡ ತಾವು ಹೇಳಬೇಕು. ಇವತ್ತು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಕುಳಿತು ಏನು ಮಾತನಾಡಿದ್ದಾರೆ, ಇನ್ನೂ ಅದೇ ಭರಾಟೆಯಲ್ಲಿ ಅಲ್ಲಿಯೂ ಮಾತನಾಡಿದ್ದಾರೆ. ಈ ಬಜೆಟ್ ಮಂಡಿಸುವುದು ಬಹಳ ಕಷ್ಟದ ಕೆಲಸ. ಕಾಮನ್ ಮಿನಿಮಮ್ ಪ್ರೋಗ್ರಾಮ್ ಮಾಡತಕ್ಕ ರೀತಿಯಲ್ಲಿ ಮಾನ್ಯ ಸಿದ್ಧ ರಾಮಯ್ಯನವರಿಗೂ ಗೊತ್ತು. ಎರಡು ತಿಂಗಳುಗಳ ಕಾಲ ನಾವು ಚರ್ಚೆ

ಮಾಡಿದ್ದೇವೆ. ಕೇವಲ ನಮ್ಮ ಮಂತ್ರಿಗಳಲ್ಲ. ಇಡೀ ನಮ್ಮ ಪಕ್ಷಕ್ಕೆ ಇವತ್ತು ಸಹಕಾರ ಕೊಡತಕ್ಕಂಥ ಜನರ ಜೊತೆಗೆ ಕೂಡ ಸಮಾಲೋಚನೆ ಮಾಡಿ ಒಂದು ಕಾರ್ಯಕ್ರಮ ನಿರೂಪಣೆ ಮಾಡಿದ್ದೇವೆ. ನೀವು ದೆಹಲಿಯಿಂದ ಬಂದು ಏಕಾಏಕಿ ಕೃಷ್ಣಾದಲ್ಲಿ ಕುಳಿತು ಸಿಎಂಪಿ ಏನು ಬಿಡುಗಡೆ ಮಾಡಿದ್ದೀರಿ, ಕಾಮನ್ ಮಿನಿಮಮ್ ಪ್ರೋಗ್ರಾಮ್ ಆ ತರಹ ಅಲ್ಲ. ಇವತ್ತು ತಾವು ಮಾಡಿ. ನಾವು ಇಲ್ಲಿ ಕುಳಿತಿದ್ದೇವೆ. ಇಲ್ಲಿ ಕುಳಿತು ಚರ್ಚೆ ಮಾಡತಕ್ಕ ಕಾಲದಲ್ಲಿ ತಾವು ಎಷ್ಟು ಸಲ ಕುರ್ಚಿಯ ಮೇಲೆ ಕುಳಿತು ಮಾತನಾಡಿದ್ದೀರಿ? ಪ್ರತಿ ಒಂದು ವಿಷಯದ ಬಗ್ಗೆ ಕೂಡ ಯಾವಾಗಲೂ ವಾಕೌಟ್ ಮಾಡಿದ್ದೀರಿ. ನಾವು ವಾಕೌಟ್ ಮಾಡತಕ್ಕಂಥ ಜನ ಅಲ್ಲ. ಇವೊತ್ತಿನ ದಿವಸ ಸರ್ಕಾರ ಮಾಡತಕ್ಕಂಥ ಕಾಲದಲ್ಲಿ ಎಲ್ಲಿ ತಪ್ಪಿದ್ದೀರಿ, ಎಲ್ಲಿ ಎಡವಿದ್ದೀರಿ, ಅಲ್ಲಿ ನಾವು ತಮಗೆ ಇವೊತ್ತು ಎತ್ತಿ ಹೇಳುತ್ತಿದ್ದೇವೆ. . ಇವೊತ್ತಿನ ದಿವಸ ಸ್ಪಷ್ಟವಾಗಿ ಹೇಳುವುದಾದರೆ, ಮಾನ್ಯ ಯಡಿಯೂರಪ್ಪನವರೆ, ನೀವು ಇದರ ಬಗ್ಗೆ ಗಮನ ಕೊಟ್ಟಿಲ್ಲ. ಮತ್ತೆ ಇವೊತ್ತು Employment Guarantee Scheme ಅಡಿ ಕೇಂದ್ರದಿಂದ ಹಣ ಬರುತ್ತದೆ. ನಿಮ್ಮ ಕಡೆ ಅದು ಇರಲಿಲ್ಲ. ಮಾನ್ಯ ಯಡಿಯೂರಪ್ಪನವರೆ, ನೀವು ಕೆಲಸ ಮಾಡುತ್ತೀರಿ, ಪೂರ್ಣ ಪ್ರಮಾಣದ ಹಣ ಕೇಂದ್ರದಿಂದ ಬರುತ್ತದೆ. ಅದರ ಬಗ್ಗೆ ನಿಮ್ಮ ಸ್ಕೀಮ್‌ನಲ್ಲಿ ಹೇಳಲಿಲ್ಲ. SC/ST Scholarship ಬಗ್ಗೆ ಹೇಳಲಿಲ್ಲ. ಕೇಂದ್ರದಿಂದ ಬರುವ ಹಣದ ಬಗ್ಗೆ ಹೇಳಲಿಲ್ಲ. ಗ್ರಾಮೀಣ ವಿದ್ಯುತ್ ಕಾರ್ಯಕ್ರಮದ ಬಗ್ಗೆಯೂ ಉಲ್ಲೇಖಿಸಿಲ್ಲ. ಕೇಂದ್ರದ ಸಹಾಯದ ಬಗ್ಗೆ, ಕೇಂದ್ರದಿಂದ ಏನು ಹಣ ಬರುತ್ತದೆ, ಅವೆಲ್ಲವನ್ನೂ ಕೂಡ ತೆಗೆದುಕೊಳ್ಳುವ ಪ್ರಯತ್ನವನ್ನೂ ಮಾಡಬೇಕು. ಇವೊತ್ತು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ತಾವು ಯಾವಾಗ ಡಾ.ಎಂ. ನಂಜುಂಡಪ್ಪನವರ ವರದಿ ಬಗ್ಗೆ ಹೇಳಿದ್ದೀರಿ? ಪ್ರಧಾನಮಂತ್ರಿಗಳು ಇಲ್ಲಿಗೆ ಬಂದಾಗ ಕೇಳಿದ್ದೇವೆ. 9600 ಕೋಟಿ ರೂಪಾಯಿ ಏನು ಖರ್ಚು ಮಾಡಬೇಕಾಗುತ್ತದೆ, ಅದನ್ನು ಅನುಷ್ಠಾನಕ್ಕೆ ತರತಕ್ಕಂಥ, ಕಾಲದಲ್ಲಿ ಕೇಂದ್ರದಿಂದಲೂ ಹಣ ಕೊಡಬೇಕೆಂಬ ರೀತಿಯಲ್ಲಿ ರಾಜ್ಯದ ಹಿತದೃಷ್ಟಿಯಿಂದ ಇವೊತ್ತು ತಾವೆಲ್ಲ ಕೂಡಿ ಕೆಲಸ ಮಾಡಬೇಕಾಗುತ್ತದೆ. ನಾವು ಹೇಳಿದ್ದೇವೆ. hidden agenda ಒಳಗಡೆ ಇದೆ. ಒಂದೊಂದು ಪದ ಉಪಯೋಗಿಸಿದ್ದೀರಿ. ಅದನ್ನು ಇವೊತ್ತು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಜನ ಸಾಮಾನ್ಯರು, ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ವರ್ಗದವರಿದ್ದಾರೆ, ಅಲ್ಪ ಸಂಖ್ಯಾತರಿದ್ದಾರೆ, ಬೇರೆ ಬೇರೆ ಜನರಿದ್ದಾರೆ. ನಿಮ್ಮ ಬಜೆಟ್‌ನಲ್ಲಿ ಆ ಸ್ಥಾನದಲ್ಲಿ ಕುಳಿತು ಮಾತನಾಡುವಾಗ ಪ್ರತಿಯೊಂದೂ ಪದಗಳೂ ಕೂಡ ಜನರ ಮನಸ್ಸಿನಲ್ಲಿ ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ಬರಬೇಕಾಗಿದೆಯೇ ಹೊರತು, ಬೇರೆ ತರಹದ ಭಾವನೆಗಳನ್ನು ಮೂಡಿಸುವ ರೀತಿಯಲ್ಲಿ ಅಲ್ಲ. ಇದರ ಬಗ್ಗೆ ಸ್ಪಷ್ಟವಾಗಿ ತಾವು ಏನು ಹೇಳಿದ್ದೀರಿ, ನನಗನ್ನಿಸುತ್ತದೆ, ನಾವು ಏನೇನು ಉಲ್ಲೇಖಿಸಿದ್ದೇವೆ, ಅದರ ಬಗ್ಗೆ ಹೇಳಲಿಲ್ಲ. ಕ್ಲಾರಿಫಿಕೇಶನ್ ಮಾಡುವ ಕಾಲದಲ್ಲಿ, ಹೇಳತಕ್ಕಂಥ ಕಾಲದಲ್ಲಿ ನಾವೆಲ್ಲರೂ ಅದನ್ನು ಬಹಳಷ್ಟು ಕೇಳುವುದಕ್ಕಾಗುವುದಿಲ್ಲ. ಇನ್ನು ನಕ್ಸಲೈಟ್ಸ್ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಎಷ್ಟರ ಮಟ್ಟಿಗೆ ಅದನ್ನು ಮಾಡುವುದರ ಕಡೆ ಆಸಕ್ತಿ ಇದೆಯೋ ಗೊತ್ತಿಲ್ಲ. ಒಂದು ಮಾತು ಇದೆ. ಯಾವಾಗಲೂ ಕೂಡ ನಿಮ್ಮ ಮಿತ್ರ ಪಕ್ಷದವರೇನಿದ್ದಾರೆ, ಅದರ ಬಗ್ಗೆ ಅವರ ಮನೋಭಾವನೆ ವಿಧವಿಧವಾಗಿವೆ. ಇವೊತ್ತು ಬುಲೆಟ್‌ನಿಂದ ಆಗುವುದಿಲ್ಲ, ಬ್ಯಾಲೆಟ್‌ನಿಂದ ಆಗುತ್ತದೆ. Socio-Economic problem ಬಗ್ಗೆ ಹೇಳಲಿಲ್ಲ. ಬಿಜೆಪಿ ಸರ್ಕಾರವಿರುವ ನಿಮ್ಮದೇ ಜಾರ್ಖಂಡ್ ರಾಜ್ಯದಲ್ಲಿ Naxalites activies

ಬೆಳೆಯುತ್ತಿದೆ. ಇದರಿಂದಾಗಿ ಇವೊತ್ತಿನ ದಿವಸ ಬಹಳಷ್ಟು ತೊಂದರೆಯಾಗಿದೆ. ಬಿಜೆಪಿ ಜೊತೆಯಲ್ಲಿರುವ ಮಿತ್ರಪಕ್ಷಗಳು, ಒರಿಸ್ಸಾದಲ್ಲಿ ಕೂಡ ಯಾವ ರೀತಿ ಆಗಿದೆಯೆಂದರೆ, ಬೆಳೆಯಲಾರದ ರೀತಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಇದೆ. ಆ ಬಡ ಜನರ, ಶೋಷಿತ ಜನರ ಮತ್ತು ವಿಶೇಷವಾಗಿ, ಇವೊತ್ತು ಪರಿಶಿಷ್ಟ ಜಾತಿಯವರಿಗೆ ಎಲ್ಲಿ frustration ಇದೆ, ನಿರಾಶೆ ಇದೆ, ಅಲ್ಲಿ ಒಂದು ತರಹದ ನೀತಿ – ನಿರೂಪಣೆ ಮಾಡಬೇಕಾಗುತ್ತದೆ. ಆ ನೀತಿ – ನಿರೂಪಣೆ ಮಾಡತಕ್ಕಂಥಾದ್ದರ ಬಗ್ಗೆ ಸದಸ್ಯರಾದ ಮಾನ್ಯ ರವಿಯವರಿಗೆ ಮತ್ತು ಆರಗ ಜ್ಞಾನೇಂದ್ರ ಅವರನ್ನು ಕೇಳಿದರೆ ಹೇಳುವುದಿಲ್ಲ. ಅವರದ್ದೇ ಧೋರಣೆ ಬೇರೆ ಇದೆ. ಇವೊತ್ತು naxalities activitiesಗೆ ಸರಿಯಾದ ರೀತಿಯಲ್ಲಿ ಮಾಡುವುದರ ಬಗ್ಗೆ ಸ್ಪಷ್ಟವಾದ ಉತ್ತರ ಕೂಡ ಸಿಕ್ಕಿಲ್ಲ ಅದರ ಬಗ್ಗೆ ನಾನು ಹೇಳಿದ್ದೇನೆ. ಇವೆಲ್ಲಾ ಅಂಶಗಳನ್ನೂ ಕೂಡ ತಾವು ಪ್ರಸ್ತಾಪ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾವು ಮಾತನಾಡಿದ ಮಾತಿಗೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಏನಾದರೂ ಪ್ರತಿಕ್ರಿಯೆ ಸಿಗುತ್ತದೆಂದು ಅಂದುಕೊಂಡು ಇಲ್ಲಿ ಕಾಯುತ್ತಾ ಕುಳಿತಿದ್ದೆವು. ಏಕೋ ಏನೋ ಈ ಕಡೆಯವರ ಯಾವುದೇ ಮಾತನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಂಡು ಉತ್ತರ ತಯಾರಿಸಿದ್ದಾರೆ ಎಂದು ಅನ್ನಿಸಲಿಲ್ಲ. ಆದರೂ ಕೂಡ ಈಗ ನಾನು ಪುನಃ ಅವರ ಗಮನಕ್ಕೆ ತರುವುದಕ್ಕೆ ಬಯಸುವುದೇನೆಂದರೆ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೆ. ಕೊಬ್ಬರಿ ಉದ್ದಿಮೆ ಹಾಳಾಗುತ್ತಿದೆ, ತೆಂಗು ಬೆಳೆಗಾರರು ಹಾಳಾಗುತ್ತಿದ್ದಾರೆ, ಪಕ್ಕದ ತಮಿಳುನಾಡಿನವರು ಟ್ಯಾಕ್ಸ್ ಹಾಕುವುದಿಲ್ಲವೆಂದು ಎಲ್ಲರೂ ಅಲ್ಲಿಂದ ಖರೀದಿಸುತ್ತಿದ್ದಾರೆ. ಹೇಗಾದರೂ ಮಾಡಿ ಕೊಬ್ಬರಿ ಮೇಲಿರುವ 4 ಪರ್ಸೆಂಟ್ ಟ್ಯಾಕ್ಸನ್ನು ತೆಗೆದು ಹಾಕದೇ ಹೋದರೆ ತಿಪಟೂರು ಮಾರುಕಟ್ಟೆ, ಅರಸೀಕೆರೆ ಮಾರುಕಟ್ಟೆ ಎಲ್ಲವೂ ಮುಚ್ಚಿಹೋಗುತ್ತದೆ ಎಂದು ಹೇಳಿದ್ದೇನೆ. ಮತ್ತೊಮ್ಮೆ ನಾನು ಒತ್ತಾಯ ಮಾಡುತ್ತಿದ್ದೇನೆ. ಕೊಬ್ಬರಿ ಮೇಲೆ ತಾವು ತೆರಿಗೆ ತೆಗೆಯಬೇಕು. ಇಲ್ಲದಿದ್ದರೆ, ಉತ್ತರ ಕರ್ನಾಟಕಕ್ಕೆ ಹೋಗುವ ಎಲ್ಲಾ ಬಾಲ್‌ಕೋಪ್ರಾ ಸರ್ವ ನಾಶವಾಗಿ ಹೋಗಿದೆ. ತೆಂಗು ಬೆಳೆಯುವವರು ನಾಶವಾಗಿದ್ದಾರೆ. ಈಗಲಾದರೂ ತಾವು ಉತ್ತರ ಕೊಡಬೇಕು. ಅದರ ಮೇಲಿರುವ ತೆರಿಗೆ ತೆಗೆಯಬೇಕು. ಎರಡನೆಯದಾಗಿ, ನೇಕಾರರದ್ದು ಕೆಎಸ್‌ಎಫ್‌ಸಿ ಸಾಲ ನೆಗೋಷಿಯೇಟ್ ಮಾಡುವುದಕ್ಕಾಗಿಲ್ಲ. ಅವರು ಸಹಕಾರ ಸಂಘಗಳಿಂದ ತೆಗೆದುಕೊಂಡ ಸಾಲವನ್ನು ಮನ್ನಾ ಮಾಡುವುದು, ಮತ್ತು ರಿಯಾಯಿತಿಯಲ್ಲಿ ಕಡಿಮೆ ಮಾಡಿ ಬಡ್ಡಿ ಕೊಡಿಸುವ ಸ್ಕೀಮ್ ತಂದಿದ್ದೀರಿ. ಬಹಳಷ್ಟು ನೇಕಾರರು ಕೆಎಸ್‌ಎಫ್‌ಸಿಯಲ್ಲಿ ಏನು ಸಾಲ ತೆಗೆದುಕೊಂಡಿದ್ದಾರೆ, ಅಲ್ಲಿಂದ ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡುವುದು. ಅಥವಾ one time settlement ಮಾಡುವುದಕ್ಕೆ ತಾವು ಏನಾದರೂ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಬೇಕು. ಅದರ ಜೊತೆಗೆ ಅರ್ಬನ್ ಬ್ಯಾಂಕ್‌ನಲ್ಲಿ ಕೂಡ ಅವರು ಸಾಲ ತೆಗೆದುಕೊಳ್ಳುತ್ತಿದ್ದಾರೆ. ನೇಕಾರರು ಬಹಳ ಜನ ವಾಸವಾಗಿರುವುದು ಪಟ್ಟಣ ಪ್ರದೇಶಗಳಲ್ಲಿ. ವಿಎಸ್‌ಎಸ್‌ಎನ್ ಆಗಲಿ ಅಥವಾ ಡಿಸಿಸಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಫೈನಾನ್ಸ್ ಮಾಡುವ ಕಡೆಗಿಂತಲೂ ಹೆಚ್ಚಾಗಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಅವರು ಹೆಚ್ಚಾಗಿ ಸಾಲಗಾರರಾಗಿದ್ದಾರೆ. ಆ ಸಾಲವೇನಾದರೂ ಮನ್ನಾ ಮಾಡುತ್ತೀರಾ? ಮತ್ತೆ ಮುಂದೆ ಕೊಡುವ ಸಾಲದಲ್ಲಿ ಅವರಿಗೆ ಏನಾದರೂ 4 ಪರ್ಸೆಂಟ್‌ಗೆ ಇಳಿಸುತ್ತೀರಾ? ತಾವು ಹೇಳಬೇಕು.

ಮೂರನೆಯದಾಗಿ, ಕೋಳಿ ಮತ್ತು ಇಟ್ಟಿಗೆ ಸರ್ವ ನಾಶವಾಗಿದೆ. 12 ವರ್ಷಗಳಿಂದ ಅವರಿಗೆ ಕೊಡಬೇಕಾದ ಸಬ್ಸಿಡಿಯನ್ನು ಸರ್ಕಾರ ಕೊಟ್ಟಿಲ್ಲವೆಂದು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇವೆ, ಕೋಳಿ ಫಾರ್ಮ್ ಮತ್ತು ಇಟ್ಟಿಗೆ ಮಾಡುವ ಗ್ರಾಮೀಣ ಕಸುಬುದಾರರ ವಿರುದ್ಧ ಅಧಿಕಾರಿಗಳ ಮಟ್ಟದಲ್ಲಿ ಇಲ್ಲೊಂದು ದೊಡ್ಡ ಷಡ್ಯಂತ್ರ ನಡೆಯುತ್ತಿದೆ. ಕೋಳಿಗೆ ಮತ್ತು ಇಟ್ಟಿಗೆಯವರಿಗೆ ಅದರಲ್ಲೂ ಕೋಳಿ ಉದ್ದಿಮೆದಾರರ ಪರವಾಗಿ ಒತ್ತಾಯ ಮಾಡಿ ಏಕೆ ಹೇಳುತ್ತಿದ್ದೇವೆಂದರೆ, ಈಗ ಕೋಳಿಗಳೆಲ್ಲವನ್ನು ನಾಶ ಮಾಡಿದ್ದಾರೆ. 400 ಕೋಟಿ ರೂಪಾಯಿಗಳಷ್ಟು ಇವೊತ್ತು ಬಂಡವಾಳ ಏನು ಹೂಡಿಕೊಂಡಿದ್ದರು, ಅವರು ನಿರ್ನಾಮವಾಗಿದ್ದಾರೆ. ಹಾಗಾಗಿ, ಕೋಳಿ ಮತ್ತು ಇಟ್ಟಿಗೆ ಮೇಲಿನ ಸಬ್ಸಿಡಿ ಬಾಕಿ ಏನಿದೆ, ದಯವಿಟ್ಟು ಅದನ್ನು ತೆಗೆಯುವುದಕ್ಕೆ ದೊಡ್ಡ ಮನಸ್ಸು ಮಾಡುತ್ತೀರಾ? ಅವರನ್ನು ಏನಾದರೂ ಬದುಕಿಸುವುದಕ್ಕೆ ಒಂದು ಪ್ರಯತ್ನ ಮಾಡುತ್ತೀರಾ? ನಾಲ್ಕನೆಯದಾಗಿ, ಸಣ್ಣ ನೀರಾವರಿಗೆ ಏನಾದರೂ ಹಣ ಹೆಚ್ಚು ಮಾಡುತ್ತೀರಾ? ನಾನು ಹೋದ ಸಲ ಮಾನ್ಯ ಸಿದ್ದರಾಮಯ್ಯನವರ ಭಾಷಣದ ಮೇಲೆ ಮಾತನಾಡುವಾಗ ಹೇಳಿದ್ದೆ. ಒಂದು ಎಕರೆ ನೀರಾವರಿಗೆ ಮಾಡುವ ಖರ್ಚನ್ನು ಸಣ್ಣ ನೀರಾವರಿ ವಲಯ ಅಥವಾ ಬಯಲುಸೀಮೆ ವಲಯಕ್ಕೆ ಮಾಡಿದರೆ, 40 ಎಕರೆ ನಾವು ಇವೊತ್ತು potential ಆಗಿ ತಯಾರಿಸಬಹುದು. ಮತ್ತು surface water management ನಲ್ಲಿ ಭೂಗರ್ಭದಲ್ಲಿರುವ ನೀರನ್ನು ಮೇಲ್ಮಟ್ಟಕ್ಕೆ ತರಬಹುದು. ಇವೊತ್ತು ಸಣ್ಣ ನೀರಾವರಿ ವಲಯದಲ್ಲಿ ಇಡೀ ಕರ್ನಾಟಕಾದ್ಯಂತ ನೀರಾವರಿ ಮಾಡಿದರೂ 37 ಪರ್ಸೆಂಟ್‌ಗಿಂತ ಮೇಲೆ ಹೋಗುವುದಕ್ಕಾಗುವುದಿಲ್ಲ. ಈ ರಾಜ್ಯದ ಮೇಲ್ಮೈ ಪ್ರಕಾರ ನೀರಾವರಿಯಲ್ಲಿ ನೀವು 37 ಪರ್ಸೆಂಟ್ ದಾಟುವುದಕ್ಕಾಗುವುದಿಲ್ಲ. ಮಾನ್ಯ ಯಡಿಯೂರಪ್ಪನವರೆ, ನಿಮ್ಮಿಂದ ನಿರೀಕ್ಷೆ ಮಾಡಿ ನಾವು ಇಲ್ಲಿ ಮಾತನಾಡುತ್ತೇವೆ. ನೀವು ಅವೊತ್ತು ಕೇಳಿಸಿಕೊಳ್ಳಲಿಲ್ಲ ಇವತ್ತಾದರೂ ಕೇಳಿಸಿಕೊಳ್ಳಲಿ ಅಂತ. ಸಣ್ಣ ನೀರಾವರಿ ವಲಯಕ್ಕೆ ಏನಾಗರೂ ಒತ್ತು ಕೊಟ್ಟು ನೀವು ಕೆರೆಗಳಲ್ಲಿ ಹೂಳು ತೆಗೆಸುವುದು, ಕೆರೆಯಲ್ಲಿ ನೀರು ನಿಲ್ಲಿಸುವುದು, ಕೆರೆಯಿಂದ ಇರುವ ಕಾಲುವೆಗಳನ್ನು ದುರಸ್ಥಿಗೊಳಿಸುವುದಕ್ಕೆ ಮತ್ತು ಅಲ್ಲಲ್ಲಿ ಉದಿ, ಬದು, ಆಣೆ, ಪಿಕ್ ಅಪ್ ಮಾಡುವುದಕ್ಕೆ ಹೆಚ್ಚು ಹಣ ಒದಗಿಸದೇ ಹೋದರೆ, ಈ ರಾಜ್ಯ ಬರಡಾಗುತ್ತದೆ. ಆ ಕಡೆ ಏನಾದರೂ ತಾವು ದಯಮಾಡಿ ಗಮನ ಕೊಡುತ್ತೀರಾ? ಅನಂತರ, ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 9 ಕೋಟಿ ರೂ. ತಾವು ಏನು ಕೊಡುತ್ತೇವೆಂದು ಹೇಳಿದ್ದೀರಿ, ಆರೂವರೆ ಕೋಟಿ ರೂ. ಬಿಲ್ ಪೆಂಡಿಂಗ್ ಇದೆ. ಚಿತ್ರದುರ್ಗಕ್ಕೆ ಮೀಟಿಂಗ್ ಕರೆಯಬಾರದೆಂದು ನಾವು ಅವರಿಗೆ ಹೇಳಿದೆವು. ಏಕೆಂದರೆ ನಮಗೆ ಟಿಎ, ಡಿಎ ಕೊಡುವುದಕ್ಕೂ ಅವರಲ್ಲಿ ದುಡ್ಡಿಲ್ಲ. ಪುಗಸಟ್ಟೆ ಕಾರಿನಲ್ಲಿ ಹೋಗಿ ಬರುವುದಕ್ಕೆ ನಮಗೂ ಮನಸ್ಸಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ಇದೆ. ನೀವು ಆಗಲೇ ಶಿಕಾರಿಪುರ, ರಾಮನಗರ ಬೆಳೆಸಿಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ ಮತ್ತೆ ಮಲೆನಾಡಿಗೆ 40 ಕೋಟಿ ಇಡುತ್ತೇವೆಂದು ಹೇಳಿ 72 ಜನ ವಿಧಾನಸಭಾ ಸದಸ್ಯರು ಇರುವಂತಹ ಕ್ಷೇತ್ರಕ್ಕೆ 9 ಕೋಟಿ ರೂ ಇಡುತ್ತೀರಿ. ಅಲ್ಲಿ 6 ಕೋಟಿ ರೂ ಚಿಲ್ಲರೆಯಷ್ಟು ಬಿಲ್ ಪೇಮೆಂಟ್ ಮಾಡಬೇಕಾಗಿದೆ. ಅಲ್ಲಿಗೆ 3 ಕೋಟಿ ರೂ. ಇಡುತ್ತೀರಿ. 72 assembly constituencies ಬರುವ ಕಡೆ ಈ ಬಯಲುಸೀಮೆಗೆ ತಾವೇನಾದರೂ ಹಣ ಜಾಸ್ತಿ ಮಾಡಲೇಬೇಕು, ಅದು ಅವರ ಮನಸ್ಸಿಗೆ ಬಿಟ್ಟದ್ದು. 75 ಪರ್ಸೆಂಟ್ ನನಗೆ ದೇವರು ಅಧಿಕಾರ

ಕೊಟ್ಟ ದಿವಸ ಎಲ್ಲಾ ರೈತರಿಗೂ ಕೊಟ್ಟು ಹೊರಟುಹೋಗುತ್ತೇನೆಂದು ಅವರು ಹೇಳಿದರಲ್ಲಾ ಅದರಲ್ಲಿ ಏನಾದರೂ 15-20 ಪರ್ಸೆಂಟ್ ಇಲ್ಲಿಂದ ಶುರು ಆಗುತ್ತದೆಯೇ ಎಂದು ನಾನು ಕೇಳುತ್ತಿದ್ದೇನೆ. ಐದನೆಯದಾಗಿ, ಪಂಚಾಯತ್ ಅನುದಾನ ಜಾಸ್ತಿ ಮಾಡಬೇಕೆಂದು ನಾವು ಕೇಳಿದ್ದೆವು ಕಾರಣ ಇಷ್ಟೇಃ ಪಂಚಾಯತ್‌ನವರಿಗೆ ಪವರ್ ಟಾರಿಫ್ ಕಟ್ಟುವುದಕ್ಕಾಗುತ್ತಿಲ್ಲ. ಕೆಇಬಿ ಟಾರಿಫ್ ಕಟ್ಟುವುದಕ್ಕಾಗುವುದಿಲ್ಲ. ಅವರಿಗೆ ಅನುದಾನ ಜಾಸ್ತಿ ಮಾಡದೇ ಹೋದರೆ, ಕೆಇಬಿ ಹಣ ಎಲ್ಲಿಯಾದರೂ ನೀವು 50 ಪರ್ಸೆಂಟ್, 60 ಪರ್ಸೆಂಟ್ ಸಬ್ಸಿಡೈಸ್ ಮಾಡಿ ಕೊಡದೇ ಹೋದರೆ, ಹಳ್ಳಿಗಳಲ್ಲಿ ದೀಪ ಉರಿಯುವುದಿಲ್ಲ. ಕುಡಿಯುವ ನೀರು ಕೊಡುವುದಕ್ಕೆ ಪಂಚಾಯತ್‌ನವರಿಗೆ ಆಗುವುದಿಲ್ಲ. ಅವರು ಏನೇ ಶ್ರಮಪಟ್ಟು ರೆವಿನ್ಯೂ ಕಲೆಕ್ಟ್ ಮಾಡಿದರೂ ಅವರ ಪೂರ್ತಿ ರೆವಿನ್ಯೂ ಕೆಇಬಿ ಟಾರಿಫ್ ಕಟ್ಟುವುದಕ್ಕೆ ಆಗದಂಥ ಸ್ಥಿತಿಗೆ ಪಂಚಾಯತ್‌ಗಳು ಬಂದಿವೆ. ಅದನ್ನು ದಯಮಾಡಿ ತಾವು ಮಾಡಿಕೊಡಬೇಕು. ಇನ್ನು ರೈತರು ಉಪಯೋಗಿಸುವ ಡೀಸೆಲ್‌ಗೆ ಸಬ್ಸಿಡೈಸ್ ಮಾಡಬೇಕು. ದೋಣಿಯಲ್ಲಿ ಓಡಾಡುವವರಿಗೆ ಸಬ್ಸಿಡೈಸ್ ಮಾಡಿದಂತೆ, ಈಗ ಡೀಸೆಲ್ ಬೆಲೆ 35-36 ರೂಪಾಯಿಗಳಿವೆ. ಹೊಲದಲ್ಲಿ ಗೆಯ್ಯುವವರಿಗೆ ಡೀಸೆಲ್‌ಗೆ ಸಬ್ಸಿಡೈಸ್ ಕೊಡದೆ ಹೋದರೆ ಅಷ್ಟು ಹಣ ಕೊಟ್ಟು ಡೀಸೆಲ್ ಹಾಕಿಕೊಂಡು ಟ್ರ್ಯಾಕ್ಟರ್‌ನಲ್ಲಿ ಉಳುಮೆ ಮಾಡುವುದು ಕಷ್ಟವಾಗುತ್ತದೆ. ಅದನ್ನು ಇನ್‌ಪುಟ್ ಎಂದು ತಿಳಿದುಕೊಂಡು ಟ್ರ್ಯಾಕ್ಟರ್‌ನಲ್ಲಿ ಉಳುಮೆಗೆ ಬಳಸುವ ಡೀಸೆಲ್‌ಗೆ ಏನಾದರೂ ವೈಜ್ಞಾನಿಕವಾಗಿ ಒಂದು ಕಾರ್ಯಕ್ರಮ ಹಾಕುವುದಕ್ಕಾಗುತ್ತದೆಯೇ ನಾನು ಕೇಳುತ್ತೇನೆ. ದಯವಿಟ್ಟು ತಾವು ಇವಕ್ಕೆಲ್ಲಾ ಉತ್ತರ ಹೇಳುತ್ತೀರೆಂದು ನಿರೀಕ್ಷಿಸಿ ತಾವೇನಾದರೂ ಕೊಬ್ಬರಿಗೆ ಟ್ಯಾಕ್ಸ್ ತೆಗೆಯದೆ ಹೋದರೆ, ಈ ರಾಜ್ಯದಲ್ಲಿ ಕೊಬ್ಬರಿ ವಹಿವಾಟನ್ನೇ ಮರೆತುಬಿಡಬೇಕಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್: ತಮಗೆ ಒಂದು ವಿನಂತಿ. ಇದು ಏನಾಗುತ್ತದೆಂದರೆ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ನಮಗೆ ಯಾರಿಗೂ ಮಾತನಾಡಲು ಅವಕಾಶ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಯಾರು ಮಾತನಾಡಿಲ್ಲವೋ ಅವರಿಗೆ ಅವಕಾಶ ಕೊಡಬೇಕೆಂದು ಕೇಳುತ್ತಿದ್ದಾರೆ. ನೀವು ಈಗ ಮಾತನಾಡಿ ನಿಮ್ಮ ಅಭಿಪ್ರಾಯ ಹೇಳಿದ್ದೀರಿ, ನಾವು ಮಾತನಾಡಿಲ್ಲ, ನಮಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರಿಗೆ ಅಂದರೆ ಮಾನ್ಯ ಪಾಟೀಲ್‌ರವರಿಗೆ ಅವಕಾಶ ಕೊಡುವುದು ಬಿಡುವುದು ನಿಮಗೆ ಬಿಟ್ಟಿದ್ದು. ಅದು ಅವರ ಹಣೆಬರಹ. ನೀವು ನಮ್ಮ ಸುದ್ದಿ ಏಕೆ ಮಾತನಾಡುತ್ತೀರಿ? ನೀವೇನೂ ಸಣ್ಣ ಹುಡುಗರಲ್ಲ ನೀವು ನಮಗಿಂತಲೂ ಮೊದಲೇ ಎಂಎಲ್‌ಎ ಆಗಿರುವವರು. ಅವರು youngsters ಮಾತನಾಡುತ್ತಾರೆಂದು ನಾವು ಸಹಿಸಿಕೊಂಡರೆ ನೀವು ಪದೇ ಪದೇ. 'ಮುಂದಿನ ಬೆಂಚ್, ಮುಂದಿನ ಬೆಂಚ್' ಎಂದು ಹೇಳಿದರೆ ಹೇಗೆ? ತಮಗೆ ಹೇಳುತ್ತೇನೆ, ಅವರು ನಮ್ಮ ಸುದ್ದಿ ಮಾತನಾಡಕೂಡದು.

(ಗೊಂದಲ)

ಅಧ್ಯಕ್ಷರು : ಆಯಿತು. ಅವರೇನೋ ಒಂದು ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಶಾಸನ ಸಭೆಯಲ್ಲಿ ಒಂದು ಸಂಪ್ರದಾಯವಿದೆ. ಯಾರು ಮೊದಲು ಮಾತನಾಡಬೇಕೆಂದು ಇದೆ.

ಅಧ್ಯಕ್ಷರು : ಆಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಏನಿದು? ಪ್ರತಿದಿವಸ ನಿಂತುಕೊಂಡು ಈ ಮಾತುಗಳನ್ನು ಹೇಳುತ್ತಾರೆ.

ಅಧ್ಯಕ್ಷರು : ಇದೆಲ್ಲಾ ಇದ್ದದ್ದೇ. ಪ್ರತಿಯೊಬ್ಬರೂ ಮಾತನಾಡಲು ಅವಕಾಶ ಕೇಳುತ್ತಾರೆ. ಕೆಲವರಿಗೆ ಕೊಡುವುದಕ್ಕಾಗುತ್ತದೆ. ಕೆಲವರಿಗೆ ಕೊಡಲು ಆಗುವುದಿಲ್ಲ. ಏನೂ ಮಾಡುವುದಕ್ಕಾಗುವುದಿಲ್ಲ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಅದನ್ನು ನಿಮ್ಮ ಪಾರ್ಟಿಯವರನ್ನು ಕೇಳಿಕೊಳ್ಳಿ. ನಮ್ಮನ್ನೇನು ಕೇಳುತ್ತೀರಿ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಹಾಗಾದರೆ ಅವರು ಕೇಳಬೇಡವೆ?

(ಗೊಂದಲ)

ಅಧ್ಯಕ್ಷರು : ಮುಂದೆ ಹಾಗೆ ಮಾಡೋಣ. ಈಗ ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಶ್ರೀ ಎಸ್. ಎಸ್. ಪಾಟೀಲ್ : ಹಿಂದಿನ ಸಾಲಿನವರು ಏನು ಮಾಡಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವೇನೂ ಅವರ ಪರವಾಗಿ ವಕಾಲತ್ತು ಮಾಡಬಾರದು.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್: (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೆ, ನಾನು ಭಾಷಣ ಮಾಡುವಾಗ ಕೆಲವು ಪ್ರಮುಖವಾದ ವಿಚಾರಗಳನ್ನು ಮಾನ್ಯ ಹಣಕಾಸು ಸಚಿವರ ಗಮನಕ್ಕೆ ತಂದಿದ್ದೆ. ಬಸವಶ್ರೀ ಪ್ರಶಸ್ತಿಯನ್ನು ಕೊಡುತ್ತಿದ್ದೀರಿ, ಸಂತೋಷ. ಟಿಪ್ಪುಸುಲ್ತಾನ್ ಹೆಸರಿನಲ್ಲಿ ಒಂದು ಪ್ರಶಸ್ತಿ ಕೊಡಬೇಕು, ಅದನ್ನು ನೀವು ಬದಲಾವಣೆ ಮಾಡಿ ಎಂದು ಹೇಳಿದ್ದೆ. ಅವರು ತಮ್ಮ ಉತ್ತರದಲ್ಲಿ ಹೇಳಲಿಲ್ಲ. ಗಡಿನಾಡಿನ ಬಗ್ಗೆ ಪ್ರತಿವರ್ಷ, ಅದಕ್ಕೆ ವರದಿಯನ್ನು ಕೊಟ್ಟಿದ್ದೇವೆ, ಅದಕ್ಕೆ ಎಷ್ಟು ಹಣವನ್ನು ಈ ವರ್ಷ ಇಟ್ಟಿದ್ದೀರಿ ಎಂದು ಕೇಳಿದ್ದೆ. ಅದರ ಬಗ್ಗೆಯೂ ಹೇಳಲಿಲ್ಲ. ಬೆಳಗಾವಿ ಬಗ್ಗೆ ನಾವು ತೀರಾ ಮಾತನಾಡುತ್ತೇವೆ. ಬೆಳಗಾವಿಯನ್ನು ಉಳಿಸಿಕೊಳ್ಳಬೇಕು, ಬೆಳಗಾವಿ ನಮ್ಮದೇ ಎಂದು ಮಾತನಾಡುತ್ತಿದ್ದೇವೆ. ಬೆಳಗಾವಿಯಷ್ಟು ಹಿಂದುಳಿದಿರತಕ್ಕದ್ದು, ಬೀದರ್‌ನಷ್ಟು ಹಿಂದುಳಿದಿರತಕ್ಕದ್ದು ಇದರ ಬಗ್ಗೆ ನಾವು ಪ್ರಾಮಾಣಿಕವಾಗಿ ಯಾವುದನ್ನೂ ಹೇಳಲಿಲ್ಲ. ಬೆಳಗಾವಿಯಲ್ಲಿಯೂ ಒಂದು ಶಾಸನ ಸಭೆಯ ಅಧಿವೇಶನ ನಡೆಸಬೇಕೆಂದು ಹೇಳಿದೆ. ಅದರ

ಬಗ್ಗೆ ಅವರು ಹೇಳಲಿಲ್ಲ. ಶಾಸಕ ನಿಧಿಯ ಬಗ್ಗೆ, ಐವತ್ತು ಲಕ್ಷ ರೂ ಹಿಂದಿನಿಂದ ಕೊಟ್ಟಿದ್ದೀರಿ, ನೀವು ಈಗ ಅಧಿಕಾರಕ್ಕೆ ಬಂದಿದ್ದೀರಿ, ನೀವು ಈ ಕಡೆ ಕುಳಿತಿದ್ದಾಗ ಒಂದು ಕೋಟಿ ರೂ. ಶಾಸಕರ ನಿಧಿ ಕೊಡಬೇಕೆಂದು ಹೇಳಿದ್ದೀರಿ, ನಾನೂ ಒತ್ತಾಯ ಮಾಡಿದ್ದೆ. ಅದೂ ಕೂಡ ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ಬರಲಿಲ್ಲ. ರಾಮನಗರ, ಶಿಕಾರಿಪುರ ಮತ್ತು ಯಾದ್‌ಗಿರ್ ಇಷ್ಟಕ್ಕೆ ನೀವು ಇಟ್ಟುಕೊಂಡುಬಿಟ್ಟರೆ ನಮ್ಮ ತಾಲ್ಲೂಕುಗಳು ತೀರಾ ಹಿಂದುಳಿದಿದೆ, ಆದ್ದರಿಂದ ಸಮಾನತೆ ಇದ್ದುಬಿಡಲಿ. ಬರೀ ಮೂರೇ ತಾಲ್ಲೂಕು ಬಂದಾಗ ಬಹುತೇಕ ಎಲ್ಲಾ ಶಾಸಕರುಗಳು ನಿಮಗೆ ಹೇಳದೇ ಇರಬಹುದು, ಅನುಮಾನದಲ್ಲಿ ಅದು ಮೂರೇ ತಾಲ್ಲೂಕಿನ ಅಭಿವೃದ್ಧಿ ಎಂದು ಬರುತ್ತದೆ. ಅಭಿವೃದ್ಧಿಯಾಗಲಿ ನಮಗೆ ಸಂತೋಷ. ಆದರೆ ಎಲ್ಲಾ ತಾಲ್ಲೂಕಿನ ಬಗ್ಗೆಯೂ ತಾವು ತೀವ್ರವಾದ ಗಮನಹರಿಸಬೇಕೆಂದು ಹೇಳಿದ್ದೆ. ಅದರ ಬಗ್ಗೆ ಹೇಳಲಿಲ್ಲ. ಮಹಿಳೆಯರ ಶೌಚಾಲಯದ ಬಗ್ಗೆ ಏನು ಹೇಳಿದ್ದೆ, ಅದರ ಬಗ್ಗೆ ಕೂಡ ತಾವು ಹೇಳಲಿಲ್ಲ. ಸಗಟು ವ್ಯಾಪಾರಸ್ಥರು ಎಲ್ಲಾ ಕಡೆ ಬಂದು ಹೋಗುತ್ತಿದ್ದಾರೆ. ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತನ್ನಿ, ನಿಮಗೆ ಇಚ್ಛಾಶಕ್ತಿ ಇದ್ದರೆ ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತನ್ನಿ. ಅದಕ್ಕೆ ಇಚ್ಛಾಶಕ್ತಿ ಬೇಕು. ಬೇರೆ ಕಡೆಯಿಂದ ಅದರ ಉತ್ಪನ್ನವನ್ನು ಪಡೆದುಕೊಳ್ಳೋಣ. ಇದರಿಂದ ಜನರಿಗೆ ಅನುಕೂಲವಾಗುತ್ತದೆ. ಹಳ್ಳಿಗಾಡಿನ ಜನರಿಗೆ ಅನುಕೂಲವಾಗುತ್ತದೆ. ಸಾರಾಯಿ ನಿಲ್ಲಿಸುತ್ತೇವೆ, ಎಲ್ಲಾ ಕಡೆ ಪಾನನಿರೋಧ ಜಾರಿಗೆ ತರುತ್ತೇವೆಂದು ಸ್ಪಷ್ಟವಾಗಿ ಹೇಳಿ. ಇಲ್ಲದಿದ್ದರೆ ಆ ಸಗಟು ವ್ಯಾಪಾರಸ್ಥರನ್ನೆಲ್ಲಾ ಕಿತ್ತು ನೀವು ಯಾವುದೋ ಒಂದು ಮಂಡಳಿಗೆ ಕೊಟ್ಟಿದ್ದೀರಿ, 10–15 ಸಾವಿರ ಜನ ಕೆಲಸ ಮಾಡತಕ್ಕವರೆಲ್ಲರೂ ನಿರುದ್ಯೋಗಿಗಳಾಗುತ್ತಾರೆ. ಅವರಿಗೆ ಉದ್ಯೋಗ ಕೊಡತಕ್ಕ ಪ್ರಶ್ನೆ ಈಗ ಬಂದಿದೆ. ಆದ್ದರಿಂದ ನನಗನ್ನಿಸುತ್ತದೆ ದಯಮಾಡಿ ತಾವು ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕು. ನೀವು ನನಗೆ ಮತ್ತೆ ಉತ್ತರ ಕೊಡುವಾಗ 'ಇದೆ' ಎಂದು ಹೇಳಿ ಇಲ್ಲದಿದ್ದರೆ 'ಇಲ್ಲ'ವೆಂದು ಹೇಳಿ. ಪುನಃ ನಾನು ನಿಮ್ಮನ್ನು ವಿರೋಧ ಮಾಡಿಕೊಂಡು ಸಭಾತ್ಯಾಗ ಮಾಡುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಉಪಮುಖ್ಯಮಂತ್ರಿಯವರು ಹಾಗೂ ಹಣಕಾಸು ಮಂತ್ರಿಗಳಿಗೆ ಬಜೆಟ್ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಬಹಳ ಪ್ರಮುಖವಾದ ವಿಚಾರಗಳನ್ನು ಅವರ ಗಮನಕ್ಕೆ ತಂದೆವು. ಒಂದೇ ಒಂದು ವಿಚಾರಕ್ಕೆ ಕೂಡ ಅವರು ಯಾವುದೇ ಉತ್ತರವನ್ನು ಕೊಡಲಿಲ್ಲ. ಮತ್ತೆ ನಾನು ಅದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾದ ಕೆಲವು ವಿಚಾರಗಳನ್ನು ಹೇಳುತ್ತೇನೆ. ಮಾನ್ಯ ಮಾಧುಸ್ವಾಮಿಯವರೇನು ಕೆಲವು ವಿಚಾರಗಳನ್ನು ಹೇಳಿದ್ದಾರೆ ಅದಕ್ಕೆ ನನ್ನದೂ ಸಹ ಸಹಮತವಿದೆ. ಅದನ್ನು ಅವರು ಹೇಳಲೇ ಬೇಕು. ಬಯಲು ಸೀಮೆಯದ್ದು ಬಹಳ ಪ್ರಮುಖವಾಗಿ 72 ಕ್ಷೇತ್ರಗಳು ಬರುತ್ತವೆ. ಈ 72 ಕ್ಷೇತ್ರಗಳಿಗೆ ಬರಿ 9 ಕೋಟಿ ರೂ. ಕೊಡುತ್ತೀರಿ, ಮಲೆನಾಡು ಅಭಿವೃದ್ಧಿ ಮಂಡಳಿಗೆ 40 ಕೋಟಿ ರೂ. ಕೊಡುತ್ತೀರಿ. ಇದು ಪಕ್ಷಪಾತ ಹೌದೋ ಅಲ್ಲವೋ? ಇಲ್ಲದಿದ್ದರೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ಮುಚ್ಚಿಬಿಡಿ. ಆರೂವರೆ ಕೋಟಿ ರೂ. ಬಿಲ್ ಪೆಂಡಿಂಗ್ ಇದೆ, 9 ಕೋಟಿ ರೂ ಹಣ ಕೊಡುತ್ತೀರಿ. ಇನ್ನು ಎರಡೂವರೆ ಕೋಟಿ ರೂಪಾಯಿಯಲ್ಲಿ ಸಂಬಳ ಸಾರಿಗೆಗೆ ಹೋದರೆ ಅಭಿವೃದ್ಧಿ ಕೆಲಸ ಏನು ಮಾಡಲು ಸಾಧ್ಯವಾಗುತ್ತದೆ? ಆದ್ದರಿಂದ

ನಾನು ಮಾನ್ಯ ಮುಖ್ಯಮಂತ್ರಿಯವರಿದ್ದಾರೆ, ನಾವು ಬಯಲುಸೀಮೆಯಲ್ಲಿ 72 ಜನರಿದ್ದೇವೆ. ಧರಣಿ ಮಾಡಲು ಅವಕಾಶ ಮಾಡಿಕೊಡಬೇಡಿ. ನಮಗೆ ಕನಿಷ್ಟ 50 ರೂ ಕೋಟಿ ಹಣವನ್ನು ಕೊಡಿ. 72 ಕ್ಷೇತ್ರಗಳಿಗೆ 50 ಕೋಟಿ ರೂ. ಗಳನ್ನು ಕೊಡಲೇ ಬೇಕು. ಎರಡನೆಯದು, ಪೌಲ್ಟ್ರಿ ಉದ್ಯಮ ಭಾರಿ ಬಿಕ್ಕಟ್ಟಿಗೆ ಸಿಕ್ಕಿದೆ. ಅದರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ಅವರಿಗೆ ಸಬ್ಸಿಡಿಯನ್ನು ಕೊಡಿ. ಮತ್ತು ಬರ್ಡ್ ಫ್ಲೂ ಎಂದು ಅವರೇನು ನೂರಾರು ಕೋಟಿ ರೂ ನಷ್ಟವನ್ನು ಅನುಭವಿಸಿದ್ದಾರೆ ಅವರಿಗೆ ಸಾಲದ ಮೂಲಕವಾದರೂ ಅದನ್ನು ಕೊಡಿಸಿ, ಉಳಿದವರಿಗೆ ಸಬ್ಸಿಡಿಯನ್ನು ಇಟ್ಟಿಗೆ ಮತ್ತು ಪೌಲ್ಟ್ರಿಯವರಿಗೆ ಕೊಡಬೇಕು. ಮೈನರ್ ಇರಿಗೇಷನ್‌ಗೆ ಹಣ ಭಾರಿ ಕಡಿಮೆ ಕೊಟ್ಟಿದ್ದೀರಿ. ನಮ್ಮಲ್ಲಿ ಅದರಲ್ಲೂ ಬಯಲುಸೀಮೆಯಲ್ಲಿ 72 ಕ್ಷೇತ್ರಗಳು ಸತತವಾಗಿ ಬರಗಾಲಕ್ಕೆ ತುತ್ತಾಗತಕ್ಕ ಕ್ಷೇತ್ರಗಳು. ಆದ್ದರಿಂದ ಅಲ್ಲಿ ನೀರನ್ನು ಶೇಖರಣೆ ಮಾಡಿಡಲು ಸಣ್ಣ ಸಣ್ಣ ಚೆಕ್‌ಡ್ಯಾಂಗಳನ್ನು ಕಟ್ಟಲಿಕ್ಕೆ ಹೆಚ್ಚು ಹಣವನ್ನು ನೀವು ಖರ್ಚು ಮಾಡಬೇಕಾಗುತ್ತದೆ. ಅದಕ್ಕೆ ಹೆಚ್ಚು ಹಣವನ್ನು ನೀವು ಕೊಡಬೇಕು. ಏಕೆಂದರೆ ನಮ್ಮಲ್ಲಿ ಮೇಜರ್ ಇರಿಗೇಷನ್ ಬರುವುದಿಲ್ಲ. ಮೇಜರ್ ಇರಿಗೇಷನ್ಸ್‌ಗೆ ಖರ್ಚು ಮಾಡಲು ನಮ್ಮ ಹತ್ತಿರ ಯಾವುದೂ ಇಲ್ಲ. ಮೈನರ್ ಇರಿಗೇಷನ್‌ಗೆ ನೀವು ಏನಾದರೂ ಇವತ್ತು ಪ್ರಾಧಾನ್ಯತೆಯನ್ನು ಕೊಟ್ಟು ಈ ಬರಗಾಲ ಪ್ರದೇಶಗಳಲ್ಲಿ ನೀರನ್ನು ಸ್ಟೋರ್ ಮಾಡಲಿಕ್ಕೆ ಬೇಕಾಗಿರುವ ವ್ಯವಸ್ಥೆಯನ್ನು ಮಾಡುವುದಕ್ಕೆ ಚೆಕ್‌ಸಡ್ಯಾಂಗಳನ್ನು, ಒಂದೊಂದು ಅಸೆಂಬ್ಲಿ ಕ್ಷೇತ್ರದಲ್ಲಿ ಕನಿಷ್ಟ ಒಂದು ವರ್ಷದಲ್ಲಿ 50–100 ಚೆಕ್‌ಡ್ಯಾಂಗಳನ್ನು ನಿರ್ಮಾಣ ಮಾಡಲು ಬೇಕಾಗಿರತಕ್ಕ ಹಣವನ್ನು ಒದಗಿಸಿಕೊಡಬೇಕೆಂದು ನಾನು ತಮಗೆ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಮಿನಿ ವಿಧಾನಸೌಧ, ಡಾ॥ ನಂಜುಂಡಪ್ಪನವರ ವರದಿಯಲ್ಲಿ ಏನಿದೆ, ಅದಕ್ಕೆ ಮೊದಲ ಆದ್ಯತೆಯನ್ನು ಕೊಡಬೇಕು. ಡೀಸೆಲ್ ಮೇಲೆ ಎಕ್ಸ್ಐಸ್ ಡ್ಯೂಟಿ. ಈಗ ಒಂದು ಲೀಟರ್ ಡೀಸೆಲ್ 36 ರೂಪಾಯಿಗಳಿದೆ. Actually ಅದರ ರೇಟು ಇರತಕ್ಕದ್ದು 16 ರೂಪಾಯಿಗಳು. ಉಳಿದದ್ದೆಲ್ಲವೂ ಟ್ಯಾಕ್ಸ್. ಅದರಲ್ಲಿ ಸ್ಟೇಟ್ ಎಕ್ಸ್ಐಸ್ ಡ್ಯೂಟಿ ಜಾಸ್ತಿ ಇದೆ. ಆದ್ದರಿಂದ ಅದನ್ನು ದಯವಿಟ್ಟು ಕಟ್ ಮಾಡಬೇಕು. ನೀವು ಬಜೆಟ್ ಮಾಡುವುದಕ್ಕೆ ಮೊದಲು ತಾವು ಪ್ರೆಸ್‌ನಲ್ಲಿ ನಮ್ ಸ್ಟೇಟ್ ಎಕ್ಸ್ಐಸ್ ಡ್ಯೂಟಿ ಕಡಿಮೆ ಮಾಡುತ್ತೇವೆ, ಡೀಸೆಲ್ ರೇಟ್ ಕಡಿಮೆ ಮಾಡುತ್ತೇವೆಂದು ಹೇಳಿದ್ದಿರಿ. 16 ರೂಪಾಯಿ ಒರೀಜನಲ್ ರೇಟ್ ಇದೆ. ಉಳಿದದ್ದೆಲ್ಲಾ ಟ್ಯಾಕ್ಸ್ ಇದೆ, ಎಕ್ಸೈಸ್ ಡ್ಯೂಟಿ ಇದೆ. ಆ ಎಕ್ಸೈಸ್ ಡ್ಯೂಟಿಯನ್ನು ಡೀಸೆಲ್ ಮೇಲೆ ದಯವಿಟ್ಟು ಕಡಿಮೆ ಮಾಡಬೇಕು. ರೈತರೂ ಉಳಿದುಕೊಳ್ಳುತ್ತಾರೆ, ಬಡಜನರಿಗೆ ಬಸ್ ಚಾರ್ಜ್ ಕಡಿಮೆಯಾಗುತ್ತದೆ. ಇಲ್ಲದಿದ್ದರೆ ಕೆಎಸ್‌ಆರ್‌ಟಿಸಿಯವರು ಬಸ್ ಚಾರ್ಜ್‌ನ್ನು ಜಾಸ್ತಿ ಮಾಡಬೇಕಾಗುತ್ತದೆ. ಅನಂತರ ಲಿಕ್ಕರ್ ಹೋಲ್‌ಸೇಲ್‌ನ್ನು ದಯವಿಟ್ಟು ಕ್ಲೋಸ್ ಮಾಡಬೇಡಿ. ನೂರಾರು ಜನರು ನಿರುದ್ಯೋಗಿಗಳಾಗಿ ಬೀದಿಗೆ ಬೀಳುತ್ತಾರೆ. 10 ಕೋಟಿ ರೂ ಟ್ಯಾಕ್ಸ್ ಹೋಗುತ್ತದೆ. ಹತ್ತು ಸಾವಿರ ಜನ ಯುವಕರೇನು ಅದನ್ನು ಅವಲಂಬಿಸಿ ಜೀವನ ಮಾಡುತ್ತಿದ್ದಾರೆ ಅವರು ಬೀದಿಗೆ ಬೀಳುತ್ತಾರೆ. ಆದ್ದರಿಂದ ದಯವಿಟ್ಟು ಅದನ್ನು ಕ್ಲೋಸ್ ಮಾಡಬೇಡಿ. ಅದನ್ನು ಮುಂದುವರೆಸಬೇಕು. ಮುಂದುವರೆಸದಿದ್ದರೆ ಅಷ್ಟು ಜನರೂ ಬೀದಿಗೆ ಬೀಳುತ್ತಾರೆ, ಟ್ಯಾಕ್ಸ್ ನಷ್ಟವಾಗುತ್ತದೆ. ಬಯಲು ಸೀಮೆಗೆ ಮಾತ್ರ 50 ಕೋಟಿ ಕೊಡಲೇ ಬೇಕು. ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ. ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಲಾಟರಿ ಟಿಕೇಟ್ ಮೇಲೆ ನಾನು ಮಾತನಾಡಿದ್ದೆ. Total lottery should be banned in the State. ಆ ಸಂದರ್ಭದಲ್ಲಿ ನಮ್ಮ ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿದ ರೀತಿ ತಾವು ನನಗೆ ಉತ್ತರ ಕೊಡುವ ವೇಳೆಯಲ್ಲಿ ನಾನು ಅದನ್ನು ಸ್ಟಾಪ್ ಮಾಡಿಬಿಟ್ಟರೆ ನೂರಾರು ಜನ ಬೀದಿಗೆ ಬಂದುಬಿಡುತ್ತಾರೆ. ಇದರಿಂದ ಬಡವರಿಗೆ ಬಹಳ ಅನ್ಯಾಯವಾಗುತ್ತದೆ Medium class people are suffering a lot. Entire lottery tickets should be banned. ಅದರ ಬಗ್ಗೆ ತಾವು ಏನೂ ಹೇಳಿಲ್ಲ. ಜೊತೆಗೆ ನಾನು Industries ಬಗ್ಗೆ ಮಾತನಾಡಿದ್ದೆ. Where are that development area ಅಲ್ಲಿ ತಾವು Industriesನ್ನು ಕೊಡಬೇಕು. ಅದರ ಬಗ್ಗೆ ಸ್ಪೆಸಿಫಿಕ್ ಆಗಿ ನನ್ನ ಕ್ಷೇತ್ರದ ಬಗ್ಗೆ ನಾನು ಮಾತನಾಡಿದ್ದೇನೆ. ತಾವು ಅದರ ಬಗ್ಗೆ ಏನೂ ಉತ್ತರವನ್ನು ಕೊಟ್ಟಿಲ್ಲ. How to develop my place? The portfolio is in your hands. Kindly, ಅದನ್ನು ಜ್ಞಾಪಕ ಇಟ್ಟುಕೊಂಡು ತಾವು ಉತ್ತರ ಕೊಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಕೆಲವು ತೆರಿಗೆ ರಿಯಾಯಿತಿಗಳ ಬಗ್ಗೆ ಮಾತನಾಡಿದಿರಿ. ನಮ್ಮ ಭಾಗದಲ್ಲಿ ಹೋಟೆಲ್ ಇಂಡಸ್ಟ್ರೀಸ್ ಬಗ್ಗೆ ತಾವು ಈ ಸಲ ಏನನ್ನೂ ಕನ್‌ಸಿಡರ್ ಮಾಡಲಿಲ್ಲ. ಹೋಟೆಲ್ ಇಂಡಸ್ಟ್ರಿಯವರು ತಮಗೆ ಮನವಿಯನ್ನು ಕೊಟ್ಟಿದ್ದಾರೆ. ಅವರು ಹೋಟೆಲ್ ರೂಮ್ಸ್ 700 ರೂವರೆಗೆ ಟ್ಯಾರೀಫ್ ಇರುವವರಿಗೆ ಕನ್‌ಸೇಷನ್ ಮತ್ತು 4 ಪರ್‌ಸೆಂಟ್ ಸ್ಲ್ಯಾಬ್‌ನೆಲ್ಲಾ ಕೇಳಿದ್ದಾರೆ. ಅವರು ಏನು ಹೇಳುತ್ತಾರೆಂದರೆ, ಹೋಟೆಲ್‌ನದೆಲ್ಲಾ ಫೆರೀಷಬಲ್ ಅಲ್ಲ. ಮತ್ತೊಂದು ಅವರಿಗೆ ಸ್ಲೀಪಿಂಗ್ ಪಾರ್ಟನರ್ಸ್ ಬಹಳ ಜನರಿದ್ದಾರೆ. ಕಾರ್ಪೋರೇಷನ್, ಮುನಿಸಿಪಾಲಿಟಿಯವರು, ಪಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರು ಅನಂತರ ಬೇರೆ ಬೇರೆ ಟ್ಯಾಕ್ಸ್ ಅಧಿಕಾರಿಗಳಿದ್ದಾರೆ. ಫ್ರೀ ತಿನ್ನುವುದು, ಅದರ ಜೊತೆಗೆ ದುಡ್ಡನ್ನು ತೆಗೆದುಕೊಂಡು ಹೋಗುವುದು ಇದೆ. ಎರಡೂ ಇದೆ. ಉಂಡು ಹೋದ ಕೊಂಡು ಹೋದ. ಎರಡೂ ಆಗುತ್ತಿದೆ. ಆದ್ದರಿಂದ ಅವರಿಗೆ ಕನ್‌ಸೆಷನ್ ಕೊಡುವಂಥದ್ದು. ಆಗಬೇಕು ಮಾನ್ಯ ಸಿದ್ದರಾಮಯ್ಯನವರು ಅದನ್ನು ಎರಡು ಪರ್ಸೆಂಟ್ ಮಾಡಿದ್ದರು. ಪುನಃ ಅದನ್ನು 2 percent ಗೆ ತರಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸಣ್ಣ ನೀರಾವರಿಗೆ ಹೆಚ್ಚು ಅನುದಾನವನ್ನು ಕೊಡಬೇಕು. ನಮ್ಮ ಉಪ್ಪು ನೀರಿನ ಅಣೆಕಟ್ಟು, ಚೆಕ್ ಡ್ಯಾಂ ಇವೆರಡು, ಇದಲ್ಲದೆ ನದಿ ತಡೆ ಗೋಡೆಗಳಿಗೆ ಹೆಚ್ಚು ಅನುದಾನವನ್ನು ಕೊಡಬೇಕೆಂದು ಕೇಳುತ್ತೇನೆ. ಮೊಲಾಸಿಸ್ ಬಗ್ಗೆ ನಾನು ಮೊನ್ನೆ ಪುನಃ ಮಾತನಾಡಿದ್ದೆ. ಅದನ್ನು ಪಾನೀಯ ನಿಗಮದ ಅಡಿಯಲ್ಲಿ ತಂದು ಬಿಡಿ. ಆಗ ನಿಮಗೆ ಸರಿಯಾಗಿ ಲೆಕ್ಕ ಸಿಗುತ್ತದೆ. ಪಾನೀಯ ನಿಗಮಕ್ಕೆ ಅದನ್ನು ಕಂಟ್ರೋಲ್ ಮಾಡಲಿಕ್ಕೆ ಕೊಟ್ಟಾಗ ನಿಮಗೆ ಅದರ ಲೆಕ್ಕಾಚಾರ ಸರಿಯಾಗಿ ಸಿಗುತ್ತದೆ. ಎಲ್ಲಿಂದ, ಯಾವ cattle feedಗೆ ಹೋಗುತ್ತದೆ? ಅದರಿಂದ ಎಲ್ಲಿಗೆ ಹೋಗುತ್ತದೆ? ಇವೆಲ್ಲಾ ಮಾಹಿತಿ ನಿಮಗೆ ಸಿಗುತ್ತದೆ. ತಾವೇನು MADB ಗೆ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ರಾಷ್ಟ್ರೀಯ ಕುಟುಂಬ ಯೋಜನೆಗೆ ಕೊಟ್ಟಿದ್ದೀರಿ, ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ಪುನಃ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೀರಿ, ಧನ್ಯವಾದಗಳು. ಏಕೆಂದರೆ, ತಾವು ನೇರ cash deposit ಮಾಡುವುದಕ್ಕಿಂತ, insure ಮಾಡಿದರೆ ಒಳ್ಳೆಯದು. ದಯವಿಟ್ಟು

ಅದನ್ನು ಮಾಡಬೇಕು. ಸರ್ಕಾರಿ ನೌಕರರಿಗೆ 10% ಕೊಟ್ಟರೆ 551 ಕೋಟಿ ರೂಪಾಯಿಗಳಾಗುತ್ತದೆ ಎಂದು ನೀವು ಹೇಳಿದಿರಿ. ಹಾಗೆ ಆದರೆ, ನಿಮ್ಮ ಬಜೆಟ್‌ನ ಫೈನಲ್ ಅಂಕಿ ಅಂಶಗಳು ಎಷ್ಟಾಗುತ್ತದೆ? ಅದು surplus ಆಗುತ್ತದೋ ಅಥವಾ deficit ಆಗುತ್ತದೋ ಎಂಬುದನ್ನು ತಾವು ಹೇಳಬೇಕೆಂದು ನಾನು ಕೋರುತ್ತೇನೆ.

ಶ್ರೀ ಜಿ. ಎಸ್. ಗಡ್ಡದೇವರ ಮಠ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಒಂದನ್ನು ಪರಿಶೀಲನೆ ಮಾಡಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ರೈತರು ಕಟ್ಟುವಂತಹ ಎತ್ತುಗಳು ಅಥವಾ ರೈತರು ಹೊಂದಿರುವಂತಹ ಎತ್ತುಗಳನ್ನು ಕಟ್ಟುವಂತಹ ಹಟ್ಟಿಗಳು ಎಂದೇನು ನಾವು ಕರೆಯುತ್ತೇವೆ, ಆ ಹಟ್ಟಿಗಳಾಗಲಿ ಅಥವಾ ಅವುಗಳನ್ನು ಮೇಯಿಸಲಿಕ್ಕೆ ಒಟ್ಟಿದಂತಹ ಬಣಿವೆಗಳಾಗಲಿ, ಅವುಗಳಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿದಂತಹ ಪ್ರಸಂಗದಲ್ಲಿ ಶಾಸಕರಾದಂತಹ ನಾವು, ಆ ಪ್ರದೇಶದಲ್ಲಿ ಇರುವವರು, ಅವರನ್ನು ಮಾತನಾಡಿಸಲಿಕ್ಕೆಂದು ಹೋಗುತ್ತೇವೆ. ಆಗ ಅವರೆಲ್ಲರೂ ಸೇರಿ ನಮ್ಮನ್ನು ಕೇಳುತ್ತಿರುತ್ತಾರೆ. ಅದಕ್ಕೆ ನಾವು village accountant ಕಳುಹಿಸಿ report ತರಿಸುತ್ತೇವೆ, ಸರ್ಕಾರಕ್ಕೆ ಕಳುಹಿಸುತ್ತೇವೆ, ಪರಿಹಾರ ಕೇಳುತ್ತೇವೆ ಎಂದೆಲ್ಲಾ ಹೇಳಿ ಬರುತ್ತೇವೆ. ಸನ್ಮಾನ್ಯ ಪ್ರಕಾಶ್ ಸಾಹೇಬರು ಇದರ ಬಗ್ಗೆ ಹೇಳಬೇಕು. ಅವರಿಗೂ ನಾವು ಇಂತಹ 2–3 ಪ್ರಸಂಗಗಳ ಬಗ್ಗೆ ಹೇಳಿದ್ದೇವೆ. ಆದರೆ ಇತ್ತೀಚೆಗೆ ಸರ್ಕಾರ ಅದನ್ನು ತೆಗೆದು ಹಾಕಿದೆ. ಅದಕ್ಕೆ ಸಹಾಯ ಧನವನ್ನು ಕೊಡುವಂತಹ ವ್ಯವಸ್ಥೆಯನ್ನು ಕಡಿಮೆ ಮಾಡಿದೆ. ಅದಕ್ಕಾಗಿ ಜನರು ನಮಗೆ ಛೀಮಾರಿ ಹಾಕುತ್ತಿದ್ದಾರೆ. ನನ್ನ ತಾಲ್ಲೂಕೊಂದರಲ್ಲೇ ಇಂತಹ 7–8 ಪ್ರಕರಣಗಳಾಗಿವೆ. ಅದಕ್ಕೆ immediate ಆಗಿ ಸರ್ಕಾರ ಅಂತಹವರಿಗೆ ಏನಾದರೂ ಸಹಾಯಕ್ಕೆ ನಾವು ನಿಲ್ಲುತ್ತೇವೆ ಎನ್ನುವಂತಹ ವ್ಯವಸ್ಥೆ ಬಗ್ಗೆ ಈ ಸದನದಿಂದ ಎರಡು ಮಾತುಗಳನ್ನು ಹೇಳಬೇಕೆಂದು ನಾನು ಕೋರುತ್ತೇನೆ. ದನ ಸತ್ತಂತಹ ಪ್ರಸಂಗದಲ್ಲೂ ಕೂಡ, ಅವುಗಳಿಗೆ ಏನಾದರೂ ಒಂದು ಸಹಾಯ ಧನ ಕೊಡುತ್ತೇವೆ ಎಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಬೇಕು. ನಾವೆಲ್ಲರೂ ಬಹಳ ಸಂತೋಷ ಪಟ್ಟಿದ್ದೆವು. ಸನ್ಮಾನ್ಯ ಕುಮಾರಸ್ವಾಮಿಯವರು ಬೆಳಗಾವಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲೇ ಸ್ಥಳದಲ್ಲಿ 15 ಲಕ್ಷ ರೂಪಾಯಿಗಳನ್ನು ಇಂತಹ ಪ್ರಕರಣಗಳಿಗೆ ಕೊಡುತ್ತೇವೆ ಮತ್ತು ಇದನ್ನು ನಾವು ಬಜೆಟ್ಟಿನಲ್ಲಿ ಅನೌನ್ಸ್ ಮಾಡುತ್ತೇವೆ ಎನ್ನುವಂತಹ ಮಾತನ್ನೂ ಸಹಿತ ಅವರು ಹೇಳಿದ್ದರು. ಆಗ ನಾವು ಬಹಳ ಸಂತೋಷ ಪಟ್ಟಿದ್ದೆವು. ಆದರೆ ಈ ಒಂದು ಆಯವ್ಯಯದಲ್ಲಿ ಅದರ ಬಗ್ಗೆ ಏನೂ ಇಲ್ಲ. ತಾವು ಏನಾದರೂ ಒಂದು ಹೇಳಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನಾನು ಮಾನ್ಯ ಯಡಿಯೂರಪ್ಪನವರನ್ನು ಕೇಳುವುದೇನೆಂದರೆ, ರೈತರ ಬಡ್ಡಿ ಮನ್ನಾ ಏನು ಮಾಡಿದ್ದೀರಿ, ಅದರ ಸಲುವಾಗಿ ಈಗ 800 ಕೋಟಿ ರೂಪಾಯಿಗಳು ನೀವು ಕೊಡಬೇಕಾಗಿದೆ. ತಾವು 400 ಕೋಟಿ ರೂಪಾಯಿಗಳ ಬಗ್ಗೆ ಇದರಲ್ಲಿ ಹೇಳಿದ್ದೀರಿ, ಇನ್ನೂ 800 ಕೋಟಿ ರೂಪಾಯಿಗಳನ್ನು ತಾವು ಯಾವಾಗ ತುಂಬುತ್ತೀರಿ? ಅದನ್ನು ಲೇಟಾಗಿ ತುಂಬಿದಷ್ಟೂ ತೊಂದರೆಯಾಗುತ್ತದೆ. ಅದನ್ನು ಯಾವಾಗ ತುಂಬುತ್ತೀರಿ ಎನ್ನುವುದನ್ನೂ ಕೂಡ ತಾವು ನಿರ್ದಿಷ್ಟವಾಗಿ ನಮಗೆ ಈ ಸದನದ ಮುಖಾಂತರವಾಗಿ ಹೇಳಬೇಕು. ಇನ್ನು ಬಯಲು ಸೀಮೆ ಅಭಿವೃದ್ಧಿ ಮಂಡಳಿ ಬಗ್ಗೆ ನಮ್ಮವರು

ಈಗಾಗಲೇ ಹೇಳಿದ್ದಾರೆ. ನೀವು ಪ್ರತಿ ಕ್ಷೇತ್ರಕ್ಕೆ 1 ಕೋಟಿ ರೂಪಾಯಿಗಳನ್ನು ಕೊಡಲೇಬೇಕು. ನಾವು ಹೋದ ಸಾರಿಯೇ ಸತ್ಯಾಗ್ರಹಕ್ಕೆ ಹೊರಟ್ಟಿದ್ದೆವು. ಮಾನ್ಯ ಅಧ್ಯಕ್ಷರೆ, ನಾವು ಖಂಡಿತವಾಗಿಯೂ ನಾವು 74 ಜನ ಈ ಸಾರಿ ಸತ್ಯಾಗ್ರಹಕ್ಕೆ ಕೂಡುತ್ತೇವೆ. ದಯವಿಟ್ಟು ತಾವು ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಕೊಡುವ ಹವನ್ನು ಹೆಚ್ಚಿಗೆ ಮಾಡಬೇಕು. ಎಸ್. ಸಿ. : ಎಸ್.ಟಿ. ಗಳಿಗೆಂದು ಕೊಳವೆ ಬಾವಿಗಳನ್ನೇನು ತಾವು ತೆಗೆಯುತ್ತಿದ್ದೀರೋ, ಅಲ್ಲಿ ನಿಜವಾಗಿಯೂ ಅನ್ಯಾಯವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕು. No water, No money scheme ಇರುವುದರಿಂದ, ಅವರು ಜನರ ಕಡೆಯಿಂದ ಐದೈದು ಸಾವಿರ ರೂಪಾಯಿಗಳನ್ನು ಪಡೆದುಕೊಂಡು ಹೋಗುತ್ತಾರೆ. ನೀರು ಬಂದರೆ ನಾನು ಅಲ್ಲಿಂದ ತೆಗೆದುಕೊಳ್ಳುತ್ತೇನೆ, ಇಲ್ಲದಿದ್ದರೆ ನೀವು ಕೊಡಬೇಕು ಎಂದು ಅವರು ಹೇಳುತ್ತಾರೆ. ಆದ್ದರಿಂದ ದಯವಿಟ್ಟು ಸರ್ಕಾರವೇ ಸಂಪೂರ್ಣವಾಗಿ ಯೋಜನೆಯನ್ನು ಮುಗಿಸಿ, ಪಂಪ್‌ಸೆಟ್ ಸಹಿತ ಕೂಡಿಸಿ, ಅವರಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ಕೇಳುತ್ತೇನೆ. ಇನ್ನು ಮನೆಗಳಿಗೆ 5 ಸಾವಿರ ರೂಪಾಯಿಗಳನ್ನು ಹೆಚ್ಚು ಮಾಡಿದ್ದೀರಿ, ಇನ್ನೂ ಒಂದೈದು ಸಾವಿರ ರೂಪಾಯಿಗಳನ್ನು ಹೆಚ್ಚು ಮಾಡಿ. ನೀವು ಮೂರು ಲಕ್ಷ ಮನೆಗಳನ್ನು ಕಟ್ಟುವ ಬದಲು ಎರಡು ಲಕ್ಷ ಮನೆಗಳನ್ನು ಕಟ್ಟಿ. ಸರ್ಕಾರದಿಂದ RCC ಮನೆ ಕಟ್ಟಿಕೊಡಲಿಕ್ಕೆ ಸಾಧ್ಯವಿದೆ. ನಾನು ಈಗಾಗಲೇ ನಮ್ಮಲ್ಲಿ ಆ ಪ್ರಯೋಗವನ್ನು ಮಾಡಿಸಿದ್ದೇನೆ. ದಯವಿಟ್ಟು ತಾವು ಆ ರೀತಿಯಾಗಿ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಹೆಣ್ಣು ಮಗುವಿಗೆ 10 ಸಾವಿರ ರೂಪಾಯಿಗಳನ್ನು ಠೇವಣಿ ಇಡುವ ಬದಲು ಅದನ್ನು insurance ಎಂದು ಮಾಡಿಬಿಡಿ. ಅದರಿಂದ ಸರ್ಕಾರಕ್ಕೂ ಉಳಿತಾಯವಾಗುತ್ತದೆ. ವರ್ಷಕ್ಕೆ ಒಂದು ಸಾವಿರವೋ ಅಥವಾ ಎರಡು ಸಾವಿರವೋ ಖರ್ಚು ಬರುತ್ತದೆ. ಆ ಮಗು ಏನಾದರೂ ಸತ್ತರೆ ಅಥವಾ ಇನ್ನೇನಾದರೂ ಆದರೆ ಮುಂದೆ ಲಗ್ನಕ್ಕೆ ಆಗುತ್ತದೆ. ಆದುದರಿಂದ insurance ಮಾಡುವುದು ಯೋಗ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳಿ, ದಯವಿಟ್ಟು ಅದಕ್ಕೆ ಉತ್ತರ ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಆಂಜನೇಯರವರು ಕ್ಲಾರಿಫಿಕೇಷನ್ ಕೇಳಿ. ಎಲ್ಲರಿಗೂ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ. ಮೊದಲು ಹಿಂದಿನವರಿಗೆ ಅವಕಾಶ ಕೊಡೋಣ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ನಮಗೆ ಅವಕಾಶ ಕೊಡಲೇಬೇಕು. ತಾವು ನಮಗೆ ಬಜೆಟ್ ಮೇಲೆ ಮಾತನಾಡುವುದಕ್ಕೂ ಅವಕಾಶ ಕೊಡಲೇ ಇಲ್ಲ. ಇನ್ನು ಕ್ಲಾರಿಫಿಕೇಷನ್ ಕೇಳುವುದಕ್ಕೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ನಾನು ಯಾರನ್ನು ಕರೆದಿದ್ದೇನೋ ಅವರು ಮಾತನಾಡಲಿ. ನಾನು ಈಗ ಮಾನ್ಯ ಆಂಜನೇಯರವರನ್ನು ಕರೆದಿದ್ದೇನೆ, ಉಳಿದವರು ಕುಳಿತುಕೊಳ್ಳಿ. ನಂತರ ನಾನು ನಿಮ್ಮನ್ನೂ ಕರೆಯುತ್ತೇನೆ. ಏಕೆ ಹೀಗೆ ಮಾಡುತ್ತೀರಿ ?

ಶ್ರೀ ಜಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ನಮ್ಮ ಕಡೆಯೂ ಸ್ವಲ್ಪ ನೋಡಿ. ನಾವೇನೂ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾವು ಎರಡೇ ಎರಡು ವಿಚಾರ ಹೇಳುತ್ತೇವೆ, ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಮೊದಲು ಈ ಕಡೆಯಿಂದ ಆಗಲಿ, ನಂತರ ನಿಮಗೆ ಕೊಡುತ್ತೇನೆ.

ಶ್ರೀ ಹೆಚ್. ಆಂಜನೇಯ (ಭರಮ ಸಾಗರ): ಸನ್ಮಾನ್ಯ ಅಧ್ಯಕ್ಷರೆ, ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರದಲ್ಲಿ ತಮ್ಮ ಚೊಚ್ಚಲ ಬಜೆಟ್ ಅನ್ನು ಮಂಡಿಸಿದಂತಹ ಮಾನ್ಯ ಯಡಿಯೂರಪ್ಪನವರು ಒಳ್ಳೆಯ ಬಜೆಟ್ ಅನ್ನೇ ಮಂಡಿಸಿದ್ದಾರೆ.

ಅಧ್ಯಕ್ಷರು: ತಾವೇನು ಭಾಷಣವನ್ನೇ ಪ್ರಾರಂಭಿಸಿದಂತೆ ಕಾಣುತ್ತದೆ. ತಾವು ಕೇವಲ ಸ್ಪಷ್ಟೀಕರಣ ಮಾತ್ರ ಕೇಳಿ.

ಶ್ರೀ ಹೆಚ್. ಆಂಜನೇಯ: ಈ ಬಜೆಟ್ ಎಸ್.ಸಿ. : ಎಸ್.ಟಿ. ಜನಾಂಗಕ್ಕೆ ಬಹಳ ಅನುಕೂಲಕರವಾಗಿದೆ. ಎಸ್. ಸಿ. : ಎಸ್. ಟಿ ಜನಾಂಗಕ್ಕೆ ಬೋರ್‌ವೆಲ್ ಹಾಕಿಸುವ ಕಾಸ್ಟ್ ಅನ್ನು ಹೆಚ್ಚಿಗೆ ಮಾಡಿ ಎಂದು ಕಳೆದ ಮೂರು ವರ್ಷಗಳಿಂದಲೂ ನಾವು ಬೇಡಿಕೊಳ್ಳುತ್ತಿದ್ದೆವು. ಹಿಂದಿನ ಸರ್ಕಾರ ಅದನ್ನು ಮಾಡಲಿಲ್ಲ. ಆದರೆ ಮಾನ್ಯ ಯಡಿಯೂರಪ್ಪನವರ ಸರ್ಕಾರ ಮತ್ತು ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ಇವತ್ತು ನಾವು 75 ಸಾವಿರ ರೂಪಾಯಿಗಳಿಂದ 1 ಲಕ್ಷ ರೂಪಾಯಿಗಳಿಗೆ ಹೆಚ್ಚಿಗೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಭೂ ಖರೀದಿ ಮಾಡಿ ಕೊಡುವುದು ಏನಿದೆ, ಅದಕ್ಕೆ ನಿರ್ದಿಷ್ಟವಾಗಿ ಹಣದ ದರವನ್ನು ನಿಗದಿ ಮಾಡಿಲ್ಲ. ಹೆಚ್ಚಿಗೆ ಮಾಡಿ ಕೊಡುತ್ತೇವೆ ಎಂದಷ್ಟೇ ಹೇಳಿದ್ದಾರೆಯೇ ಹೊರತಾಗಿ ಅದನ್ನು ಹೆಚ್ಚಿಗೆ ಮಾಡತಕ್ಕಂಥ, ಎಲ್ಲೆಲ್ಲಿ registration fee ಇದೆಯೋ, ಇಷ್ಟು percentage ಹೆಚ್ಚಿಗೆ ಜಮೀನನ್ನು ಖರೀದಿ ಮಾಡಿ ಪರಿಶಿಷ್ಟ ಜಾತಿ ಃ ಪರಿಶಿಷ್ಟ ವರ್ಗದವರಿಗೆ ಭೂಮಿಯನ್ನು ಖರೀದಿ ಮಾಡತಕ್ಕಂಥದ್ದಕ್ಕೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು. ಈಗಾಗಲೇ ಮೂರು ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊರೆದಿರತಕ್ಕಂಥ ಬೋರ್‌ವೆಲ್‌ಗಳಿಗೆ ಪಂಪ್‌ಸೆಟ್ ಹಾಕಿಲ್ಲ, ವಿದ್ಯುತ್ ಸಂಪರ್ಕವನ್ನು ಕೊಟ್ಟಿಲ್ಲ. ಆದರೆ ಆ ಹಣವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದೂ ಕೂಡ ಸಂತೋಷದ ವಿಷಯ. ಆದರೆ ಒಂದೇ ಒಂದು ಇಲ್ಲಿ ಆಗಬೇಕಾಗಿರುವುದು ಏನೆಂದರೆ, ಭೂಮಿಯನ್ನೇನು ನೀವು ಖರೀದಿ ಮಾಡಿ ಕೊಡುತ್ತೀರೋ, ಅದನ್ನು ಶಾಶ್ವತವಾಗಿ ಪರಿಶಿಷ್ಟ ಜಾತಿ ಃ ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕೆ ಅದು ಅನುಕೂಲಕರವಾಗುತ್ತದೆ, ಅದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಗಮನಿಸಬೇಕು. ನೀವು ನಿಮ್ಮ ಬಜೆಟ್ಟಿನಲ್ಲಿ HKDBಗೆ 60 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಅದರಲ್ಲಿ ಸುಮಾರು 16 ಕೋಟಿ ರೂಪಾಯಿಗಳು ಇವತ್ತು SCPಗೆ ಹೋಗುವುದರಿಂದ, ಇನ್ನೊಂದು clarification ನೀವೇನು ಕೊಡಬೇಕೆಂದರೆ, HKDB ಗೆ ಹಣವನ್ನು ನೀವು ಡಾಃ ನಂಜುಂಡಪ್ಪ ವರದಿಯ ಆಧಾರದ ಮೇಲೆ ಕೊಡುತ್ತೀರೋ, ಇಲ್ಲವೋ ಎಂಬುದನ್ನು ನೀವು ಹೇಳಬೇಕು. ಎರಡನೆಯದಾಗಿ, ಇವತ್ತೇನು PWD ಯಲ್ಲಿ ಮತ್ತು ಪಂಚಾಯತ್ ವ್ಯವಸ್ಥೆಯ ಜಿಲ್ಲಾ ಪಂಚಾಯತ್‌ನಲ್ಲಿ CM Road Fund ಎಂದು ಇದೆ. ಅದಕ್ಕೆ ನೀವು ಡಾಃ ನಂಜುಂಡಪ್ಪನವರ ವರದಿಯ ಪ್ರಕಾರ ನೀವು

ಹಣ ಕೊಡಬೇಕು. ಮೂರನೆಯದಾಗಿ, ಮಾನ್ಯ ಸಿಂಧ್ಯಾರವರು ಕಳೆದ ಬಾರಿ ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದಾಗ, 'ಕೈಗಾರಿಕಾ ವಿಕಾಸ' ಅನ್ನತಕ್ಕಂಥ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಇರತಕ್ಕಂಥ 39 most backward taluks ನಲ್ಲಿ ಜಾರಿಗೆ ತಂದು ಅಲ್ಲಿ ಹೆಚ್ಚಿನ ರೀತಿಯಲ್ಲಿ ಬಂಡವಾಳ ಹೂಡಲಿಕ್ಕೆ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದರು. 'ಕೈಗಾರಿಕಾ ವಿಕಾಸದ' ಬಗ್ಗೆ ಈ ವರ್ಷದ ಬಜೆಟ್‌ನಲ್ಲಿ ತಾವು ಎಲ್ಲಿಯೂ ಕೂಡ ಹೇಳಿಲ್ಲ. ಅದನ್ನು ಮುಂದುವರೆಸಬೇಕು ಮತ್ತು ಅದಕ್ಕೆ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಲಿಕ್ಕೆ ನೀವು ಪ್ರಯತ್ನ ಮಾಡಬೇಕು. ನಾಲ್ಕನೆಯದಾಗಿ, ಇವತ್ತು ಗುಲ್ಬರ್ಗಾ ಭಾಗದಲ್ಲಿ ವಿಶೇಷವಾಗಿ ಶಹಬಾದ್ ಸ್ಟೋನ್ ಏನಿದೆ, ಇಲ್ಲಿ ಇರತಕ್ಕಂಥ ಎಲ್ಲಾ labours ಇವತ್ತು ಬಹಳ ಕಷ್ಟದಲ್ಲಿದ್ದಾರೆ. ಇವತ್ತು ಅದರ ಮೇಲೆ ಇರತಕ್ಕಂಥ ರಾಯಲ್ಟಿಯನ್ನು ಕಡಿಮೆ ಮಾಡಬೇಕು. ನಾನು ಇದರ ಬಗ್ಗೆ ಹಿಂದೆ ಮಾನ್ಯ ಸಿದ್ದರಾಮಯ್ಯನವರಿಗೂ ಕೂಡ ಮನವಿ ಮಾಡಿದ್ದೆ. 50 ರೂಪಾಯಿಗಳು ಇರತಕ್ಕಂಥ ರಾಯಲ್ಟಿಯನ್ನು 15 ರೂಪಾಯಿಗಳಿಗೆ ಇಳಿಸಬೇಕು. ನೀವು ಒಂದು ವೇಳೆ ಈ ರಾಯಲ್ಟಿಯನ್ನು ಇಳಿಸುವುದರಿಂದ ನಿಮ್ಮ ಖಜಾನೆಗೆ ಜಾಸ್ತಿ ಹಣ ಬರುತ್ತದೆ. ಇವತ್ತು ಅಲ್ಲಿ ಜಾಸ್ತಿ ಸೋರಿಕೆಯಾಗುತ್ತಿದೆ. ಆದ್ದರಿಂದ ರಾಯಲ್ಟಿಯನ್ನು ನೀವು 50 ರೂಪಾಯಿಗಳಿಂದ 15 ರೂಪಾಯಿಗಳಿಗೆ ಇಳಿಸಿದರೆ ಹೆಚ್ಚಿನ ಜನರಿಗೆ ಅನುಕೂಲವಾಗುತ್ತದೆ, ಬೊಕ್ಕಸಕ್ಕೂ ಹೆಚ್ಚಿನ ಹಣ ಬರುತ್ತದೆ. ಕೊನೆಯದಾಗಿ, ಇವತ್ತೇನು ಮಾನ್ಯ ಯಡಿಯೂರಪ್ಪನವರು ಹೆಣ್ಣುಮಕ್ಕಳಿಗೆ ಸೈಕಲ್ ಅನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಸೈಕಲ್ ಅನ್ನು ಕೊಡಿ ಪರವಾಗಿಲ್ಲ. ಆದರೆ ಇವತ್ತು ಹೆಣ್ಣು ಮಕ್ಕಳು ಏಕೆ ಹೈಸ್ಕೂಲ್‌ಗೆ ಹೋಗುತ್ತಿಲ್ಲ ಎಂಬುದನ್ನು ನಾವ್ಯಾರೂ ವಿಚಾರ ಮಾಡುತ್ತಿಲ್ಲ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ರೀತಿಯಲ್ಲಿ ಹೈಸ್ಕೂಲ್‌ಗಳನ್ನು ನೀವು ಕೊಡಬೇಕು. ಏಕೆಂದರೆ ನೀವು ಬಜೆಟ್‌ನಲ್ಲಿ ಹೇಳಿದ್ದೀರಿ. ಡಾ: ನಂಜುಂಡಪ್ಪ ವರದಿಯಲ್ಲಿ ಇರತಕ್ಕಂಥ 39 most backward taluks ಗೆ ಹೆಚ್ಚಿನ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜ್‌ಗಳನ್ನು ಕೊಡಬೇಕೆಂದು ಕೇಳುತ್ತೇನೆ. ನಾನು ಮಂತ್ರಿಗಳಿಗೆ ಕೇಳಿದಾಗ, ಮಾನ್ಯ ಹೊರಟ್ಟಿಯವರು ಅದಕ್ಕೆ ಹಣವೇ ಇಲ್ಲವೆಂದು ಹೇಳುತ್ತಿದ್ದಾರೆ. ಇವತ್ತು ಹೈಸ್ಕೂಲ್‌ಗಳನ್ನು ಕೊಡುತ್ತೇವೆ ಎಂದು ಮಾನ್ಯ ಯಡಿಯೂರಪ್ಪನವರು ಬಜೆಟ್‌ನಲ್ಲಿ ಹೇಳಿದ್ದಾರೆ. ಆದರೆ ಸಚಿವರು ಹಣವೇ ಇಲ್ಲವೆಂದು ಹೇಳುತ್ತಾರೆ. ದಯವಿಟ್ಟು ಹೆಚ್ಚಿನ ಹೈಸ್ಕೂಲ್‌ಗಳನ್ನು ಕೊಡಬೇಕೆಂದು ಕೋರುತ್ತೇನೆ.

ಶ್ರೀ ಆರ್. ಧ್ರುವ ನಾರಾಯಣ (ಸಂತೆಮಾರನಹಳ್ಳಿ): ಮಾನ್ಯ ಅಧ್ಯಕ್ಷರೇ, ನಮ್ಮ ಮೈಸೂರು ಜಿಲ್ಲಾ ಪಂಚಾಯತ್‌ನಿಂದ ಶಾಶ್ವತ ಕುಡಿಯುವ ನೀರಿಗೋಸ್ಕರ ಮೂರು ಯೋಜನೆಗಳು ಇಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಬಂದಿವೆ. ದಯಮಾಡಿ ನದಿ ಮೂಲದಿಂದ ನನ್ನ ಕ್ಷೇತ್ರಕ್ಕೆ ಸೇರಿದ 56 ಹಳ್ಳಿಗಳಿಗೆ ಕಬಿನಿ ನದಿಯಿಂದ ಕುಡಿಯುವ ನೀರಿನ ಸಲುವಾಗಿ ಒಂದು ಪ್ರಾಜೆಕ್ಟ್ ಮೈಸೂರು ಜಿಲ್ಲಾ ಪಂಚಾಯಿತಿಯಿಂದ ಆರ್ಥಿಕ ಇಲಾಖೆಗೆ ಬಂದಿದೆ. ಅದೇ ರೀತಿ ಹುಣಸೂರು ಕ್ಷೇತ್ರದ ಮಾನ್ಯ ಜಿ. ಟಿ. ದೇವೇಗೌಡರ ಕ್ಷೇತ್ರದಿಂದ ಕೂಡ ಕುಡಿಯುವ ನೀರಿನ ಸಲುವಾಗಿ ಎರಡು ಯೋಜನೆಗಳು, ಒಟ್ಟು ಮೂರು ಶಾಶ್ವತ ಕುಡಿಯುವ ನೀರಿನ ಯೋಜನೆಗಳು ಬಂದಿವೆ. ದಯಮಾಡಿ ಮಾನ್ಯ ಯಡಿಯೂರಪ್ಪನವರು ನದಿ ಮೂಲದಿಂದ ಕುಡಿಯುವ ನೀರಿನ ಈ ಮೂರೂ ಯೋಜನೆಗಳಿಗೂ ಕೂಡ ಮಂಜೂರಾತಿ ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಜೊತೆಗೆ ನಮ್ಮ ಚಾಮರಾಜ ನಗರ ಜಿಲ್ಲೆಯ ಬಹುತೇಕ ರೈತರು ಅರಿಶಿನ ಬೆಳೆಯುತ್ತಾರೆ. ಬೆಳೆದಂತಹ ಅರಿಶಿನವನ್ನು . . .

ಅಧ್ಯಕ್ಷರು : ಆಯಿತು, ನೀವು ಮತ್ತೆ ಎಲ್ಲಾ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ? ಬಹಳ ಜನ ಕ್ಲಾರಿಫಿಕೇಷನ್ ಕೇಳಬೇಕು.

ಶ್ರೀ ಆರ್. ಧ್ರುವನಾರಾಯಣ : ಬೆಳೆದಂತಹ ಅರಿಶಿನವನ್ನು ತಮಿಳುನಾಡಿಗೆ ತೆಗೆದುಕೊಂಡು ಹೋಗುತ್ತೇವೆ. ಚಾಮರಾಜ ನಗರದಲ್ಲಿ ಒಂದು ಅರಿಶಿನ ಸಂಸ್ಕರಣ ಘಟಕವನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ತೆಗೆಯಬೇಕು, ರೈತರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ, ಮಾನ್ಯ ಅಧ್ಯಕ್ಷರೆ, ಇವತ್ತು ಅಸ್ಪೃಶ್ಯತೆ ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಕಡೆ ವ್ಯಾಪಕವಾಗಿ ನಡೆಯುತ್ತಿದೆ. ಮೊನ್ನೆ ಪತ್ರಿಕೆಗಳಲ್ಲಿ, ಟಿ.ವಿ. ಮಾಧ್ಯಮಗಳಲ್ಲಿ ನೋಡಿದ್ದೇವೆ, ಸಾರ್ವಜನಿಕ ಕೆರೆಗಳಲ್ಲಿ ಕೂಡ ದಲಿತರು ನೀರನ್ನು ತೆಗೆದುಕೊಂಡು ಹೋಗಬಾರದಂಥ ಅಸ್ಪೃಶ್ಯತಾ ಆಚರಣ ನಡೆಯುತ್ತಿದೆ. ದಯಮಾಡಿ ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಇಲ್ಲಿಯೇ ಇದ್ದಾರೆ, ಅಸ್ಪೃಶ್ಯತಾ ಆಚರಣೆ ಮಾಡುವವರ ವಿರುದ್ಧ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳ ಮುಖೇನ ಮಾನ್ಯ ಸಮಾಜ ಕಲ್ಯಾಣ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿ ಡ್ರಿಂಕಿಂಗ್ ವಾಟರ್ ಪಂಪ್‌ಸೆಟ್ ಏನಿವೆ, ಅವಕ್ಕೆ ಇರಿಗೇಷನ್ ಪಂಪ್‌ಸೆಟ್ ಟ್ಯಾರಿಫ್ ಇಟ್ಟರೆ ಬಹಳಷ್ಟು ಬರ್ಡನ್ ಗ್ರಾಮ ಪಂಚಾಯಿತಿಗೆ ಕಡಿಮೆ ಆಗುತ್ತದೆ. ದಯವಿಟ್ಟು ಅದನ್ನು ಕ್ಯಾಡರ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಎಲ್ಲರಿಗೂ ಅವಕಾಶ ಕೊಡಬೇಕೆಂದರೆ ಆಗುವುದಿಲ್ಲ. ಈ ಕಡೆ ಆದ ಮೇಲೆ ಆ ಕಡೆ ಅವಕಾಶ ಕೊಡುತ್ತೇನೆ.

ಶ್ರೀ ಕೆ. ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ರಸ್ತೆಗಳ ವಿಚಾರಕ್ಕೆ ನಮಗೆ ಪಿಎಮ್‌ಜಿಎಸ್‌ವೈಯಲ್ಲಿ ಒಂದು ರಸ್ತೆ ಬರುತ್ತದೆ, ನಬಾರ್ಡ್‌ನಲ್ಲಿ ಒಂದು ಅಥವಾ ಎರಡು ರಸ್ತೆಗಳನ್ನು ತೆಗೆದುಕೊಳ್ಳಬಹುದು. ಇವರು 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ, ಅದು ಬಹಳ ಕಡಿಮೆ ಹಣ. ಪಿಡಬ್ಲ್ಯೂಡಿ ವ್ಯಾಪ್ತಿಗೆ ಸೇರದೇ ಇರತಕ್ಕಂತಹ ರಸ್ತೆಗಳು ಏನು ಇರುತ್ತವೆ. ಅವುಗಳಿಗೆ ಜಿಲ್ಲಾ ಪಂಚಾಯಿತಿಯಲ್ಲಿ ಹಣ ಏನೇನೂ ಇಲ್ಲ. ಮುಖ್ಯವಾಗಿ ನಮಗೆ ಗ್ರಾಮೀಣ ಪ್ರದೇಶದಲ್ಲಿ ನಾನ್ ಪಿಡಬ್ಲ್ಯೂಡಿ ರೋಡ್ಸ್ ಏನು ಇವೆ, ಅದಕ್ಕೆ ನೀವು ಯಾವುದಾದರೂ ಒಂದು ಯೋಜನೆ ರೂಪಿಸಿ. ವರ್ಲ್ಡ್ ಬ್ಯಾಂಕ್ ಅಥವಾ ಬೇರೆ ಯಾವುದಾದರೂ ಒಂದು ಸಂಸ್ಥೆಯ ಸಹಾಯವನ್ನೂ ತೆಗೆದುಕೊಂಡು ವ್ಯಾಪಕವಾಗಿ ನಮಗೆ ಗ್ರಾಮೀಣ ರಸ್ತೆಗಳನ್ನು ಸುಧಾರಿಸುವುದಕ್ಕೆ ನಿವು ಆಲೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ. ನಿಮ್ಮ ಇತಿ ಮಿತಿಗಳನ್ನು ನೋಡಿಕೊಂಡು ಯೋಚನೆ ಮಾಡಿ. ನಮ್ಮ ಸಂಪನ್ಮೂಲಗಳು ಅಲ್ಲದೆ ಹೋದರೆ ಸಾಲ ತಂದಾದರೂ ಸರಿ. ಇದನ್ನು ಮಾಡಿ ಆದರೆ ಇದು ಬಹಳ ಮುಖ್ಯ. ರೈತರಿಗೆ ಇವತ್ತು ತಾನು ಬೆಳೆದ ಉತ್ಪನ್ನವನ್ನು ಮಾರುಕಟ್ಟೆಗೆ ಸಾಗಿಸುವುದಾಗಲಿ ವಿದ್ಯಾಭ್ಯಾಸಕ್ಕಾಗಲಿ, ಕೋರ್ಟು ಕಛೇರಿಗಾಗಲಿ ಓಡಾಡುವುದಕ್ಕಾಗುವುದಿಲ್ಲ. ಪಿಡಬ್ಲ್ಯುಡಿ ರೋಡ್ ಎಂದು ಯಾವುದೋ ಒಂದೊಂದು ರಸ್ತೆಗೆ ಶೃಂಗಾರ ಮಾಡಿ ಬಿಡುತ್ತಾರೆ. ಆ ಕಡೆ ಈ ಕಡೆ ಇರುವ ರೋಡ್‌ಗಳು ಅಸಹ್ಯ ಬರುವ ಹಾಗೆ ಇರುತ್ತವೆ. ಈ ತಾರತಮ್ಯ ಒಳ್ಳೆಯದಲ್ಲ. ಎರಡನೆಯದು, ಮೈನರ್ ಇರಿಗೇಶನ್‌ಗೆ ಎಷ್ಟು ಹಣ

ಯಾವ್ಯಾವುದಕ್ಕೆ ಕೊಟ್ಟಿದ್ದೀರಿ ಎಂದು ನಾನು ನಿಮಗೆ ಲೆಕ್ಕ ಕೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮಲ್ಲಿರತಕ್ಕಂತಹ ಕೆರೆಗಳಿಗೆ ಕಡೆ ಪಕ್ಷ ಒಂದು ವರ್ಷಕ್ಕೆ 10 ಕೆರೆಗಳಿಗಾದರೂ ನಾವು ಹಣ ಮೀಸಲಿಡದೆ ಹೋದರೆ, ಅಲ್ಲಿ ಅಗತ್ಯ ಇರತಕ್ಕಂತಹ ತೂಬು ಕೆಲಸವೋ ರಾಜ ಕಾಲುವೆಯೋ ಅಥವಾ ಇನ್ನೊಂದೋ ಮಾಡದೆ ಹೋದರೆ ನಮಗೆ ಹೇಗೆ ನ್ಯಾಯ ಸಿಗುತ್ತದೆ? ನೀವು ಸಾವಿರಾರು ಕೋಟಿ ರೂಪಾಯಿಗಳನ್ನು ಬೃಹತ್ ನೀರಾವರಿಗೆ ಖರ್ಚು ಮಾಡುತ್ತೀರಿ, ನಮ್ಮದೇನೂ ಆಕ್ಷೇಪಣೆ ಇಲ್ಲ, ರಾಜ್ಯದ ಆಸ್ತಿ ಅದು, ಸಂತೋಷವಾಗಿ ಆಗಲಿ. ಆದರೆ ಮೈನರ್ ಇರ್ರಿಗೇಷನ್‌ನಿಂದ ಹೆಚ್ಚು ಕಮಾಂಡ್ ಏರಿಯಾ ಕ್ರಿಯೇಟ್ ಆಗುತ್ತದೆ, ಹೆಚ್ಚು ಜನರಿಗೆ ಉದ್ಯೋಗ ಸಿಗುತ್ತದೆ, ಮತ್ತು ಇವುಗಳ ಕಡೆ ಗಮನ ಕೊಟ್ಟು ಬಹಳ ದಿವಸಗಳಾಗಿದೆ. ಇದಕ್ಕೆ ಯಥಾ ಪ್ರಕಾರ ರೆಗ್ಯುಲರ್ ಆಗಿ ನಾವೇನು ಗ್ರಾಂಟ್ಸ್ ಕೊಡುತ್ತಿದ್ದೇವೆ ಅದು ಬಹಳ ಕಡಿಮೆ ಇದೆ. ಮತ್ತು ವೆಟರ್ನರಿ ಆಸ್ಪತ್ರೆಗಳ ವಿಚಾರದಲ್ಲಿ ಈಗಾಗಲೇ ಈ ಸದನದಲ್ಲಿ ಚರ್ಚೆ ಆಗಿದೆ. ಹಾಲು ಉತ್ಪಾದನೆ ಮಾಡತಕ್ಕಂತಹ ಬಡತನದ ರೇಖೆಗಿಂತ ಕೆಳಗಿರತಕ್ಕಂತಹ ಕುಟುಂಬಗಳಿಗೆ ಪಶು ವೈದ್ಯ ಚಿಕಿತ್ಸೆ ವಿಚಾರದಲ್ಲಿ ಅನ್ಯಾಯವಾಗುತ್ತಿದೆ. ನಾನು ತಮಗೆ ಕೇಳುತ್ತೇನೆ, ಒಂದೊಂದು ತಾಲ್ಲೂಕಿಗೆ ಐದೈದು ಹೊಸ ವೆಟರ್ನರಿ ಡಿಸ್ಪೆನ್ಸರಿ ಎಂದು ಮಾಡಿದರೂ ಕೂಡ ನಿಮಗೆ 875 ಆಗುತ್ತದೆ. ಇದು ಒಂದು ವಿಪ್ಲವಕರವಾದ ತೀರ್ಮಾನ ಎಂದು ತೆಗೆದುಕೊಳ್ಳಿ, ಕ್ರಾಂತಿಕಾರಿ ಡಿಸಿಶನ್ ಎಂದು ತೆಗೆದುಕೊಳ್ಳಿ. ಆ ಜನ ಯಾರಿದ್ದಾರೆ, ಅಸಂಘಟಿತ ಜನ ಯಾರಿದ್ದಾರೆ, ಹಾಲು ಉತ್ಪಾದನೆ ಮಾಡಿ ಅದರಿಂದ ಒಂದೆರಡು ಹಸು ಇಟ್ಟುಕೊಂಡು ಜೀವನ ಮಾಡತಕ್ಕಂತಹ ಕುಟುಂಬಕ್ಕೆ ಬಹಳ ದೊಡ್ಡ ನೆರವು ಕೊಟ್ಟ ಹಾಗಾಗುತ್ತದೆ. ಇದರ ಬಗ್ಗೆ ಯಾರೂ ಯೋಚನೆ ಮಾಡಿಲ್ಲ. ಮತ್ತೆ ಅದೇ ಇಲಾಖೆ ಒಳಗಡೆ ಯಾರು ಆಸಕ್ತರಿದ್ದಾರೆ, ವಿದ್ಯಾವಂತ ಯುವಕರು ಹಳ್ಳಿಗಳಲ್ಲಿ ಇದ್ದುಕೊಂಡು ಜೀವನ ಮಾಡಬೇಕೆಂದು ಬಯಸಿರತಕ್ಕಂತಹವರಿಗೆ ಪಶು ವೈದ್ಯಕೀಯ ವಿಭಾಗದಿಂದ, ಅಥವಾ ನಿಮ್ಮ ವೆಟರ್ನರಿ ಡಿಪಾರ್ಟ್‌ಮೆಂಟ್‌ನಿಂದ ನಮ್ಮ ಈ ಸ್ಪಿಷೀಸ್ ಏನು ಕೊಡುತ್ತಿದ್ದಾರೆ, ಕಾರ್ಡೇಲು, ರ್‍ಯಾಂಬುಲೆ, ಅಥವಾ ಹಂದಿಗೆ ಬಂದಾಗ ಯಾರ್ಕ್‌ಶಾರ್ ವೆರೈಟಿ ಇವುಗಳನ್ನು ಸಬ್ಸಿಡೈಸ್ ರೇಟಿನಲ್ಲಿ ಸಪ್ಲೈ ಮಾಡಬೇಕು. ಮಾನ್ಯ ಯಡಿಯೂರಪ್ಪನವರೇ ಯೋಚನೆ ಮಾಡಿ, ಯಾರು ಯಂಗ್‌ಸ್ಟರ್ಸ್ ಇದ್ದಾರೆ, ಅವರಿಗೆ ನೀವು ಒಂದು ರ್‍ಯಾಂಬುಲೆ ಅಥವಾ ಕಾರ್ಡೈಲ್, ಅಥವಾ ಒಂದು ಯಾರ್ಕ್‌ಶೇಡ್ ಹಂದಿಯನ್ನು ಸಬ್ಸಿಡೈಸ್ ರೇಟ್‌ನಲ್ಲಿ ಕೊಟ್ಟರೆ, ಒಂದು ಕುಟುಂಬ ಬದುಕಿಕೊಳ್ಳುತ್ತದೆ. ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿಕೊಂಡಿರತಕ್ಕಂತಹ ಹುಡುಗರಿಗೆ ಟ್ರೈನಿಂಗ್ ಮಾಡಿಕೊಳ್ಳುವುದಕ್ಕೆ ಹೇಳಿ. ನಮ್ಮ ಹುಡುಗರಿಗೆ ಹಂದಿ ಸಾಕುವುದಕ್ಕೆ ಬರುವುದಿಲ್ಲವಾ? ಏರೋಪ್ಲೇನ್ ಮಾಡುವುದಕ್ಕೆ ಬರುವುದಿಲ್ಲ ನಿಜ, ಕಂಪ್ಯೂಟರ್ ಮುಂದೆ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ. ಆದರೆ ಹಂದಿ ಸಾಕುವುದಕ್ಕೆ ಬರುವುದಿಲ್ಲವೆಂದರೆ ಅದರ ಅರ್ಥವೇನು ಹೇಳಿ. ಅದರಲ್ಲಿ ಇರತಕ್ಕಂತಹ ಆದಾಯ ಯಾವುದರಲ್ಲಿಯೂ ಇಲ್ಲ. ಅದೇ ರೀತಿ ಈ ಗೋಟ್ಸ್ ಸ್ಟಾಲ್ ಫೀಡಿಂಗ್ ಮಾಡಬೇಕಾದ ಅವಶ್ಯಕತೆ ಬಂದಿದೆ, ಮೇಕೆಯನ್ನು ನಾವು ಅರಣ್ಯಕ್ಕೆ ಬಿಟ್ಟು ಸಾಕುವ ಸ್ಥಿತಿಯಲ್ಲಿ ಇಲ್ಲ. ಆರ್ಥಿಕವಾಗಿ ಮೇಕೆಯಲ್ಲಿ ಬರತಕ್ಕಂತಹ ಆದಾಯ ಕುರಿಯಲ್ಲಿ ಬರುವುದಿಲ್ಲ. ಕುರಿಗೆ ಕಾಯಿಲೆ ಹೆಚ್ಚು, ಮೇಕೆಗೆ ಕಾಯಿಲೆ ಕಡಿಮೆ. ಮತ್ತೆ ಮರಿ ಹಾಕತಕ್ಕಂಥದ್ದು ಒಂದು ವರ್ಷಕ್ಕೆ ಕನಿಷ್ಟ ಮೂರು ಮರಿಗಳನ್ನು ಮೇಕೆ ಕೊಡುತ್ತದೆ, ಕುರಿ ಕೊಡುವುದಿಲ್ಲ. ನಮ್ಮ ಸಿ ಅಂಡ್ ಡಿ ಕ್ಲಾಸ್ ಅರಣ್ಯ ಏನಿದೆ ಪಕ್ಕದಲ್ಲಿ

ಅಲ್ಲಿಂದ ಮೇಕೆಗಳಿಗೆ ಗ್ರೀನ್ ಫಾಡರ್ ತೆಗೆದುಕೊಳ್ಳುವುದಕ್ಕೆ ನೀವು ಪರ್ಮಿಟ್ ಕೊಡಬೇಕು. ಆಯಾಯ ರೇಂಜ್ ಆಫೀಸರ್ಸ್‌ಗೆ ಅವಕಾಶಗಳನ್ನು ಮಾಡಿಕೊಡಲು ನೀವು ಹೇಳಿ. ಯಾರು ಮೇಕೆಗಳನ್ನು ಸ್ಟಾಲ್ ಫೀಡಿಂಗ್ ಮಾಡಿಕೊಂಡು ಸಾಕುತ್ತಿದ್ದಾರೆ, ಸ್ಪೆಷಲಿ ಹೈಬ್ರಿಡ್ ವೆರೈಟಿಗಳಲ್ಲಿ ಅವರಿಗೆ ಹೆಚ್ಚು ಲಾಭದಾಯಕವಾಗುತ್ತದೆ. ಅನೇಕ ಯುವಕರು ಸ್ವಾವಲಂಬನೆಯಿಂದ ಜೀವನ ಮಾಡುವುದಕ್ಕೆ ಇದು ಅನುಕೂಲವಾಗುತ್ತದೆ. ದಯಮಾಡಿ ಈ ಸಲಹೆಗಳಿಗೆ ಏನಾದರೂ ಉತ್ತರ ಕೊಡುವುದಕ್ಕೆ ಸಾಧ್ಯ ಇದ್ದರೆ ನೀವು ಮಾಡಿ ಕೊಟ್ಟರೆ ವಿದ್ಯಾವಂತ ನಿರುದ್ಯೋಗಿ ಗ್ರಾಮೀಣ ಯುವ ಜನರು ಯಾರಿದ್ದಾರೆ ಅವರು ನಿಮಗೆ ಚಿರರುಣಿಯಾಗಿರುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್(ಹಡಗಲಿ): ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಾಗ ಮಾನ್ಯ ಉಪ ಮುಖ್ಯ ಮಂತ್ರಿಗಳು ಇರಲಿಲ್ಲ. ನಾನು ಬಹಳ ಗಹನವಾದ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿಲ್ಲ, ವಿಶ್ವ ಕನ್ನಡ ಸಮ್ಮೇಳನವನ್ನು ಹಂಪಿಯಲ್ಲಿ ಮಾಡುತ್ತೇವೆಂದು ಹಿಂದಿನ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಧರ್ಮಸಿಂಗ್‌ರವರು ಪ್ರಕಟ ಮಾಡಿದ್ದರು. ಅದರ ಬಗ್ಗೆ ಚರ್ಚೆ ಆಗಿ ನಿರ್ಣಯ ಆಗಿತ್ತು. ಸರ್ಕಾರ ಬದಲಾಗಿದೆ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ಆ ನಿರ್ಧಾರವನ್ನು ಬದಲಿಸಿ ಅದನ್ನು ಈಗ ಶಿವಮೊಗ್ಗದಲ್ಲಿ ಮಾಡುತ್ತೇವೆಂದು ಹೇಳುವುದು ಸಾಧ್ಯವಿಲ್ಲ. ಆದ್ದರಿಂದ ಇದು ಒಂದು ಸತ್ ಸಂಪ್ರದಾಯವೂ ಆಗುವುದಿಲ್ಲ. ಆದ್ದರಿಂದ ಅವರು ಆ ಬಗ್ಗೆ ಪುನರ್ ವಿಮರ್ಶೆ ಮಾಡಬೇಕೆಂದು ಪ್ರಸ್ತಾಪ ಮಾಡಿದ್ದೇನೆ. ಅದಕ್ಕೆ ಅವರು ಖಚಿತ ಭರವಸೆಯನ್ನು ಕೊಡ ಬೇಕಾಗುತ್ತದೆ. ಏಕೆಂದರೆ, ಈಗಾಗಲೇ ಅದು ನಿರ್ಣಯ ಆಗಿರತಕ್ಕಂಥದ್ದು, ಅದಕ್ಕೆ ಏನಾದರೂ ತಾತ್ವಿಕ ಸಕಾರಣಗಳು ಇವೆ ಎಂದರೆ ಆ ಮಾತು ಬೇರೆ. ಆದರೆ ಅವರು ಆ ಜಿಲ್ಲೆಯಿಂದ ಬಂದಿರಬಹುದು, ಜಿಲ್ಲೆಯವರಿಗೆ ಏರ್‌ಪೋರ್ಟ್ ಮಾಡಿಕೊಳ್ಳುತ್ತಾರೆ, ಅದರ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಅಥವಾ ಇನ್ನೇನಾದರೂ ಕಾರ್ಯಕ್ರಮಗಳು ಹೆಚ್ಚಿಗೆ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಲಿ. ಆದರೆ ವಿಶ್ವ ಕನ್ನಡ ಮೇಳ ಆಗತಕ್ಕಂಥಾದ್ದು ಏನಿದೆ ಅದರ ಬಗ್ಗೆ ಮಾನ್ಯ ಧರ್ಮಸಿಂಗ್‌ರವರು ಈಗಾಗಲೇ ನಿರ್ಧಾರವನ್ನು ಪ್ರಕಟಣೆ ಮಾಡಿರುವುದರಿಂದ, ಅದು ಹಿಂದಿನ ಸರ್ಕಾರದ ನಿರ್ಧಾರವಾಗಿರುವುದರಿಂದ ದಯವಿಟ್ಟು ಅದು ಹಂಪಿಯಲ್ಲಿಯೇ ಆಗಬೇಕು, ಆ ಕಾರಣಕ್ಕಾಗಿ ಅವರು ಪುನರ್ ವಿಮರ್ಶೆ ಮಾಡಬೇಕೆಂದು ಕೇಳುತ್ತಿದ್ದೇನೆ. ಮತ್ತೆ ಬಳ್ಳಾರಿ ಏರ್‌ಪೋರ್ಟ್ ಹಾಗೆಯೇ ಇದೆ. ಇಲ್ಲಿ ಇನ್‌ಫ್ರಾಸ್ಟ್ರಕ್ಚರ್‌ಗೆ ಸಂಬಂಧಪಟ್ಟ ಸೆಕ್ರೆಟರಿಯವರು ಇದ್ದಾರೆ, ಈಗಾಗಲೇ ಒಂದೂವರೆ ವರ್ಷದ ಹಿಂದೆಯೇ ತೋರಣಗಲ್‌ನಲ್ಲಿ ಇರತಕ್ಕಂತಹ ಒಂದು ಖಾಸಗಿ ವಿಮಾನ ನಿಲ್ದಾಣವನ್ನು ನಮ್ಮ ನಾಗರಿಕ ಸೌಲಭ್ಯಕ್ಕಾಗಿ ಮಾಡಿ ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದರು. ಅದರ ಬಗ್ಗೆ ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಎವಿಯೇಷನ್‌ನವರು ಬಂದು ನೋಡಿಕೊಂಡು ಹೋಗಿದ್ದಾರೆ. ಆದರೆ ಇವತ್ತಿನವರೆಗೂ ಕೂಡ ಆ ಸಾರಿಗೆ ವ್ಯವಸ್ಥೆ ಆಗಲಿಲ್ಲ. ಅದರ ಜೊತೆಗೆ ನಮ್ಮ ಬಳ್ಳಾರಿಯಲ್ಲಿ ಈಗಾಗಲೇ ಒಂದು ಏರ್‌ಪೋರ್ಟ್ ಇದೆ. ಅದು 1940ರ 2ನೇ ಜಾಗತಿಕ ಯುದ್ಧದಲ್ಲಿ ತಯಾರಾಗಿರತಕ್ಕಂತಹದ್ದು. ಅಲ್ಲಿ ಹಿಂದೆ ಗ್ಲೋನಿಯರ್ ಸರ್ವೀಸ್ ಕೂಡ ಇತ್ತು. ಈಗ ಅದಕ್ಕೆ ಸ್ವಲ್ಪ ಹಣವನ್ನೂ ಖರ್ಚು ಮಾಡಿದರೆ, ಒಂದು ಐದು ಆರು ಕೋಟಿ ರೂಪಾಯಿಗಳು ಖರ್ಚು ಮಾಡಿದರೆ, ಅದರ

ಮೂಲಕವಾಗಿ, ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಬಳ್ಳಾರಿ ಏರ್‌ಪೋರ್ಟ್‌ಗೆ ಕೂಡ ಇದೇ ಸಂದರ್ಭದಲ್ಲಿ ಹಣವನ್ನು ಕೊಟ್ಟು ಅದನ್ನು ಸ್ವಲ್ಪ ಹೆಚ್ಚು ವಿಸ್ತರಿಸುವಂಥ, ರನ್‌ವೇ ಹೆಚ್ಚು ಮಾಡತಕ್ಕಂತಹ ಒಂದು ಪ್ರಯತ್ನವನ್ನು ಮಾಡಿ ಮಾನ್ಯ ಸರ್ಕಾರದ ಉಪ ಮುಖ್ಯಮಂತ್ರಿಗಳು ಇದರ ಕಡೆ ಗಮನ ಕೊಡಬೇಕು. ಅವರೇ ಇನ್‌ಫ್ರಾಸ್ಟ್ರಕ್ಚರ್‌ನ ಸಚಿವರಾಗಿರುತ್ತಾರೆ. ಹಾಗೆಯೇ ಕೊಟ್ಟೂರು – ಹರಿಹರ ರೈಲಿನ ವಿಚಾರದಲ್ಲಿ ಹಣ ಬಿಡುಗಡೆ ಆಗಿಲ್ಲ. ಎಲ್ಲ ಕಡೆ ಅವರು ಹೇಳಿದ್ದಾರೆ. ಆದರೆ ನಮ್ಮ ಪಾಲಿನ ಹಣ ಕೊಟ್ಟಿಲ್ಲ ಎನ್ನುವ ಒಂದೇ ಕಾರಣಕ್ಕಾಗಿ ಈಗ ಇದು ಸ್ಥಗಿತವಾಗಿದೆ. ಎಲ್ಲಾ ರಸ್ತೆಗಳು ನಿಂತು ಹೋಗಿವೆ, ಅವರು ಏರಿಗಳನ್ನು ಮಾಡಿದ್ದಾರೆ, ಆದರೆ ಅಲ್ಲಿ ರೈಲ್ವೆ ಇಲಾಖೆಯವರು ಕಟ್ಟಬೇಕಾಗಿರತಕ್ಕಂತಹ ಎಲ್ಲಾ ಕಾರ್ಯಕ್ರಮಗಳನ್ನು ನಿಲ್ಲಿಸಿ ಈಗ ಒಂದೂವರೆ ವರ್ಷವಾಯಿತು. ಭೂ ಸ್ವಾಧೀನ ಪ್ರಕರಣವಾಗಿ ಅದರ ಬಗ್ಗೆ ಅವಾರ್ಡ್ ಆಗಿರತಕ್ಕಂಥಾದ್ದಕ್ಕೆ ಕೂಡ ಹಣ ನಮ್ಮಲ್ಲಿ ಇಲ್ಲ. ಆದ್ದರಿಂದ ಈ ವರ್ಷದಲ್ಲಿ ಆದರೂ ಕೂಡ ಕೊಟ್ಟೂರು–ಹರಿಹರಕ್ಕೆ ಸಂಬಂಧಪಡುವಂತಹ ಒಂದು ಹಣವನ್ನು ಈ ಸಲದ ಆಯವ್ಯಯದಲ್ಲಿ ಕೊಡತಕ್ಕಂಥಾದ್ದು ಆಗಬೇಕು. ಕರ್ನಾಟಕ ವಿಶ್ವ ವಿದ್ಯಾನಿಲಯದಲ್ಲಿ ಬಸವಭವನಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಮಾನ್ಯ ಧರ್ಮಸಿಂಗ್‌ರವರು ಕರ್ನಾಟಕ ವಿಶ್ವವಿದ್ಯಾನಿಲಯದ ಕಾರ್ಯಕ್ರಮದಲ್ಲಿ ಪ್ರಕಟಣೆಗೊಳಿಸಿದ್ದರು. ಅದು ಯಾವ್ಯಾವುದೋ ಕಾರಣಗಳಿಂದಾಗಿ ಜಾರಿಗೊಳಿಸಿಲ್ಲ. ಆದ್ದರಿಂದ ಒಂದು ಕೋಟಿ ರೂಪಾಯಿಗಳನ್ನು ಆ ಬಸವಭವನ ಕಟ್ಟಡಕ್ಕೆ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಕೊಡತಕ್ಕಂಥಾದ್ದು ಆಗಬೇಕು. ಭಾರತೀಯ ವಿದ್ಯಾಭವನದವರು ಗಾಂಧೀಜಿಯ ಸಂಪುಟಗಳನ್ನು ಪ್ರಕಟಣೆಗೊಳಿಸುತ್ತಾರೆ. ನಮ್ಮ ಹಿಂದಿನ ಮುಖ್ಯಮಂತ್ರಿಗಳು ಮತ್ತು ಮಾಜಿ ಪ್ರಧಾನಿಗಳಾಗಿದ್ದಂಥ ಮಾನ್ಯ ದೇವೇಗೌಡರ ಕಾಲದಲ್ಲಿ ಅವರೇ ಮೊದಲನೆಯ ಸಂಪುಟವನ್ನು ಬಿಡುಗಡೆ ಮಾಡಿದ್ದರು. ಒಂಬತ್ತು ಸಂಪುಟಗಳು ಈಗಾಗಲೇ ಬಿಡುಗಡೆಯಾಗಿವೆ. ಭಾರತೀಯ ವಿದ್ಯಾಭವನದವರು ಅದಕ್ಕಾಗಿಯೇ 15 ಲಕ್ಷ ರೂಪಾಯಿಗಳನ್ನು ವಾರ್ಷಿಕವಾಗಿ ಕೊಡಬೇಕು, ಆ ಸಂಪುಟವನ್ನು ಖರೀದಿ ಮಾಡುವುದಕ್ಕೆ ಎನ್ನತಕ್ಕಂಥ ಒಂದು ಪ್ರಸ್ತಾವವನ್ನು ಕೊಟ್ಟಿರುವುದು ಸರ್ಕಾರದ ಹತ್ತಿರ ಇದೆ. ಇವುಗಳೆಲ್ಲಾ ಚಿಕ್ಕಮುಟ್ಟ ವಿಷಯಗಳೇ ಆಗಿವೆ. ಆದರೆ ಇದರ ಕಡೆಗೆ ಗಮನ ಕೊಡ ತಕ್ಕಂಥಾದ್ದು ಬಹಳ ಮುಖ್ಯ ಎಂದೇ ನಾನು ಭಾವಿಸಿಕೊಂಡಿದ್ದೇನೆ. ಹಾಗೆಯೇ 'ವಿಮೋಚನೆ' ಎನ್ನತಕ್ಕಂಥ ಒಂದು ಸಂಸ್ಥೆ ಇದೆ. ಅವರು ದೇವದಾಸಿಯವರ ಮಕ್ಕಳಿಗೆ ಅವರು ಉಚಿತವಾಗಿರತಕ್ಕಂಥ ವಸತಿ, ವಿದ್ಯಾಭ್ಯಾಸ, ಮದುವೆ, ಮತ್ತು ಉದ್ಯೋಗ ಒದಗಿಸಿಕೊಡತಕ್ಕಂಥ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಅದಕ್ಕೆ ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಅನುದಾನವನ್ನು ಕೊಟ್ಟಂಥ ರೀತಿಯಲ್ಲಿಯೇ ಇದನ್ನೂ ಕೂಡ ಒಂದು ವಿಶೇಷ ಪ್ರಕರಣ ಎಂದು ತಿಳಿದು ಅನುದಾನವನ್ನು ಕೊಡತಕ್ಕಂಥಾದ್ದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಇವರು ಕರ್ನಾಟಕ ಸಂಸ್ಕೃತಿ ಸಂರಕ್ಷಣಾ ಪ್ರಾಧಿಕಾರವನ್ನು ರಚನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದರ ಅಗತ್ಯತೆ ಇಲ್ಲ. ಈಗಾಗಲೇ ನಮ್ಮಲ್ಲಿ ಅನೇಕ ಪ್ರಾಧಿಕಾರಗಳಿವೆ, ಅಕಾಡೆಮಿಗಳಿದ್ದಾವೆ. ಅಕಾಡೆಮಿಗಳಿಗೆ ಕೊಡತಕ್ಕಂಥ 15 ಲಕ್ಷ ರೂಪಾಯಿಗಳೇನಿದೆ ಅದನ್ನು ದ್ವಿಗುಣಗೊಳಿಸುವುದರ ಮೂಲಕವಾಗಿ ಇದರ ಉದ್ದೇಶವನ್ನು ಕೂಡ ನಾವು ನೆರವೇರಿಸುವುದಕ್ಕೆ ಸಾಧ್ಯತೆಯಾಗುತ್ತದೆ. ಆದುದರಿಂದ ಇದಕ್ಕೆ ಹೆಚ್ಚು

ಒತ್ತನ್ನು ಕೊಡಬೇಕಾದಂಥ ಅಗತ್ಯ ಇಲ್ಲ. 'ಸುವರ್ಣ ಕರ್ನಾಟಕ'ದ ಆಚರಣೆಗೆ ಕನಿಷ್ಠ 40 ಕೋಟಿ ರೂಪಾಯಿಗಳನ್ನಾದರೂ ಕೂಡ ಕೊಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ವಿಚಾರಗಳಲ್ಲಿ ಬಗ್ಗೆ ಕನಿಷ್ಟ ಪಕ್ಷ ಮಾನ್ಯ ಉಪ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಅರಗ ಜ್ಞಾನೇಂದ್ರರವರು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಹೆಚ್. ಡಿ. ಬಸವರಾಜು :- ಮಾನ್ಯ ಅಧ್ಯಕ್ಷರೆ, ಮಾತಾಡಿರುವವರಿಗೇ ಅವಕಾಶ ಕೊಡುತ್ತಿದ್ದೀರಿ. ನಮಗೆ ಮಾತನಾಡಲಿಕ್ಕೆ ಅವಕಾಶವೇ ಇಲ್ಲವಾಗಿದೆ.

ಅಧ್ಯಕ್ಷರು : ಅವಕಾಶ ಎಲ್ಲರಿಗೂ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಈ ರೀತಿ ಆದರೆ ಆಗುವುದಿಲ್ಲ. ನಾನು ಒಬ್ಬರನ್ನು ಕರೆದಿದ್ದೇನೆ. ಅವರದ್ದು ಆದಮೇಲೆ ಬೇರೆಯವರಿಗೆ ಅವಕಾಶ ಕೊಡುತ್ತೇನೆ. ಈ ರೀತಿಯಲ್ಲಿ ಎಲ್ಲರೂ ನಿಂತು ಕೊಂಡು ಗಲಾಟೆ ಮಾಡಿದರೆ ಹೇಗೆ? ಎಲ್ಲರೂ ಕುಳಿತುಕೊಳ್ಳಿ. ಅವಕಾಶ ಕೊಡುತ್ತೇನೆ. ಮಾನ್ಯ ಆರಗ ಜ್ಞಾನೇಂದ್ರರವರೆ ತಾವು ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಕೂಡ ಉಪ ಮುಖ್ಯಮಂತ್ರಿಗಳು ಇದ್ದಾಗ ಪ್ರಸ್ತಾಪ ಮಾಡಿದ್ದೆ. ಏನೆಂದರೆ, ಖಾಸಗಿ ಅನುದಾನಿತ ಕಾಲೇಜಿನಲ್ಲಿ ಕಲಿಯುತ್ತಿರುವ ಹಿಂದುಳಿದ ವರ್ಗದ ಮಕ್ಕಳ ಟ್ಯೂಶನ್ ಫೀ ರಿ-ಇಂಬರ್ಸ್‌ಮೆಂಟ್ 62 ಕೋಟಿ ರೂಪಾಯಿಗಳು ಬಾಕಿ ಇದೆ. ಮಾನ್ಯ ಎಸ್. ಎಂ. ಕೃಷ್ಣ ಸರ್ಕಾರ, ಧರ್ಮಸಿಂಗ್ ಸರ್ಕಾರಗಳಾದಿಯಾಗಿ ಕಳೆದ ನಾಲ್ಕು ವರ್ಷಗಳಿಂದ ಇದನ್ನು ಕೊಡಲಿಲ್ಲ. ಪರಿಣಾಮ ಇವೊತ್ತು ಆ ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಸರ್ಟಿಫಿಕೇಟ್‌ಗಳನ್ನು ಆ ಕಾಲೇಜ್‌ನವರು ಕೊಡುತ್ತಿಲ್ಲ. ಫೀಸ್ ತುಂಬಿಕೊಟ್ಟರೆ ನಾವು ಕೊಡುತ್ತೇವೆ ಎಂದು ಹೇಳುತ್ತಾರೆ. ಆದಕಾರಣ 62 ಕೋಟಿ ರೂಪಾಯಿಗಳನ್ನು ದಯಮಾಡಿ ಬಜೆಟ್‌ನಲ್ಲಿ ಆ ಹಿಂದುಳಿದ ವರ್ಗದ ಮಕ್ಕಳಿಗೆ ತುಂಬಿಕೊಂಡಬೇಕು. ಖಾಸಗಿ ಅನುದಾನಿತ ಕಾಲೇಜುಗಳಿಗೆ ಅದನ್ನು ತುಂಬಿಕೊಡಬೇಕು ಎಂದು ನಾನು ವಿನಮ್ರನಾಗಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತೆ ಮೈನರ್ ಇರಿಗೇಶನ್‌ಗಳಿಗೆ ನಾವೆಲ್ಲಾ ತುಂಗಾ ನದಿ, ಮಾಲತಿ ನದಿ ಇಟ್ಟುಕೊಂಡು ಕಣ್ಣೀರು ಹಾಕುತ್ತಿದ್ದೇವೆ. ಅದರ ದಡದಲ್ಲಿ ಇರತಕ್ಕಂಥ ನಾವು ಬೆಳೆ ಬೆಳೆಯುವುದಕ್ಕೆ ಆಗುತ್ತಿಲ್ಲ. ನಮಗೆ ಲಿಫ್ಟ್ ಇರಿಗೇಶನ್ ಸ್ಕೀಂಗಳಿಗೆ ಅಗತ್ಯವಾಗಿರತಕ್ಕಂಥ ಹಣವನ್ನು ಒದಗಿಸಿಕೊಡಬೇಕು. ಸಾಗರ, ಸೊರಬ, ತೀರ್ಥಹಳ್ಳಿ, ಹೊಸನಗರ ತಾಲ್ಲೂಕುಗಳಲ್ಲಿ ನದಿಯಲ್ಲಿ ನೀರು ಹರಿಯುತ್ತಿದೆ. ಆದರೆ ನಾವು ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆದುದರಿಂದ ನಮಗೆ ಲಿಫ್ಟ್ ಇರಿಗೇಶನ್‌ಗೆ, ಮೈನರ್ ಇರಿಗೇಶನ್‌ಗೆ ಹೆಚ್ಚಿನ ಹಣವನ್ನು ತಾವು ಒದಗಿಸಿಕೊಟ್ಟು ಆ ಭಾಗದ ರೈತರಿಗೆ ಸಹಾಯ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಆರ್. ಶ್ರೀನಿವಾಸ (ಮುಳಬಾಗಿಲು): ಮಾನ್ಯ ಅಧ್ಯಕ್ಷರೆ, ಬಹುಶಃ ನಾವು ಬಯಲು ಸೀಮೆ ಪ್ರದೇಶದವರು. ಈಗಾಗಲೇ ಮಾನ್ಯ ರಮೇಶ್ ಕುಮಾರ್‌ರವರು ಹಾಗೂ ಮಾನ್ಯ ಶ್ರೀರಾಮ ರೆಡ್ಡಿಯವರು ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ನಾವು ಕೇಳುವುದು ನಮ್ಮ ಹಕ್ಕು. ಬಹುಶಃ ಸ್ವಾತಂತ್ರ್ಯ ಬಂದಾಗಿನಿಂದಲೂ ಕೂಡ ಸಾವಿರಾರು ಕೋಟಿ ರೂಪಾಯಿಗಳನ್ನು ನಾವು ಭದ್ರಾ, ಕಾವೇರಿ ಬೇಸಿನ್ ಆಗಬಹುದು, ಭದ್ರಾ ಬೇಸಿನ್ ಆಗಬಹುದು. ಕೃಷ್ಣಾ ಬೇಸಿನ್‌ಗೆಲ್ಲಾ ಕೊಟ್ಟಿದ್ದೇವೆ. ನಾವು ಇದರಲ್ಲಿ ಮೂರನೇ ಒಂದು ಭಾಗ ಇದ್ದೇವೆ. ಒಟ್ಟು 72 ಜನ ಶಾಸಕರು ಆ ಒಂದು ಪ್ರಾಂತ್ಯದಿಂದ ಬಂದವರಾಗಿದ್ದೇವೆ. ಇವೊತ್ತು ಮೈನರ್ ಇರಿಗೇಶನ್ ಆಗಬಹುದು, ಮೇಜರ್ ಇರಿಗೇಶನ್ ಆಗಬಹುದು, ಅದರಲ್ಲಿ ಮೂರನೇ ಒಂದು ಭಾಗದ ಹಕ್ಕನ್ನು ಕೊಡಬೇಕು. ಆದರೆ ಯಾವುದೇ ಸರ್ಕಾರ ಬಂದರೂ ಕೂಡ ಇದರ ಬಗ್ಗೆ ತಾರತಮ್ಯ ಮಾಡಿದೆ. ಆದ್ದರಿಂದ ಇವೊತ್ತು ನಾವು ನೇರವಾಗಿ ಹೇಳುತ್ತಿದ್ದೇವೆ, ಯಾವುದೇ ಸಂದರ್ಭದಲ್ಲಿ ರಾಜಿ ನಾವು ಆಗುವುದಿಲ್ಲ. ಆಡಳಿತ ಪಕ್ಷವಾಗಿರಬಹುದು ಅಥವಾ ವಿರೋಧ ಪಕ್ಷವಾಗಿರಬಹುದು, ನಾವುಗಳೆಲ್ಲರೂ ಏಕತೆಯಿಂದ 72 ಜನ ಶಾಸಕರೂ ಕೂಡ ಸರಿಯಾದ ರೀತಿಯಲ್ಲಿ ನೀವೇನಾದರೂ ಸೌಲಭ್ಯಗಳನ್ನು ದೊರಕಿಸಿಕೊಡದಿದ್ದರೆ ನಾವು ಧರಣಿ ಕುಳಿತುಕೊಳ್ಳುವುದಕ್ಕೂ ಕೂಡ ಸಿದ್ಧರಾಗಿದ್ದೇವೆ. ಆದ್ದರಿಂದ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗಾಗಲಿ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತಿದ್ದೇನೆ, ಬರೇ 10 ಕೋಟಿಯನ್ನು ಎನ್ ಧರ್ಮಕ್ಕೆ ಕೊಡುತ್ತಿದ್ದೀರಾ? ಯಾವುದೋ ಒಂದು ಕಾಲುವೆ ರಿಪೇರಿಗೆ ಹತ್ತು ಕೋಟಿ ರೂ ಕೊಡುತ್ತಿದ್ದೀರಿ. 72 ತಾಲ್ಲೂಕುಗಳಿಗೆ ನೀವು ಮೈನರ್ ಇರಿಗೇಶನ್‌ಗೆ ಕೊಡುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾವು ಇವೊತ್ತಿನ ದಿನ ಇದರ ಬಗ್ಗೆ ಘೋಷಣೆ ಮಾಡಬೇಕು. ಒಂದೊಂದು ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಆ ನಿಟ್ಟಿನಲ್ಲಿ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುವುದಕ್ಕೆ ಇಚ್ಛೆ ಪಡುತ್ತೇನೆ. ಅದೇ ರೀತಿಯಲ್ಲಿ ತಮ್ಮ ಮುಖಾಂತರ ನಾನು ಕೇಳಿ ಕೊಳ್ಳುವುದೇನೆಂದರೆ ಬಾರ್ಡರ್ ಡೆವಲಪ್‌ಮೆಂಟ್ ಬಗ್ಗೆ ಕೂಡ ಇದರಲ್ಲಿ ಚಿಂತನೆ ಮಾಡಿದ್ದೀರಿ. ಏನೇನು ಗಡಿ ಪ್ರದೇಶವಿದೆ ಅಥವಾ ಅದು ಆಂಧ್ರದ ಗಡಿ ಪ್ರದೇಶವಿರಬಹುದು ಅಥವಾ ತಮಿಳುನಾಡಿನದಿರಬಹುದು, ರಸ್ತೆಗಳು ಹದಗೆಟ್ಟಿವೆ. ಬಹುಶಃ ನಮ್ಮ ಮಾನ್ಯ ರಮೇಶ್‌ಕುಮಾರ್‌ರವರಿಗೆ ಗೊತ್ತಿದೆ, ಶ್ರೀರಾಮರೆಡ್ಡಿಯವರಿಗೂ ಗೊತ್ತಿದೆ. ಆ ಕಡೆ ಆಂಧ್ರದಿಂದ ಬೇಕಾದಷ್ಟು ಉತ್ತಮವಾದಂಥ ರಸ್ತೆ ಇದೆ. ಆದರೆ ಬಸ್‌ನಲ್ಲಿ ನಮ್ಮ ರಸ್ತೆಯಲ್ಲಿ ಬರುವುದಕ್ಕೆ ಆಗುತ್ತಿಲ್ಲ. ಆದುದರಿಂದ ಬಯಲುಸೀಮೆಯಲ್ಲಿ ಬರುವ ಬಾರ್ಡರ್ ಡೆವಲಪ್‌ಮೆಂಟ್‌ಗೆ ಹೆಚ್ಚು ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಎರಡನೆಯದಾಗಿ ತಾವು ಈಗಾಗಲೇ ಕೋಳಿ ಫಾರಂಗಳಿಗೆ ಸಬ್ಸಿಡಿ ಕೊಟ್ಟಿರುವುದಕ್ಕೆ ಬಹಳ ಧನ್ಯವಾದಗಳು. ಹಿಂದೆ ಯಾವ ಸರ್ಕಾರದವರೂ ಕೊಟ್ಟಿಲ್ಲ. ತಾವು ಅದನ್ನು ಕೊಟ್ಟಿದ್ದೀರಿ. ಆದರೆ ಈ ಕೋಳಿ ಫಾರಂಗಳೇನಿವೆ, ಇಲ್ಲಿ ಲೇಯರ್ಸ್ ಹಾಗೂ ಬಾಯ್ಲರ್ಸ್ ಎಂದು ಇದೆ. ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೋಲಾರ ಜಿಲ್ಲೆಗೆ ಬಂದಿದ್ದಾರೆ ಮತ್ತು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಸಬ್ಸಿಡಿ ಅಮೌಂಟನ್ನು ಬಾಯ್ಲರ್ಸ್‌ಗೂ ಕೂಡ ಅಂದರೆ ಎರಡಕ್ಕೂ ಕೂಡ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಕಡೆಯದಾಗಿ ನಾನು ಮಾನ್ಯ ಸಾರಿಗೆ ಸಚಿವರಿಗೆ ಹೆಚ್ಚು ಹೇಳುವುದಕ್ಕೆ ಹೋಗದೆ

ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಸಾರಿಗೆ ಇಲಾಖೆಯವರು ಏನು ಮಾಡಿದ್ದಾರೆಂದರೆ ಖಾಸಗಿ ಬಸ್‌ಗಳು ಬೆಂಗಳೂರಿನಿಂದ ತಿರುಪತಿಗೆ ಹೋದರೂ ಕೂಡ ಒಂದೇ ರೀತಿಯ ಟ್ಯಾಕ್ಸೇ, ಒಂದು ತಾಲ್ಲೂಕಿನ ಒಳಗೆ ಓಡಿಸುವ ಖಾಸಗಿ ಬಸ್‌ಗೂ ಕೂಡ ಒಂದೇ ರೀತಿಯ ಟ್ಯಾಕ್ಸ್‌ನ್ನು ಹಾಕುತ್ತಿದ್ದಾರೆ. ಇದರಿಂದಾಗಿ ಖಾಸಗಿಯವರು ಜಾಸ್ತಿ ಬಸ್‌ಗಳನ್ನು ಹಳ್ಳಿಗಳಿಗೆ ಹಾಕುತ್ತಿಲ್ಲ. ಕೆ.ಎಸ್.ಆರ್.ಟಿ.ಸಿ.ಯವರೂ ಕೂಡ ಬಸ್‌ಗಳನ್ನು ಹಳ್ಳಿಗಳಿಗೆ ಹಾಕಬೇಕಾದರೆ ತುಂಬಾ ಕಷ್ಟವಾಗುತ್ತದೆ. ಏಕೆಂದರೆ ನಮ್ಮ ಮೇನ್‌ಟೆನೆನ್ಸ್ ಜಾಸ್ತಿ ಆಗುತ್ತದೆ. ಆದುದರಿಂದ ದಯವಿಟ್ಟು ಈ ತಾಲ್ಲೂಕಿನ ಒಳಗೆ ತಿರುಗಾಡತಕ್ಕಂಥ ಮೋಟಾರ್ ವಾಹನಗಳಿಗೆ ಟ್ಯಾಕ್ಸ್‌ನಲ್ಲಿ 50 ಪರ್ಸೆಂಟ್ ರಿಯಾಯಿತಿ ಕೊಟ್ಟರೆ ಬಹುಶಃ ಎಲ್ಲಾ ಹಳ್ಳಿಗಳಿಗೂ ಕೂಡ ಖಾಸಗಿ ಬಸ್‌ಗಳನ್ನು ಹಾಕುತ್ತಾರೆ. ಆಗ ಕೆ. ಎಸ್.ಆರ್.ಟಿ.ಸಿ.ಗೆ ಹೊರೆ ಕಡಿಮೆಯಾಗುತ್ತದೆ. ಆ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು.

ಶ್ರೀ ಬಿ. ಆರ್. ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ಈ ಗಡಿನಾಡು ಅಭಿವೃದ್ಧಿ ಸಂಬಂಧದಲ್ಲಿ ಬಹಳ ಹೆಚ್ಚು ಪ್ರಮಾಣದಲ್ಲಿ ದುಡ್ಡು ಇಡಬೇಕಾಗಿತ್ತು ಎಂಬುದು ಎಲ್ಲಾ ಸದಸ್ಯರ ಅಭಿಪ್ರಾಯವಾಗಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಈಗ ಇಲ್ಲಿದ್ದಾರೆ. ಅವರು ನಮ್ಮ ಕ್ಷೇತ್ರಕ್ಕೆ ಬಂದಿದ್ದರು. ಈಗೇನಾಗಿದೆ ನಮ್ಮ ಗಡಿ ಪ್ರದೇಶದಲ್ಲಿ , ಪಕ್ಕದಲ್ಲಿಯೇ ನಮ್ಮದೆಲ್ಲಿ ಮಹಾರಾಷ್ಟ್ರ ಗಡಿ ಬರುತ್ತದೆ. ಅಲ್ಲಿ ಅತ್ಯುತ್ತಮವಾದ ರಸ್ತೆಗಳನ್ನು ಮಾಡಿದ್ದಾರೆ, ಎಲ್ಲಾ ಸಂಪರ್ಕಗಳನ್ನು ಕಲ್ಪಿಸಿದ್ದಾರೆ, ನೀರಾವರಿ ವ್ಯವಸ್ಥೆಯನ್ನು ಕೂಡ ಮಾಡಿದ್ದಾರೆ. ನಮ್ಮ ಗಡಿಭಾಗದಲ್ಲಿ ಇರತಕ್ಕಂಥ ಜನರಲ್ಲಿ ಏನು ಭಾವನೆ ಬಂದಿದೆಯೆಂದರೆ ನಾವ್ಯಾಕೆ ಮಹಾರಾಷ್ಟ್ರಕ್ಕೆ ಹೋಗಬಾರದು? ಎಂದು. ಇದು ಬಹಳ ಅಪಾಯಕಾರಿ ವಿಷಯ. ಹೀಗಾಗಿ ಈ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್‌ಗೆ ಹೆಚ್ಚಿನ ಆದ್ಯತೆ ಕೊಟ್ಟು ಹೆಚ್ಚಿನ ದುಡ್ಡು ಕೊಟ್ಟರೆ ಆ ಭಾಗದಲ್ಲಿ ಇಂತಹ ಭಾವನೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯತೆ ಇದೆ. ಆದಕಾರಣ ಮಾನ್ಯ ಹಣಕಾಸಿನ ಸಚಿವರು ಇದಕ್ಕೆ ಹೆಚ್ಚಿನ ಹಣಕಾಸನ್ನು ಇಟ್ಟು ಆ ಗಡಿನಾಡಿನ ಜನರ ಭಾವನೆಗಳನ್ನು ಅರಿತು ಅವರನ್ನು ಕೆಣಕದಂತೆ ಮತ್ತು ಅವರಿಗೆ ನೋವಾಗದಂತೆ ನೋಡಿಕೊಳ್ಳತಕ್ಕ ಕೆಲಸವನ್ನು ಮಾಡಿ ಹೆಚ್ಚಿನ ಹಣವನ್ನು ಕೊಡಬೇಕು. ಇದು ಒಂದು ವಿಚಾರ. ಎರಡನೆಯದಾಗಿ ಹೈವೇ ಸ್ಟೇಟ್ ಮೇನ್‌ಟೆನೆನ್ಸ್‌ಗೆ ಮುಂದುವರಿದಂಥ ಪ್ರದೇಶಗಳಲ್ಲಿ ಮತ್ತು ಹಿಂದುಳಿದಂಥ ಪ್ರದೇಶಕ್ಕೆ ಸರಾಸರಿ ಎಲ್ಲರಿಗೂ ಕೂಡ ಒಂದು ಕಿ.ಮೀ.ಗೆ ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ ಈಗ ರಸ್ತೆಗಳೆಲ್ಲಾ ಹದಗೆಟ್ಟುಹೋಗಿರುವುದರಿಂದ ಹಿಂದುಳಿದಂಥ ಪ್ರದೇಶಕ್ಕೆ 3 ಲಕ್ಷ ರೂಪಾಯಿ ಬದಲಾಗಿ 6 ಲಕ್ಷ ರೂ. ಮಾಡಿದರೆ ನಾವೆಲ್ಲಾ ಹಿಂದುಳಿದ ಪ್ರದೇಶದಲ್ಲಿ ರಸ್ತೆಗಳನ್ನು ದುರಸ್ತಿ ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಆಗುತ್ತದೆ. ಆಮೇಲೆ ವಾಟರ್ ಶೆಡ್ ಬಗ್ಗೆ ಏನು ನಾವು ಜಿಲ್ಲಾ ಪಂಚಾಯತ್ ಮುಖಾಂತರ ಮಾಡಿಸಿಕೊಳ್ಳುತ್ತಿದ್ದೇವೆ, ನಾನೊಂದು ಮನವಿಯನ್ನು ಸರ್ಕಾರಕ್ಕೆ ಮಾಡಿಕೊಳ್ಳುತ್ತಿದ್ದೇನೆ. 'ವಾಟರ್ ಶೆಡ್ ಅಥಾರಿಟಿ' ಎಂದು ಒಂದು ವಿಶೇಷವಾದಂಥ ಪ್ರಾಧಿಕಾರವನ್ನು ಮಾಡಿ. ಏಕೆಂದರೆ ಬಹಳಷ್ಟು ಕೇಂದ್ರ ಸರ್ಕಾರದಿಂದ ಬರುತ್ತದೆ, ರಾಜ್ಯ ಸರ್ಕಾರದಿಂದ ಬರುತ್ತದೆ, ಜಿಲ್ಲಾ ವಲಯದಿಂದ ಬರುತ್ತದೆ, ಗ್ರಾಮ ಪಂಚಾಯತಿಗಳೂ ಕೂಡ ವಾಟರ್ ಶೆಡ್ ಕೆಲಸ ಮಾಡುವುದಕ್ಕೆ ಅವರಿಗೆ ಅವಕಾಶವಿದೆ. ಹೀಗಾಗಿ ಇದು ಡೂಪ್ಲಿಕೇಶನ್ ಕೂಡ ಆಗುತ್ತಿದೆ. ಗ್ರಾಮ ಪಂಚಾಯತಿಯವರು ತೆಗೆದುಕೊಂಡಂಥ ಕೆಲಸವನ್ನು ತಾಲ್ಲೂಕು ಪಂಚಾಯತಿಯವರು ತೆಗೆದುಕೊಳ್ಳುತ್ತಾರೆ. ತಾಲ್ಲೂಕು ಪಂಚಾಯತಿಯವರು ತೆಗೆದುಕೊಂಡ ಕೆಲಸವನ್ನು ಜಿಲ್ಲಾ

ಪಂಚಾಯತಿಯವರು ತೆಗೆದುಕೊಳ್ಳುತ್ತಾರೆ. ಕೆಲವು ಸಲ ನಾವೂ ಕೂಡ ಶಾಸಕರು ಅದನ್ನು ಬೇರೆ ಬೇರೆ ಸ್ಕೀಂನಲ್ಲಿ ಸೇರಿಸುತ್ತಿದ್ದೇವೆ. ಹಾಗಾಗಿ ಇದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡುವುದಕ್ಕೆ ಮೈಕ್ರೊ ವಾಟರ್ ಶೆಡ್ ಮಾಡುವುದಕ್ಕೆ ಒಂದು ವಾಟರ್ ಶೆಡ್ ಅಥಾರಿಟಿ ಮಾಡಿದರೆ ಆ ಹಣವನ್ನು ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತಾ, ಕೊನೆಯದಾಗಿ ನಬಾರ್ಡ್‌ನಲ್ಲಿ, ಕೇಂದ್ರ ಸರ್ಕಾರದವರು ಬಹಳಷ್ಟು .....

(ಗೊಂದಲ)

ಅಧ್ಯಕ್ಷರು: ಈಗ ಎಲ್ಲರಿಗೂ ಸಾಕಷ್ಟು ಕೊಟ್ಟಿದ್ದೇನೆ, ಎಲ್ಲರಿಗೂ ಅವಕಾಶ ಕೊಡಬೇಕು ಎಂದರೆ ಹೇಗಾಗುತ್ತದೆ? ಬಿ.ಆರ್. ಪಾಟೀಲ್‌ರೇ ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್: ನಾನು ಮಾತನಾಡಿ ಮುಗಿಸುತ್ತೇನೆ. ನಾನು ಮುಗಿಸಿಯೇ ಇಲ್ಲ.

ಅಧ್ಯಕ್ಷರು: ಆಯಿತು ಬಿ. ಆರ್. ಪಾಟೀಲರೆ, ಈ ಮನೆಯಲ್ಲಿ ಆನ್ಸರ್ ಆಗಬೇಕು, ಇನ್ನೂ ಆ ಮನೆಗೆ ಹೋಗಬೇಕು. ಈ ತರಹ ಮಾಡಿದರೆ ಹೇಗೆ? ಎಲ್ಲಾ ಜವಾಬ್ದಾರಿ ಇರುವವರು ಈ ತರಹ ಮಾಡಿದರೆ ಹೇಗೆ? ಯಾರಿಗೂ ಜವಾಬ್ದಾರಿ ಇಲ್ಲವೆಂದು ನಾನು ಭಾವಿಸಬೇಕಾಗುತ್ತದೆ. ಪಾಟೀಲರೆ ನಿಮ್ಮದು ಆಯಿತಲ್ಲಾ? ಎಲ್ಲರೂ ಎರಡೆರಡು ನಿಮಿಷ ಕೇಳಿ ಎಂದರೆ ಹೀಗೆ ಮಾಡಿದರೆ ಹೇಗೆ?

ಒಬ್ಬರು ಮಾನ್ಯ ಸದಸ್ಯರು: ಇಲ್ಲಿ ಮಾತನಾಡುವುದಕ್ಕೂ ಅವಕಾಶ ಕೊಡುವುದಿಲ್ಲ, ಪ್ರಶ್ನೆ ಕೇಳುವುದಕ್ಕೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಸಾಕಷ್ಟು ಹಣವನ್ನು ಸಣ್ಣ ನೀರಾವರಿಗೆ ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ನಾವು ಬಜೆಟ್‌ನಲ್ಲಿ ಪ್ರೊಜೆಕ್ಟ್ ಮಾಡದೇ ಹೋದರೆ ಕೇಂದ್ರ ಸರ್ಕಾರದವರು ಹಣ ಕೊಡುವುದಿಲ್ಲ. ಆಂಧ್ರ ಪ್ರದೇಶದವರು ಬಜೆಟ್‌ನಲ್ಲಿ ಪ್ರೊಜೆಕ್ಟ್ ಮಾಡಿ ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ಪಡೆದು ಇವತ್ತು ಅಲ್ಲಿ ನೀರಾವರಿಯನ್ನು ಅಭಿವೃದ್ಧಿ ಮಾಡಿಕೊಂಡಿದ್ದಾರೆ. ನಾನು ಮಾನ್ಯ ಹಣಕಾಸು ಸಚಿವರನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಮ್ಮ ಬಜೆಟ್‌ನಲ್ಲಿ ಹೆಚ್ಚಿಗೆ ಹಣವನ್ನು ನೀವು ಪ್ರೊಜೆಕ್ಟ್ ಮಾಡಿದರೆ, ಕೇಂದ್ರ ಸರ್ಕಾರದಿಂದ ತಾವು ಹೆಚ್ಚಿಗೆ ಹಣವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಕೊನೆಯದಾಗಿ ಎಂಡೋಮೆಂಟ್ ದುಡ್ಡು ಏನು ಕೊಡುತ್ತೇವೆ ಅದರ ಬಗ್ಗೆ ಒಂದು ಮಾತು. ಇವತ್ತು ಮಾನ್ಯ ಸದಸ್ಯರು ಅಸ್ಪೃಶ್ಯತೆ ಬಗ್ಗೆ ಮಾತನಾಡಿದರು. ಯಾವ್ಯಾವ ದೇವಸ್ಥಾನಗಳಲ್ಲಿ ಈ ರೀತಿ ಅಸ್ಪೃಶ್ಯತೆಯನ್ನು ಪಾಲಿಸುತ್ತಾರೆ, ಅಂತಹ ದೇವಸ್ಥಾನಗಳಿಗೆ ಎಂಡೋನ್‌ಮೆಂಟಿನಿಂದ ದುಡ್ಡು ಕೊಡತಕ್ಕದ್ದಲ್ಲ. ಅದು ಸರ್ಕಾರದ ದುಡ್ಡು. ಇದು ಸೆಕ್ಯುಲರ್ ಗೌವರ್ನ್‌ಮೆಂಟ್ ಆದುದರಿಂದ ಸರ್ಕಾರ ಏನು ದೇವಸ್ಥಾನಗಳಿಗೆ ಹಣ ಕೊಡುತ್ತದೆ ಅದನ್ನು ನಿಲ್ಲಿಸಬೇಕು. ಅದರ ಅಭಿವೃದ್ಧಿಯ ಕೆಲಸವನ್ನು ಮಾಡಬೇಕು. ಈ ದೇವಸ್ಥಾನದಿಂದ ಈ ದೇಶದ ಉದ್ಧಾರವಾಗುವುದಕ್ಕಾಗುವುದಿಲ್ಲ. ನಮ್ಮ ಧರ್ಮಸಿಂಗ್‌ರವರು ಹೇಳಿದ ಹಾಗೆ ಹಿಡನ್ ಅಜೆಂಡಾ ಏನಿದೆ, ಈ ದೇವಸ್ಥಾನದಿಂದ ಜನರ ಹೊಟ್ಟೆಯನ್ನು ತುಂಬಿಸುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ದಯಮಾಡಿ ತಾವು ನಿಲ್ಲಿಸಿ. ಮಾನ್ಯ ಬಸವರಾಜ್‌ರವರೇ ಮಾತನಾಡಿ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ): ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಹಣಕಾಸು ಮಂತ್ರಿಗಳು ಮೀನುಗಾರರಿಗೆ ಸಂಬಂಧಿಸಿದಂತೆ ಸಹಾಯ ಮಾಡುವಂತಹ ದೃಷ್ಟಿಯಿಂದ ವಿತರಣೆ ಮಾಡುತ್ತಿರುವಂತಹ ಡೀಸೆಲ್ ವಿಚಾರದಲ್ಲಿ ಎಷ್ಟು ಪ್ರಮಾಣದಲ್ಲಿ ಡೀಸೆಲ್ ಕೊಡಬೇಕಾಗಿತ್ತು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೊಡುವಂತಹ ಒಂದು ಔದಾರ್ಯತೆಯನ್ನು ತೋರಿ ಅವರ ಜೀವನಕ್ಕೆ ಒಂದು ಬೆಳಕನ್ನು ಕೊಟ್ಟಿದ್ದಾರೆ. ಇವತ್ತು ನಾವು ಕಾಫಿ ಬೆಳೆಗಾರರು ನಮ್ಮ ಕೊಡಗು ಜಿಲ್ಲೆಯಾಗಲಿ, ಚಿಕ್ಕಮಗಳೂರು ಜಿಲ್ಲೆಯಾಗಲಿ, ಹಾಸನ ಜಿಲ್ಲೆಯಲ್ಲಾಗಲಿ ಕಳೆದ ಐದಾರು ವರ್ಷಗಳಿಂದ ಬಹಳ ಸಂಕಷ್ಟದಲ್ಲಿದ್ದೇವೆ. ಬೇಸಿಗೆ ಕಾಲ ಬಂತೆಂದರೆ ನಾವು ಕಾಫಿಗೆ ನೀರನ್ನು ಹಾಯಿಸಬೇಕೆಂದರೆ ಸ್ಪಿಂಕ್ಲರ್ ಅನ್ನು ಬಳಕೆ ಮಾಡುತ್ತಿದ್ದೇವೆ. ನಮಗೂ ಕೂಡ ಡೀಸಲ್ ಅನ್ನು ರಿಯಾಯಿತಿ ದರದಲ್ಲಿ ಈ ಮೂರು ಜಿಲ್ಲೆಗಳಿಗೆ ಕೊಡಬೇಕು. ಅಲ್ಲಿರುವಂತಹ ಕಾಫಿ ಬೆಳೆಗಾರರ ಸಂಕಷ್ಟಕ್ಕೆ ತಾವು ಪರಿಹಾರವನ್ನು ಈ ಬಜೆಟ್‌ನಲ್ಲಿ ಒದಗಿಸಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಈ ಬೊಂಬು, ಬಿದಿರು ಇವುಗಳನ್ನು ಅವಲಂಬಿಸಿಕೊಂಡು, ಅವುಗಳಿಂದ ಬುಟ್ಟಿ ಮಾಡುವುದಾಗಲಿ, ಮೊರ ಹೆಣೆಯುವುದಾಗಲಿ ಇವುಗಳನ್ನು ಮಾಡುತ್ತಿರುವಂತಹ ಒಂದು ವರ್ಗ ಇದೆ. ಆ ವರ್ಗದವರು ಪರಿಶಿಷ್ಟ ಪಂಗಡಕ್ಕೆ ಸೇರುತ್ತಿದ್ದಾರೆ. ಆ ಬೊಂಬು ಬಿದಿರಿನಿಂದ ಮಾಡಿದಂತಹ ಉತ್ಪನ್ನಗಳಿಗೆ ಇವತ್ತು ವ್ಯಾಟ್ ಅನ್ನು ವಿಧಿಸುತ್ತಿದ್ದಾರೆ. ಆ ತೆರಿಗೆ ವಿಧಿಸುವಂತಹ ಪದ್ಧತಿಯನ್ನು ಕೈಬಿಡಬೇಕು. ಆ ವರ್ಗದವರು ಇವತ್ತು ಸಂಕಷ್ಟದಲ್ಲಿದ್ದಾರೆ. ಆ ವರ್ಗದವರಿಗೆ ಸರ್ಕಾರದವರು ಯಾವುದೇ ಆರ್ಥಿಕ ಹೊರೆಯನ್ನು ಹೊರಿಸಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮೂರನೆಯದಾಗಿ, ಪರಿಶಿಷ್ಟ ಪಂಗಡದ ಹಣಕಾಸು ಆಯೋಗವನ್ನು ತಾವು ರಚನೆ ಮಾಡಿ ಈ ರಾಜ್ಯದಲ್ಲಿ ಹೊಸ ಇತಿಹಾಸವನ್ನು ಸ್ಥಾಪನೆ ಮಾಡಿದ್ದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ತಮ್ಮಲ್ಲಿ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಪರಿಶಿಷ್ಟ ಪಂಗಡದ ಆಯೋಗವನ್ನೂ ಕೂಡ ತಾವು ರಚನೆ ಮಾಡಿ ಅದರ ಮೂಲಕ ಆ ಒಂದು ವರ್ಗದವರಿಗೆ ಏನು ನ್ಯಾಯೋಚಿತವಾಗಿ ಇಷ್ಟು ವರ್ಷ ಸಿಕ್ಕಿರಲಿಲ್ಲವೋ ಅದು ಸಿಗುವಂತೆ ತಾವು ಮಾಡಬೇಕು. ಅದಕ್ಕೋಸ್ಕರ ಈ ಮುಂಗಡ ಪತ್ರದಲ್ಲಿ ಹಣವನ್ನು ಒದಗಿಸಬೇಕು ಎಂದು ಮಾನ್ಯ ಹಣಕಾಸು ಸಚಿವರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಐ. ಚಿಕ್ಕನಗೌಡ: ಮಾನ್ಯ ಅಧ್ಯಕ್ಷರೆ, ನಮಗೂ ಅವಕಾಶ ಕೊಡಿ, ಬರೇ ಅವರಿಗೆ ಕೊಡುತ್ತಿದ್ದೀರಿ. ಹಿಂದಿನ ಸಾಲಿನಲ್ಲಿರುವ ನಮ್ಮನ್ನು ನೋಡಿ.

ಶ್ರೀ ಎಸ್. ಎಲ್. ಧರ್ಮೇಗೌಡ (ಬೀರೂರು): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಬರತಕ್ಕಂಥ ಯಗಚಿ ಹಿನ್ನೀರಿನಿಂದ ಹೋಗುವಂತಹ ಕರಗಡ ಯೋಜನೆ ಈಗಾಗಲೆ 75 ಲಕ್ಷ ರೂಪಾಯಿ ಖರ್ಚು ಮಾಡಿ ಅದರ ಸರ್ವೇ ಮಾಡಿದ್ದು, ತದನಂತರ ಅದಕ್ಕೆ ಈಗಾಗಲೇ 6 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ಆದರೆ ಆ ಯಗಚಿ ಹಿನ್ನೀರು ಕೊಡುವುದರ ಮುಖಾಂತರ ನನ್ನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರುವಂತಹ ಬೀರೂರು ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 40 ಹಳ್ಳಿಗಳ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಬಹುದಾಗಿದೆ. ಕಳೆದ ಸಾರಿ

ಕೂಡ ಬಜೆಟ್ ಮಂಡನೆ ಮಾಡಿದಾಗ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೆ. ಆದರೆ ಸರ್ಕಾರ ಯಾವುದನ್ನು ಸಹ ಈ ಬಜೆಟ್‌ನಲ್ಲಿ ತೋರಿಸಿಲ್ಲ. ಇದಕ್ಕೆ ಹಣವನ್ನು ಕೊಡಬೇಕೆಂದು ಒತ್ತಾಯವನ್ನು ಮಾಡುತ್ತಾ, ಅದರ ಜೊತೆಯಲ್ಲಿ ತಾವು ನೋಡುತ್ತಿರಬಹುದು. ಇಡೀ ನಮ್ಮ ಕ್ಷೇತ್ರದ ಉದ್ದಗಲಕ್ಕೆ ಬರುವಂತಹ ಸುಮಾರು 40 ರಿಂದ 45 ಕಿಲೋಮೀಟರ್ ರಸ್ತೆ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಸರ್ಕಾರಕ್ಕೆ ಬರತಕ್ಕಂಥಾದ್ದು ಕೇವಲ ಎರಡು ನಯಾ ಪೈಸೆ ಮಾತ್ರ. ಆದರೆ ಒಬ್ಬನಿಗೆ ಸಿಗುವುದು ಸಾವಿರ ರೂಪಾಯಿ. ಇದರಲ್ಲಿ ಕೋಟ್ಯಾಂತರ ರೂಪಾಯಿ ಹಣ ಹೋಗುವುದರ ಮುಖಾಂತರ ಕೇವಲ ಕೆಲವೇ ಜನ 40 ಜನ ಇರಬಹುದು ಅಥವಾ ಅವರನ್ನು ನಂಬಿರುವಂತಹ 400 ಜನ ಇರಬಹುದು, ಆ 400 ಜನರನ್ನು ಶ್ರೀಮಂತರನ್ನಾಗಿ ಮಾಡುವುದಕ್ಕೋಸ್ಕರ ನಮ್ಮ ರಾಜ್ಯದ ಉದ್ದಗಲಕ್ಕೆ ಬರುವಂತಹ ರಸ್ತೆಗಳು ಹಾಳಾಗಿ ಹೋಗುತ್ತಿವೆ. ಆ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಏನೂ ಇದರಲ್ಲಿ ತೋರಿಸಿರುವುದಿಲ್ಲ. ಆದುದರಿಂದ ತಾವು ದಯಮಾಡಿ ಈಗಲಾದರೂ ಸಹ ಅದಿರು ತೆಗೆದುಕೊಂಡು ಹೋಗತಕ್ಕಂಥ ಲಾರಿಗಳನ್ನು ಬಂದ್ ಮಾಡಬೇಕು. ಇಲ್ಲದಿದ್ದರೆ ಅವುಗಳನ್ನು ಓಡಾಡುವುದಕ್ಕೆ ಬಿಟ್ಟೆ ಬಿಡುತ್ತೇವೆ ಎನ್ನುವುದಾದರೆ ಕಾನೂನು ಪ್ರಕಾರವಾಗಿ ಹಾಳಾಗತಕ್ಕಂಥ ರಸ್ತೆಯನ್ನು ಸರಿ ಮಾಡುವಂತಹ ಯೋಜನೆಯನ್ನು ಈಗಿನ ಸರ್ಕಾರ ರೂಪಿಸಬೇಕು ಎನ್ನುವುದನ್ನು ಹೇಳುತ್ತೇನೆ. ಅದರ ಜೊತೆಯಲ್ಲಿ ಬಡವರಿಗೆ, ಅವಿದ್ಯಾವಂತರಿಗೆ ಇನ್ಶೂರೆನ್ಸ್ ಮಾಡಿಸುವುದು ಗೊತ್ತಿಲ್ಲ. ಇಲ್ಲವೆಂದರೆ ಏನಾದರೂ ಆದರೆ ಪರಿಹಾರ ಕೊಡಬೇಕು. ಗುಡಿಸಲುಗಳು ಅಥವಾ ಬಣವೆಗಳು ಸುಟ್ಟು ಹೋದಾಗ ಅದಕ್ಕೆ ಪರಿಹಾರವನ್ನು ದೊರಕಿಸಿ ಕೊಡಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಮತ್ತೊಮ್ಮೆ ನಮ್ಮಲ್ಲಿ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಬೇಕಾದರೆ ಕರಗಡ ಯೋಜನೆಗೆ ತಾವು ದಯಮಾಡಿ ಹಣವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಖಂಡ್ರೆಯವರು . . .

ಶ್ರೀ ಎಸ್.ಐ. ಚಿಕ್ಕನಗೌಡ: ಮಾನ್ಯ ಅಧ್ಯಕ್ಷರೆ, ದಯಮಾಡಿ ಈ ಕಡೆ ನೋಡಿ. ಈ ಕಡೆಗೆ ತಾವು ನೋಡಬೇಕು. ನಾವು ಇಲ್ಲಿಗೆ ಬಂದಿದ್ದೇವೆ, ನಮ್ಮನ್ನು ಯಾರು ಕೇಳಬೇಕು? ಸುಮ್ಮನೆ ಕುಳಿತಿದ್ದೇವೆ, ನಮಗೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು. ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ಐ. ಚಿಕ್ಕನಗೌಡ: ನಾವು ರೈತರ ಬಗ್ಗೆ ಏನೂ ಮಾತನಾಡುವುದು ಬೇಡವ? ತಾವು ಹೇಳಿಬಿಡಿ. ಮುಂಜಾನೆ 10 ಗಂಟೆಗೆ ಬಂದು ಸಾಯಂಕಾಲ ಆರು ಗಂಟೆಯವರೆಗೆ ಕುಳಿತುಕೊಳ್ಳುತ್ತೇವೆ. ನಮಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಆಯಿತು, ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ. ಇವರದ್ದು ಆದಮೇಲೆ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಅಧ್ಯಕ್ಷರೆ ಈ ಸರ್ಕಾರದವರು ಒಳ್ಳೆಯ ಬಜೆಟ್ ಕೊಟ್ಟಿದ್ದಾರೆ ಎಂದು ಅವರಿಗೆ ಧನ್ಯವಾದವನ್ನು ಹೇಳುತ್ತೇನೆ, ಮಾನ್ಯ ವೈಜನಾಥ ಪಾಟೀಲ್ ಒಂದು ಸೆಕೆಂಡ್, ನಿಲ್ಲಿ. ನೀವು ಯಾವಾಗಲೂ ಮಾತನಾಡುತ್ತೀರಿ. ಹೀಗೇಕೆ ಮಾಡುತ್ತೀರಿ ನೀವು?

ಅಧ್ಯಕ್ಷರು: ಈ ತರಹ ಎಲ್ಲರೂ ಮಾತನಾಡಿದರೆ ಹೇಗೆ?

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ, ಹೈದರಾಬಾದ್ ಕರ್ನಾಟಕದಲ್ಲಿ ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಎಲ್ಲಾ ರೀತಿಯಲ್ಲಿ ಕಡೆಗಣಿಸುತ್ತಿದ್ದಾರೆ. ಇವತ್ತು ಆಂಧ್ರ, ಮಹಾರಾಷ್ಟ್ರ ಮತ್ತು ಕರ್ನಾಟಕ ಈ ಮೂರು ರಾಜ್ಯಗಳು ಮಾಡುವಂತಹ ಒಂದು ರಸ್ತೆ, ಅದು ಇಂಟರ್‌ಸ್ಟೇಟ್ ರೋಡ್ ಅಂತಹ ರೋಡಿಗೆ ನಾನು ಇವತ್ತು ಎರಡನೇ ಸಲ ಶಾಸಕನಾಗಿ ಬಹಳಷ್ಟು ಕೇಳಿದ್ದೇನೆ ಅದರ ಬಗ್ಗೆ ಹೋರಾಟ ಮಾಡುತ್ತಿದ್ದೇನೆ, ವಿನಂತಿಯನ್ನು ಮಾಡುತ್ತಿದ್ದೇನೆ, ಆದರೆ ಇವತ್ತು ಆ ರೋಡ್ ಏನಿದೆ ಅದಕ್ಕೆ ಆಂಧ್ರದಿಂದ ಬರುವವರೂ ಬಯ್ಯುತ್ತಾರೆ, ಮಹಾರಾಷ್ಟ್ರದಿಂದ ಬರುವವರೂ ಬಯ್ಯುತ್ತಾರೆ, ನಾವು ಎರಡೂ ರಾಜ್ಯಗಳ ಮಧ್ಯೆ ಇದ್ದು ಯಾವುದೇ ಕಾರ್ಯಕ್ರಮಗಳಿಗೆ ಹೋಗುವುದಕ್ಕೆ ಮುಖ ಇಲ್ಲ. ಹಾಗಾಗಿ ನಾನು ವಿನಂತಿ ಮಾಡುವುದೇನೆಂದರೆ ಆ ಒಂದು ಇಂಟರ್‌ಸ್ಟೇಟ್ ರಸ್ತೆ ಬೀದರ್ ನಾಂದೇಡ ವಯಾ, ಹಲಬುರ್ಗ ಮತ್ತು ಕೂಡಲಸಂಗಮ ರಸ್ತೆಗಳಿಗೆ ಹೆಚ್ಚಿನ ಬಜೆಟ್ ಅನ್ನು ಇಡಬೇಕು. ಕೆ-ಶಿಪ್‌ನಲ್ಲಿ ಆ ರೋಡನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಕೊನೆಯಲ್ಲಿ ಗೌಡರು ಮಾತನಾಡಿ.

(ಗೊಂದಲ)

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮಗೆ ಅವಕಾಶ ಕೊಡಬೇಕು. ಅವರದ್ದು ಆದಮೇಲೆ ಕೊಡುತ್ತೇನೆಂದು ತಾವು ಹೇಳಿ.

ಶ್ರೀ ಎಸ್. ಐ. ಚಿಕ್ಕನಗೌಡ (ಕಲಘಟಗಿ): ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ ಗ್ರಾಮೀಣ ಭಾಗದಲ್ಲಿ ಅನೇಕ ವರ್ಷಗಳ ಹಿಂದೆ ರೈತರು ಬೆಳೆದಂತಹ ಬೆಳೆಗಳು ಹೊಲದಲ್ಲಾಗಲಿ ಕಣಜದಲ್ಲಾಗಲಿ ಅಥವಾ ಹಿತ್ತಲಿನಲ್ಲಾಗಲಿ ಇರುವಂತಹ ಬೆಳೆಗೆ ಇವತ್ತಿನವರೆಗೂ ಅನಾಹುತವಾದರೆ 500 ರೂಪಾಯಿ ಮಾತ್ರ ಕೊಡುತ್ತಿದ್ದೀರಿ, ಇವತ್ತು ಲಕ್ಷ ಇರಲಿ, ಎರಡು ಲಕ್ಷ ಇರಲಿ, ಮೂರು ಲಕ್ಷ ಇರಲಿ ಏನು ಆ ಬಣವೆಗಳು ಸುಟ್ಟು ಹೋಗುತ್ತವೆ, ತಿಂಗಳುಗಟ್ಟಲೆ ದುಡಿದಂತಹ ಬೆಳೆಯನ್ನು ಮನೆಗೆ ತಂದಾಗ ಅನಾಹುತವಾಗಿ ಸುಡುತ್ತವೆ, ಅದಕ್ಕೆ ತಾವೇನು ಕೇವಲ 600 ರೂಪಾಯಿ ಪರಿಹಾರ ಕೊಡುತ್ತೀರಿ, ಅದನ್ನು ದಯಮಾಡಿ ಹೆಚ್ಚಿಗೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಮೋಟಾರ್ ಸೈಕಲನ್ನೂ 20 ರಿಂದ 30 ಸಾವಿರ ರೂಪಾಯಿ ಕೊಟ್ಟು ತಂದಾಗ ಅದಕ್ಕೆ ಇನ್ಸೂರೆನ್ಸ್ ಕೊಡುತ್ತೀರಿ. ಆದರೆ ನಾವು ಎತ್ತು, ಎಮ್ಮೆ ಹಾಗೂ ಆಕಳಗಳನ್ನು 60 ಅಥವಾ 70 ಸಾವಿರ ರೂಪಾಯಿ ಕೊಟ್ಟು ತಂದಾಗ, ಅವುಗಳಿಗೆ ಆಕ್ಸಿಡೆಂಟ್ ಆಗಿ ಅವುಗಳು ಕಾಲು ಮುರಿದುಕೊಂಡು ಬಿದ್ದರೆ ಅದಕ್ಕೆ ಯಾವುದೇ ಒಂದು ಪರಿಹಾರ ಇಲ್ಲ. ಆದ್ದರಿಂದ ದಯಮಾಡಿ ಎತ್ತುಗಳಿಗೆ, ಎಮ್ಮೆಗಳಿಗೆ, ಆಕಳುಗಳಿಗೆ, ಅವುಗಳು ಸತ್ತರೆ ಅದಕ್ಕೆ ಪರಿಹಾರವನ್ನು ಕೊಡಬೇಕೆಂದು, ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಕೊನೆಯದಾಗಿ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಮಾತನಾಡುತ್ತಾರೆ. ತಾವು ಕೇಳಿ.

(ಗೊಂದಲ)

ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ರೀತಿಯಾದರೆ ಆಗುವುದಿಲ್ಲ. ಅನೇಕ ಜನ ಸದಸ್ಯರು ಮಾತನಾಡಿರುವವರೂ ಕೇಳುತ್ತೀರಿ, ಮಾತನಾಡದೇ ಇರುವವರು ಕೇಳುತ್ತೀರಿ. ಈಗ 12 ಗಂಟೆಯಾಯಿತು, ಇದು ಮೇಲ್ಮನೆಗೆ ಹೋಗಬೇಕು. ದಯಮಾಡಿ ಅರ್ಥ ಮಾಡಿಕೊಳ್ಳಿ, ಸಾಕಷ್ಟು ಜನರಿಗೆ ಅವಕಾಶವನ್ನು ನಾನು ಕೊಟ್ಟಿದ್ದೇನೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ಎಲ್ಲರೂ ಕುಳಿತುಕೊಳ್ಳಬೇಕು, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರೆ, ತಾವು ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಅಧ್ಯಕ್ಷರೆ, ನಾವು ಬೀದರ್ ಜಿಲ್ಲೆಯವರು ಗೋದಾವರಿ ಬೆಸಿನ್ ಬರುತ್ತೇವೆ. ನಾವು ಕಾವೇರಿ ಬೇಸಿನ್‌ಗೂ ಬರುವುದಿಲ್ಲ, ಕೃಷ್ಣ ಬೇಸಿನ್‌ಗೆ ಬರುವುದಿಲ್ಲ. ನಾವು ಗೋದಾವರಿ ಬೆಸಿನ್‌ಗೆ ಬರುವವರು. ಈ ಗೋದಾವರಿ ಬೆಸಿನ್ ಬಗ್ಗೆ ಬಚಾವತ್ ಅವಾರ್ಡ್ ಪ್ರಕಾರ ನೀರಿನ ಬಗ್ಗೆ ಬಜೆಟ್‌ನಲ್ಲಿ ಏನೂ ಪ್ರಸ್ತಾಪ ಮಾಡಿಲ್ಲ. ನಮ್ಮಲ್ಲಿ ಮೊದಲು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದ್ದಾಗ, ನಾಲ್ಕು ಲಿಫ್ಟ್ ಇರಿಗೇಷನ್‌ಗೆ ಟೆಂಡರ್ ಅನ್ನು ಕರೆದಿದ್ದರು. ಅದರ ಬಗ್ಗೆ ಒಂದು ಮಾತನ್ನೂ ತಾವು ಹೇಳಿಲ್ಲ, ತಾವು ಇದರ ಬಗ್ಗೆ ಮಾಡಲು ತಯಾರು ಇದ್ದಿರಾ? ದಯಮಾಡಿ ತಾವು ಬಜೆಟ್‌ನಲ್ಲಿ ಇನ್‌ಕ್ಲೂಡ್ ಮಾಡುತ್ತೀರಾ, ಎಂಬುದು ಒಂದು ಪ್ರಶ್ನೆ. ಎರಡನೆಯದಾಗಿ ಬಡ್ಡಿ ಮನ್ನಾ ಮಾಡಿದ್ದೀರಿ, ಶೇ.4ರಂತೆ ಮಾಡಿದ್ದೀರಿ, ಸಂತೋಷ. ಈ ಬಡ್ಡಿ ಮನ್ನಾದ ಬಗ್ಗೆ ಯಾವುದೇ ಸರ್ಕಾರ ಇರಲಿ, ಯಾರು ಉದ್ದೇಶಪೂರ್ವವಾಗಿ ಇಟ್ಟುಕೊಂಡು ಕುಳಿತಿದ್ದಾರೋ, ಅವರಿಗೆ ಲಾಭವಾಗಿದೆ. ಯಾರು ರೆಗ್ಯುಲರ್ ಆಗಿ ಕೊಡುತ್ತಾರೋ, ಅವರಿಗೆ ಲಾಭವಾಗಿಲ್ಲ. ಇಲ್ಲಿ ಏನಾಗಿದೆಯೆಂದರೆ "ಕೊಟ್ಟವನು ಕೊಡಂಗಿ, ಕೊಡದವನು ವೀರಭದ್ರ" ಆಗಿದ್ದಾನೆ. ಅದಕ್ಕೆ ತಾವು ಹಿಂದೆ ಇಲ್ಲಿ ವಿರೋಧಪಕ್ಷದ ನಾಯಕರಾಗಿ ಇದ್ದಾಗ ಹೇಳಿದ್ದೀರಿ. ಹಿಂದೆ ಕೂಡ ಅಕ್ಟೋಬರ್‌ನಿಂದ ಮಾರ್ಚ್ ತಿಂಗಳವರೆಗೆ, ಹಿಂದಿನ ಬಡ್ಡಿಯನ್ನು ವಾಪಸ್ಸು ಕೊಡಬೇಕೆಂದು, ಮಾನ್ಯ ಸಿದ್ಧರಾಮಯ್ಯನವರು ಇದ್ದಾಗ ಕೇಳಿದ್ದೀರಿ. ಈಗ ತಾವೇ ಹಣಕಾಸಿನ ಮಂತ್ರಿಯಾಗಿದ್ದೀರಿ, ತಮಗೆ ಆ ಸುದೈವ ಒದಗಿದೆ. ತಾವು ಆ ರೈತರಿಗೆ ವಾಪಸ್ಸು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ? ಮತ್ತೆ ಇದಕ್ಕೆ ಒಂದು ತಿಂಗಳು ಸಮಯವನ್ನು ಕೊಟ್ಟಿದ್ದೀರಿ ಅದು ಇನ್ನೂ ಎರಡು ತಿಂಗಳು ಸಮಯವನ್ನು ಕೊಡುತ್ತೀರಾ? ಮೂರನೆಯದಾಗಿ, ಬೀದರ್‌ನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಾವು ಬಹಳ ಜೋರಾಗಿ ಮಾಡಿದ್ದೇವೆ. ಈಗ ತಾವು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶಿವಮೊಗ್ಗದಲ್ಲಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಬಹಳ ಸಂತೋಷ. ಆದರೆ ನಾವು ಬೀದರ್ ಜಿಲ್ಲೆಯಲ್ಲಿ ಬಹಳ ಜೋರಾಗಿ ಮಾಡಿದ್ದೇವೆ, ಅದಕ್ಕೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಬಂದಿದ್ದರು. ನಾವು ಒಂದು ಒಳ್ಳೆಯ ರೀತಿಯಲ್ಲಿ ಬಹಳ ಜೋರಾಗಿ ಮಾಡಿದ್ದೆವು. ಇಲ್ಲಿ ದುರ್ದೈವ ಏನಾಗಿದೆಯೆಂದರೆ ಸರ್ಕಾರ ಬದಲಾವಣೆಯಾದ ತಕ್ಷಣ ಮಾನ್ಯ ಧರ್ಮಸಿಂಗ್‌ರವರು 50 ಲಕ್ಷ ರೂಪಾಯಿಗಳನ್ನು ಬರೆದಿದ್ದನ್ನು, ಫೈನಾನ್ಸ್ ಡಿಪಾರ್ಟ್‌ಮೆಂಟ್ ಬಂದರೆ, ಈ ಫೈನಾನ್ಸ್ ಡಿಪಾರ್ಟ್‌ಮೆಂಟ್ ಇದನ್ನು ಈ ಕಡೆ ಆ ಕಡೆ ಓಡಾಡಿಸಿ ಸಾಕು ಮಾಡಿ, ಇವತ್ತಿಗೂ ಆ ಸಾಲಗಾರರು

ಮನೆಯ ಮುಂದೆ ಬಂದು ಕುಳಿತ್ತಿದ್ದಾರೆ. ಹಣ ಇನ್ನೂ ಬಿಡುಗಡೆಯಾಗಿಲ್ಲ. ನಿಮ್ಮ ಹತ್ತಿರ ಬಂದು ಕುಳಿತರೂ ನೀವು ರೆಸ್ಪಾನ್ಸ್ ಮಾಡಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಯವರೆ, ನಾನು ತಮ್ಮ ಹತ್ತಿರ ಬಂದೆ, ಕೇಳಿಕೊಂಡೆನಾದರೂ ತಾವು ರೆಸ್ಪಾನ್ಸ್ ಮಾಡಿಲ್ಲ. ಸರ್ಕಾರ ಬದಲಾವಣೆಯಾಗಿದೆ, ಕಾಂಗ್ರೆಸ್ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಇದನ್ನು ಮಾಡುತ್ತಿದ್ದೀರಾ ಅಥವಾ ಹಣವನ್ನು ಬಿಡುಗಡೆ ಮಾಡುತ್ತೀರಾ? ಯಾವುದಾದರೂ ಒಂದು ಖಚಿತವಾಗಿ ಹೇಳಬೇಕು. ಇದು ಕನ್ನಡ ಸಾಹಿತ್ಯ ಸಮ್ಮೇಳನ ಆಗಿರುವಂಥಾದ್ದು, ಯಾವ ಪಕ್ಷದ್ದೂ ಅಲ್ಲ. ಆದುದರಿಂದ ದಯಮಾಡಿ ತಾವು ಈ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರೆಂಬುದನ್ನು ಹೇಳಬೇಕು. ಇಲ್ಲಿ ಅನಾವಶ್ಯಕವಾಗಿ ತೊಂದರೆಯನ್ನು ಕೊಡುವಂಥಾದ್ದು ಸರಿಯಲ್ಲ. ನಾವು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿ ಸಾಕಾಗಿದೆ. ಫೋನ್ ಮಾಡಿ ಸಾಕಾಗಿದೆ, ಫೈಲ್ ತೆಗೆದುಕೊಂಡು ಓಡಾಡಿ ಸಾಕಾಗಿದೆ. ತಾವು ಇದರ ಬಗ್ಗೆ ಖಚಿತವಾಗಿ ದಯಮಾಡಿ ಹೇಳಬೇಕು.

(ಗೊಂದಲ)

ಅಧ್ಯಕ್ಷರು: ಈಗ ಅನೇಕ ಜನ ಸದಸ್ಯರು ಕ್ಲಾರಿಫಿಕೇಶನ್ ಅನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಬಿ. ಎಸ್. ಯಡಿಯೂರಪ್ಪನವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಎಲ್ಲರೂ ನಿಂತುಕೊಂಡಿದ್ದರೆ ಏನು ಕೊಡುವುದು? ಎಲ್ಲರೂ ಕುಳಿತುಕೊಂಡರೆ ಉತ್ತರವನ್ನು ಕೊಡಬಹುದು.

ಅಧ್ಯಕ್ಷರು: ಇಲ್ಲ ಎಲ್ಲರೂ ಕುಳಿತುಕೊಳ್ಳುತ್ತಾರೆ. ದಯಮಾಡಿ ಎಲ್ಲರೂ ಸಹಕರಿಸಬೇಕು, ನಾನು ಸಾಕಷ್ಟು ಜನ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಈಗ 12 ಗಂಟೆಯಾಗಿದೆ, ಮಾನ್ಯ ಉಪ ಮಂತ್ರಿಗಳಿಂದ ಉತ್ತರ ಆಗಬೇಕಾಗಿದೆ. ಇದು ಮೇಲ್ಮನೆಗೆ ಹೋಗಬೇಕಾಗಿದೆ. ತಾವು ಎಲ್ಲರೂ ಅರ್ಥಮಾಡಿಕೊಳ್ಳಿ, ದಯಮಾಡಿ ಎಲ್ಲರೂ ಸಹಕರಿಸಬೇಕು. ನಾನು ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ 12 ಗಂಟೆಯಾಯಿತು, ಮಾನ್ಯ ಮಂತ್ರಿಯವರ ಉತ್ತರ ಆಗಬೇಕು, ಮಾನ್ಯ ಸದಸ್ಯರು ಕೇಳಿರುವಂತಹ ಕ್ಲಾರಿಫಿಕೇಶನ್‌ಗೆ ಉತ್ತರವನ್ನು ಕೊಡಬೇಕು, ನಂತರ ಮೇಲ್ಮನೆಗೆ ಹೋಗಬೇಕು. ಈ ರೀತಿಯಾದರೆ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಯಡಿಯೂರಪ್ಪನವರೇ ತಾವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಅನೇಕ ಜನ ಹಿರಿಯ ಸದಸ್ಯರುಗಳು ಅವರ ಸಲಹೆಗಳನ್ನು ಕೊಟ್ಟಿದ್ದಾರೆ.

(ಈ ಹಂತದಲ್ಲಿ ಮಾನ್ಯ ವೈಜನಾಥ್‌ಪಾಟೀಲ್‌ರವರು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು: ಅವರದ್ದು ಇದ್ದೇ ಇದೆ, ಮಾನ್ಯ ಯಡಿಯೂರಪ್ಪನವರೆ, ತಾವು ಮಾತನಾಡಿ. ಅವರು ವೆಲ್‌ನಲ್ಲಾದರೂ ಕುಳಿತುಕೊಳ್ಳಲಿ, ನೀವು ಮಾತನಾಡಿ. ನೀವು ಉತ್ತರವನ್ನು ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿ ಮತ್ತು ಹಣಕಾಸು ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅನೇಕ ಸದಸ್ಯರುಗಳು ಬಹಳ ಉಪಯುಕ್ತವಾದಂತಹ ಸಲಹೆಗಳನ್ನು ಮತ್ತು ಅಪೇಕ್ಷೆಗಳನ್ನು ವ್ಯಕ್ತಪಡಿಸಿದ್ದಾರೆ, ಮತ್ತೆ ಬಹಳ ಗಂಭೀರವಾದ ವಿಷಯಗಳಲ್ಲಿ ಈ ರೀತಿಯಲ್ಲಿ ಕನ್ಸಕ್ಷನ್ ಸಿಗಬೇಕೆಂಬ ನಿಮ್ಮ ಒತ್ತಾಯ ಇದೆ. ಈ ಸಂಪನ್ಮೂಲಗಳು ಸಹ ಸೀಮಿತವಾಗಿದೆ. ಬೇಡಿಕೆಗಳು ಅಪರಿಮಿತವಾಗಿವೆ. ನಮ್ಮ ಸರ್ಕಾರದ ಆದ್ಯತೆಗಳನ್ನು ಗಮನದಲ್ಲಿಟ್ಟುಕೊಂಡು, ಈ ಆಯವ್ಯಯವನ್ನು ಸಿದ್ಧಪಡಿಸಲಾಗಿದೆ.

(ಮಾನ್ಯ ವೈಜನಾಥ ಪಾಟೀಲ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು: ತಾವು ಈಗ ವೆಲ್‌ಗೆ ಬಂದಿದ್ದೀರಿ, ಇದು ಸರಿಯಲ್ಲ, ಸುಮ್ಮನೆ ನಿಂತುಕೊಳ್ಳಿ, ಗಲಾಟೆ ಮಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ವೈಜನಾಥ ಪಾಟೀಲ್‌ರವರೆ, ತಾವು ತಮ್ಮ ಸ್ಥಳಕ್ಕೆ ವಾಪಸ್ಸು ಬನ್ನಿ. ನಾನು ನೀವು ಏನು ಹೇಳುತ್ತಿರೋ, ಅದನ್ನು ನಾನು ಮಾಡಿಕೊಡುತ್ತೇನೆ, ತಾವು ಬನ್ನಿ. ತಾವು ತಮ್ಮ ಸ್ಥಳಕ್ಕೆ ಬನ್ನಿ, ಹೇಳಿ. ತಾವು ಹಿರಿಯ ಸದಸ್ಯರು ಇದ್ದೀರಿ, ನಾನು ಉತ್ತರ ಕೊಡಬೇಕಾದರೆ ಈ ರೀತಿ ಮಾಡಿದರೆ ಏನು ಮಾಡಬೇಕು?

(ಈ ಹಂತದಲ್ಲಿ ಮಾನ್ಯ ವೈಜನಾಥ ಪಾಟೀಲ್‌ರವರು ತಮ್ಮ ಸ್ಥಳಕ್ಕೆ ತೆರಳಿದರು)

ಅಧ್ಯಕ್ಷರು: ಮಾನ್ಯ ವೈಜನಾಥ ಪಾಟೀಲ್‌ರವರೆ, ತಾವು ಈ ರೀತಿ ಪದೇ ಪದೇ ಮಾತನಾಡಿದರೆ, ನಾನು ಸಹಿಸಿಕೊಳ್ಳುವುದಿಲ್ಲ. ತಾವು ಹಿರಿಯ ಸದಸ್ಯರು, ಯಾವುದಕ್ಕೂ ನೀವು ಮಾನ್ಯ ಮಾಡುವುದಿಲ್ಲ. ಇದು ನಿಮ್ಮ ಘನತೆಗೆ ತಕ್ಕದ್ದಲ್ಲ. ಇಲ್ಲಿ ಬರುವುದು ಏನೋ ಹೇಳುವುದು, ಇದು ಏನು ಇದು? ಇದು ವಿಧಾನಸಭೆನೊ, ಏನು ಇದು? ಎಲ್ಲಾ ನಿಮ್ಮ ಹಾಗೆ ಮಾಡುತ್ತಾ ಹೋದರೆ ನಾವು ಎಲ್ಲಿಗೆ ಹೋಗಿ ತಲುಪುತ್ತೇವೆ? ಎಲ್ಲಕ್ಕೂ ಒಂದು ಮಿತಿ ಬೇಕು. ಏನು Survival of the fittest.. ?

ಶ್ರೀ ವೈಜನಾಥಪಾಟೀಲ್: ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ, ಅದು ಭೂಗಳ್ಳರ ವಿರುದ್ಧ ಒಂದು ಜಂಟಿ ಸದನ ಸಮಿತಿಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಎರಡೂ ಸದನಗಳ ಶಾಸಕರ ಕಮಿಟಿಯನ್ನು ಮಾಡುತ್ತೇವೆಂದು ಹೇಳಿದ್ದಾರೆ, ಅದು ಸ್ವಾಗತಾರ್ಹ. ಅದೇ ರೀತಿಯಲ್ಲಿ ಹಿಂದೆ ಎಸ್ಟಿಮೇಟ್ ಕಮಿಟಿಯೂ ಒಂದು ರಿಪೋರ್ಟ್ ಕೊಟ್ಟಿದೆ. ಯು.ಕೆ.ಪಿ.ಯಲ್ಲಿ ಏನು ಹಗರಣಗಳು ಆಗಿವೆ. ಅದರ ಬಗ್ಗೆ ಸಿ.ಬಿ.ಐ.ನವರಿಂದ ಎನ್‌ಕ್ವೈರಿಯಾಗಬೇಕೆಂದು ರಿಪೋರ್ಟ್ ಕೊಟ್ಟಿದೆ. ಈಗ ಮತ್ತೊಂದು ಕಮಿಟಿಯನ್ನು ಮಾಡಿ, ಅದನ್ನು ಎನ್‌ಕ್ವೈರಿ ಏನು ಮಾಡುವವರು ಇದ್ದೀರಿ, ಅದಕ್ಕೆ ಮೊದಲು ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಿ, ಇದನ್ನು ಸಿ.ಬಿ.ಐ. ತನಿಖೆಗೆ ವಹಿಸುತ್ತೀರಾ, ಇಲ್ಲವಾ?

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ವೈಜನಾಥ ಪಾಟೀಲ್‌ರವರೆ, ತಾವು ಹೇಳಿದ್ದೀರಿ. ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ವೈಜನಾಥ ಪಾಟೀಲ್: ನಾನು ಇದು ಮೊದಲನೆಯ ವಿಷಯವನ್ನು ಹೇಳಿದ್ದೇನೆ. ಇನ್ನು ಎರಡನೆಯದಾಗಿ, 371ರ ಬಗ್ಗೆ ಸರ್ಕಾರದ ನೀತಿ ಏನು? ಇದರ ಬಗ್ಗೆ ತಾವು ತಿಳಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ವೈಜನಾಥಾ ಪಾಟೀಲರೆ, ನಾನು ಕೇಳಿದ್ದೇನೆ, ದಯವಿಟ್ಟು ಕುಳಿತುಕೊಳ್ಳಿ. ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ವೈಜನಾಥ ಪಾಟೀಲ್: ತಮ್ಮ ಬಜೆಟ್‌ನಲ್ಲಿ ಟೂರಿಸಂ ಡೆವಲಪ್‌ಮೆಂಟ್ ಬಗ್ಗೆ ಯಾವುದೇ ಜಿಲ್ಲೆಗಳಿಗೂ ಆದ್ಯತೆಯನ್ನು ಕೊಡುತ್ತಾ ಇಲ್ಲ. ತಾವು ಎರಡು, ಮೂರು ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು, ಕ್ಲಾರಿಫೈ ಮಾಡಬೇಕು. ಮೊದಲನೆಯ ವಿಷಯದ ಬಗ್ಗೆ ಈ ಯು.ಕೆ.ಪಿ. ಹಗರಣದ ಬಗ್ಗೆ ಅಂದಾಜು ಸಮಿತಿಯು ಏನು ವರದಿಯನ್ನು ಕೊಟ್ಟಿದೆ. ಆದರೆ ಬಗ್ಗೆ ತಾವು ಸಿ.ಬಿ.ಐ. ತನಿಖೆಗೆ ವಹಿಸುತ್ತಿರಾ? ಅದರ ಬಗ್ಗೆ ತಾವು ಹೇಳಬೇಕು. ಬೆಂಗಳೂರಿನಲ್ಲಿ ಏನು ಸ್ಕ್ಯಾಂಡಲ್ಸ್ ನಡೆಯುತ್ತವೆ, ಅದಕ್ಕೆ ಎನ್‌ಕ್ವಾಯರಿ ಮಾಡುತ್ತೀರಿ. ನಮ್ಮ ಭಾಗದಲ್ಲಿ ಏನು ಸ್ಕ್ಯಾಂಡಲ್ ನಡೆಯುತ್ತದೆ, ಅದನ್ನು ಹಾಗೆಯೇ ಬಿಡುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ಎಲ್ಲಾ ಹಿರಿಯ ಸದಸ್ಯರುಗಳು ತಮ್ಮ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಂಪನ್ಮೂಲಗಳ ಚೌಕಟ್ಟಿನಲ್ಲಿ ಏನೇನು ಸಾಧ್ಯವಿದೆಯೋ, ಆ ರೀತಿಯಲ್ಲಿ ನಾನು ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ. ಉಳಿದಂಥಾದ್ದನ್ನು ಮುಂದೆ ಯೋಚನೆ ಮಾಡೋಣ. ಮೊದಲನೆಯದಾಗಿ ಎಂ.ಪಿ. ಗಳಿಗೆ ಏನು ಗ್ರಾಂಟ್ ಕೊಟ್ಟು, ಕೆಲವು ಏನು ಗೈಡ್‌ಲೈನ್ಸ್ ಇದೆ, ಅದೇ ಗೈಡ್ ಲೈನ್ಸ್ ಅನ್ನು ಎಂ.ಎಲ್.ಎ. ಗಳಿಗೂ ಅನ್ವಯ ಮಾಡುವ ರೀತಿಯಲ್ಲಿ ಆದೇಶವನ್ನು ಕೊಡುತ್ತಿದ್ದೇವೆ. ಇದರಲ್ಲಿ ಒಂದೇ ಒಂದು ಕಂಡೀಷನ್ ಏನು ಎಂದರೆ 50 ಲಕ್ಷ ರೂಪಾಯಿಗಳನ್ನು ರಸ್ತೆಗಾಗಿ ಖರ್ಚು ಮಾಡಲೇ ಬೇಕು. ಆ ಷರತ್ತಿನೊಂದಿಗೆ ಎಂ.ಪಿ. ಗಳಿಗೆ ಇರುವಂತಹ ಗೈಡ್‌ಲೈನ್ಸ್ ಅನ್ನು ಎಂ.ಎಲ್.ಎ.ಗಳಿಗೂ ವಿಸ್ತರಣೆ ಮಾಡುವಂತಹ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಎರಡನೆಯದಾಗಿ, ಬಯಲುಸೀಮೆಯ ಅಭಿವೃದ್ಧಿಯ ಬಗ್ಗೆ ಬಹಳ ಒತ್ತಾಯವನ್ನು ತಂದಿದ್ದೀರಿ. ನಾನು ಇದರ ಬಗ್ಗೆ ಹೇಳಿದ ಮೇಲೆ ನಿಮಗೆ ಸಮಾಧಾನವಾಗಬಹುದು ಅಂದುಕೊಂಡಿದ್ದೇನೆ. ಇದು 9 ಕೋಟಿ ರೂಪಾಯಿಗಳು ಇರುವಂಥಾದ್ದನ್ನು 20 ಕೋಟಿ ರೂಪಾಯಿಗಳಿಗೆ ಏರಿಕೆ ಮಾಡಿ, ಅದರ ಅಭಿವೃದ್ಧಿ ಕಡೆಗೆ ನಾನು ಗಮನವನ್ನು ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದನ್ನು 50 ಕೋಟಿ ರೂಪಾಯಿಗಳಾದರೂ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇವರು ಹೇಳಿ ಆಯಿತು, ಕೇಳಿ ಆಯಿತು, it is too much. - - - ನಾನು ಹೇಳುವವರೆಗೂ ಕೇಳಿ.

ಅಧ್ಯಕ್ಷರು: ಮಾನ್ಯ ಉಪಮುಖ್ಯಮಂತ್ರಿಯವರು ಹೇಳುತ್ತಿದ್ದಾರೆ. ಮತ್ತೆ ಮಧ್ಯೆ ಮಧ್ಯೆ ಎದ್ದು ನಿಲ್ಲುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದು ಆಗುವುದಿಲ್ಲ. ನಾನು ಪೂರ್ತಿ ಹೇಳುವವರೆಗೂ ಕೇಳಬೇಕಲ್ಲವೇ?

ಶ್ರೀ ಎ.ವಿ. ಉಮಾಪತಿ: ಮಾನ್ಯ ಅಧ್ಯಕ್ಷರೆ, ಬಯಲುಸೀಮೆಯಲ್ಲಿ 70 ಜನ ಶಾಸಕರು ಇದ್ದೇವೆ. ದಯವಿಟ್ಟು ಇದನ್ನು ಜಾಸ್ತಿ ಮಾಡಬೇಕು.

ಅಧ್ಯಕ್ಷರು: ಆಯಿತು, ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಆ ಮೇಲೆ ಗ್ರಾಮ ಪಂಚಾಯತ್‌ಗಳು ಆstreet light ಗೆ ಹಣವನ್ನು ಕಟ್ಟುವುದಕ್ಕಾಗದಿರುವಂಥ ಪರಿಸ್ಥಿತಿ ಇತ್ತು. ಅದಕ್ಕಾಗಿ ಅವರು ಸಕಾಲಕ್ಕೆ ಪಾವತಿ ಮಾಡಿದರೆ ಅವರಿಗೆ 25% subsidy ಯನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆಗಲಾದರೂ ಗ್ರಾಮ ಪಂಚಾಯತ್‌ಗಳು ಸಾಯಂಕಾಲ ಐದು ಗಂಟೆಗೆ switch on ಮಾಡುವುದು, ಬೆಳಗ್ಗೆ 7–00 ಗಂಟೆಯವರೆಗೆ ಉರಿಯುತ್ತಿರುವುದು, ಹೇಳುವವರಿಲ್ಲ ಕೇಳುವವರಿಲ್ಲ. ಇದರಿಂದ ಸ್ವಲ್ಪ ಅವರಿಗೆ ಬಿಗಿ ಬರಬಹುದೇನೋ. Prompt payment ಮಾಡುವಂಥವರಿಗೆ ಅದರಲ್ಲಿ 25% concession ಕೊಡಬೇಕೆನ್ನುವ ಯೋಚನೆಯನ್ನು ಮಾಡಿದ್ದೇವೆ. ಈ ರೈತ ಸಮೂಹಕ್ಕೆ ಮತ್ತು ಶಾಸಕರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಈ co-operatives ನಿಂದ ಪಡೆದಂಥ loans ಬಗ್ಗೆ ಏನು ಅಸಲು ಪಾವತಿ ಮಾಡಬೇಕಾಗಿತ್ತೋ ಅದನ್ನು 31–04–2007ರ ವರೆಗೆ ಏನು ವಿಸ್ತರಣೆ ಮಾಡಿದ್ದೇವೆ, ಅದನ್ನು ಯಾವುದೇ ಕಾರಣಕ್ಕೂ ಒಂದು ದಿನ ಕೂಡ ವಿಸ್ತರಣೆ ಮಾಡುವುದಿಲ್ಲ. ನಾನು ರೈತ ಸಮುದಾಯದಲ್ಲಿ ವಿನಂತಿ ಮಾಡುತ್ತೇನೆ, ಬೆಳೆ ಬಂದಿದೆ ಕೈಯಲ್ಲಿ ನಾಲ್ಕು ಕಾಸು ಇದೆ, ಏನಾದರೂ ಮಾಡಿ ಕೊಟ್ಟರೆ ವಾಪಸ್ಸು 4% ಬಡ್ಡಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ತಾವೂ ಸಹ ಒತ್ತಾಯ ಮಾಡಬೇಡಿ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೇಳಿ ರೈತರಿಂದ ಅಸಲನ್ನು ಕಟ್ಟಿಸುವಂಥ ವ್ಯವಸ್ಥೆ ಮಾಡಿ. ಒಂದು ದಿನ ಕೂಡ ಮುಂದೆ extend ಮಾಡಲಿಕ್ಕೆ ಬರುವುದಿಲ್ಲ. ಸಾಕಷ್ಟು ಅನುಕೂಲವನ್ನು ರೈತರ ಪರ ಮಾಡಿದ್ದೇವೆ. ಅವರು ಕಟ್ಟುತ್ತಾರೆ. ರೈತರ ಬೇಡಿಕೆ ಸಹ ಅದೇ ಇದೆ. ಅದನ್ನೇ ನಾನು ಈ ಸದನದ ಮೂಲಕ ರೈತ ಸಮುದಾಯಕ್ಕೆ ವಿನಂತಿ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ. ಒಂದು major decision ನಾವು ತೆಗೆದುಕೊಂಡಿರುವಂಥದ್ದು, ಪ್ರಕೃತಿ ವಿಕೋಪದಿಂದ ಅದು ಬಣವೆ ಸುಡುತ್ತದೆ, ಆನೆ ತುಳಿತದಿಂದ ಯಾರೋ ಸಾಯುತ್ತಾನೆ, ಬೇಕಾದಷ್ಟು ಜನರ ಆಹುತಿಗಳು ಆಗಿವೆ, ಅದಕ್ಕೆ ಭಿಕ್ಷೆ ತರಹ ಕೊಡುತ್ತಿದ್ದೇವೆ. ಅದಕ್ಕಾಗಿ ನಾವೇನು ಪರಿಹಾರ ಕೊಡುತ್ತಿದ್ದೇವೆ ಅದನ್ನು double ಮಾಡುತ್ತಿದ್ದೇವೆ. ಆ ರೀತಿ ಒಂದು ತೀರ್ಮಾನವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಈ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಈಗಾಗಲೇ ವಿಶ್ವಬ್ಯಾಂಕ್ ಸಹಾಯದಿಂದ ಈ ಯೋಜನೆ ಕಾರ್ಯಗತವಾಗುತ್ತಿದೆ. ಬಹುಶಃ ಕೋಲಾರ ಜಿಲ್ಲೆ ಒಂದೇ ಕಡೆ ಒಂದು ಸಾವಿರ ಕೆರೆಗಳ ಅಭಿವೃದ್ಧಿ ಬಗ್ಗೆ ಯೋಜನೆ ಮಾಡುತ್ತಿದ್ದೇವೆ. ಮುಂದೆ ಬರುವ ದಿವಸಗಳಲ್ಲಿ ಸುಮಾರು ಇನ್ನೂ ಎರಡು ಸಾವಿರ ಕೆರೆಗಳನ್ನು ರಾಜ್ಯದಲ್ಲಿ ಅಭಿವೃದ್ಧಿಪಡಿಸುವ ಕಡೆಗೆ ವಿಶೇಷ ಕ್ರಮವನ್ನು ನಾವು ತೆಗೆದುಕೊಳ್ಳುವವರಿದ್ದೇವೆ, ಅದನ್ನು ವಿಸ್ತರಣೆ ಮಾಡುವ ಕಡೆಗೆ ಚಿಂತನೆ ನಡೆದಿದೆ. ಈ naxalite ಹಾವಳಿ ಇರುವ ಕಡೆ ಅಲ್ಲಿ ಅಭಿವೃದ್ಧಿಗೋಸ್ಕರ 15 ಕೋಟಿ ರೂಪಾಯಿಗಳನ್ನು ನಾನು ಈಗಾಗಲೇ ತೆಗೆದಿಟ್ಟಿದ್ದೇನೆ. ಅದರ ಉಪಯೋಗವಾಗುವ ರೀತಿಯಲ್ಲಿ ತತಕ್ಷಣ ಸರ್ಕಾರ ಆಜ್ಞೆ ಹೊರಡಿಸಿ ಆ ಕಡೆಗೆ ನಾನು ವಿಶೇಷವಾದಂಥ ಗಮನವನ್ನು ಕೊಡುವವನಿದ್ದೇನೆ. ಈ ಖಾಸಗಿ ಅನುದಾನಿತ ಹಿಂದುಳಿದ ವರ್ಗದ ಮಕ್ಕಳ fees ಇದರ ಬಗ್ಗೆ ಕಟ್ಟಿಲ್ಲ, ದೊಡ್ಡ ಪ್ರಮಾಣದ refund ಆಗಬೇಕು ಎಂದು ಮಾನ್ಯ ಜ್ಞಾನೇಂದ್ರರವರು ತಮ್ಮ ಕಳಕಳಿಯ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತವಾದ ನಿರ್ಧಾರವನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ. ಈಗಾಗಲೇ ತೆರಿಗೆ ರಿಯಾಯಿತಿ ಬಗ್ಗೆ ಹೇಳಿದ್ದೇನೆ. ಅರಶಿಣ ಕೊಂಬಿಗೆ 4% ತೆರಿಗೆ ಇದ್ದುದ್ದನ್ನು ತೆಗೆದುಹಾಕುತ್ತಿದ್ದೇವೆ. ಬೀಡಿಗೆ 1%

tax ಇದ್ದುದ್ದನ್ನು ತೆಗೆದುಹಾಕುತ್ತಿದ್ದೇವೆ. ತೆಂಗು ಉತ್ಪಾದನೆಗೆ 4% ಇದ್ದುದ್ದನ್ನು ತೆಗೆದುಹಾಕುತ್ತಿದ್ದೇವೆ. Plastic ಚಪ್ಪಲಿಗೆ 4% ಇದ್ದು ಅದಕ್ಕೆ ರಿಯಾಯಿತಿ ಕೊಡುತ್ತಿದ್ದೇವೆ. ಗೋಡಂಬಿಗೆ 12.5% ತೆರಿಗೆ ಇದ್ದುದ್ದನ್ನು 4% ಗೆ ಇಳಿಸುತ್ತಿದ್ದೇವೆ. ಜೇನು, ಇದನ್ನು ಸಾಮಾನ್ಯ ಜನ ಉಪಯೋಗಿಸುವಂಥದ್ದಾಗಿದ್ದು ಅದಕ್ಕೆ 4% ತೆರಿಗೆ ಇದ್ದುದ್ದನ್ನು ತೆಗೆದುಹಾಕುತ್ತಿದ್ದೇವೆ. ಜೇನು ಸಾಗಾಣಿಕೆ ಉಪಕರಣಗಳ ಮೇಲೆ 12.5% ಇದ್ದುದ್ದನ್ನು 4% ಗೆ ಇಳಿಸುತ್ತಿದ್ದೇವೆ. ನಮ್ಮ ಮಾನ್ಯ ಎಂ.ಪಿ. ಪ್ರಕಾಶ್‌ರವರು ಸೇರಿದಂತೆ ಎಲ್ಲರಿಗೂ ವಿಶ್ವಕನ್ನಡ ಸಮ್ಮೇಳನ ಎಲ್ಲಿ ಆಗಬೇಕು ಎನ್ನುವುದರ ಬಗ್ಗೆ ಎಲ್ಲರ ಜಿಜ್ಞಾಸೆ ಇದೆ. ಅದನ್ನು ನಾವೆಲ್ಲಾ ಕುಳಿತುಕೊಂಡು ಒಟ್ಟಾಗಿ ಏನು ಮಾಡಬೇಕೆನ್ನುವಂಥ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಬಸವಕಲ್ಯಾಣ ಅಭಿವೃದ್ಧಿಗೆ ಈ ವರ್ಷ ನಾವೇನು 20 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ, ಆ ಬಸವಣ್ಣನವರ ಜನ್ಮಭೂಮಿ ಇಂಗಳೇಶ್ವರ ಗ್ರಾಮ ಅದೂ ಸಹಿತ ಬಸವನ ಬಾಗೇವಾಡಿಯಲ್ಲಿ ಅಭಿವೃದ್ಧಿಪಡಿಸುವ ಹೊಣೆಗಾರಿಕೆಯನ್ನು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಬೇಕೆಂದು ಇಂಗಳೇಶ್ವರ ಅಭಿವೃದ್ಧಿ ಬಗ್ಗೆಯೂ ನಾವು ಗಮನವನ್ನು ಕೊಡುತ್ತಿದ್ದೇವೆ. ನೇಕಾರರ ಪ್ಯಾಕೇಜ್‌ನಲ್ಲಿ urban co-operative bank ನಿಂದ ತೆಗೆದುಕೊಂಡ ಸಾಲದ ಬಗ್ಗೆ ನಾವು ಬಡ್ಡಿ ಮನ್ನಾ ಸಂಪೂರ್ಣ ಮಾಡುತ್ತಿದ್ದೇವೆ, ರೈತನಿಗೆ ಕೊಡುವ ರೀತಿಯಲ್ಲಿ ಇನ್ನು ಮುಂದೆ ನೇಕಾರರಿಗೆ, ಮೀನುಗಾರರಿಗೆ 4 ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಕೊಡುವಂಥ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಈ ಮಂಗಳೂರು ``vented dam'' ಬಗ್ಗೆ 30 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಈಗಾಗಲೇ ಭರವಸೆಯನ್ನು ಕೊಟ್ಟಿದ್ದೇವೆ. ಆ ಕಾರ್ಯಕ್ರಮವನ್ನು ರೂಪಿಸುತ್ತೇವೆ. Lawyer ಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಅವರು ಮೊದಲನೇ ವರ್ಷ Practice ಮಾಡುವುದಕ್ಕೆ ಅನುಕೂಲವಾಗಬೇಕೆನ್ನುವುದು ಇದೆ. ಅದಕ್ಕೆ ನಾವು ಬದ್ಧರಾಗಿದ್ದೇವೆ. ಆ ಕಾರ್ಯಕ್ರಮವನ್ನು ನಾವು ಮಾಡುವವರಿದ್ದೇವೆ. ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡುವಂಥದ್ದು ಮುಂದೆ ಬರುವಂಥ ದಿವಸಗಳಲ್ಲಿ ಕಾದು ನೋಡಿ. ಇರತಕ್ಕಂಥ ಸಂಪನ್ಮೂಲಗಳಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ನಾನು ಮಾಡಿದ್ದೇನೆ. ಮುಂದೆ ಬರುವ ದಿವಸಗಳಲ್ಲಿ...

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೋಲ್‌ಸೇಲ್‌ನದ್ದು close ಮಾಡಬಾರದೆಂದು ನಾವು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೋಡೋಣ, ಅದನ್ನು ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ, ನೀವೆಲ್ಲಾ ಕೇಳಿದ ಎಲ್ಲದಕ್ಕೂ ಸಹ clarifications ಹೇಳುವುದಕ್ಕಾಗುವುದಿಲ್ಲ. ಈಗ ಇದನ್ನು ಇಲ್ಲಿಗೆ ಮುಗಿಸೋಣ. ನಂತರ ಇದು ಆ ಮನೆಗೆ ಹೋಗಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಗಟು ವ್ಯಾಪಾರವನ್ನೂ ನಿಲ್ಲಿಸಿ. ಅಥವಾ ಬದಲಾವಣೆ ಮಾಡಿ. ಅದು ಹೇಗೆ ಇತ್ತೋ ಹಾಗೆಯೇ ಇರಲಿ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂಥ ಯಾವ ಪ್ರಶ್ನೆಗಳಿಗೂ ಸರ್ಕಾರದಿಂದ ಉತ್ತರ ಬಂದಿಲ್ಲ. ಮೊದಲನೆಯದಾಗಿ, ಪ್ರಶಸ್ತಿ ಬಗ್ಗೆ ಹೇಳಲಿಲ್ಲ. ಬೆಳಗಾಂ ಬಗ್ಗೆ ಹೇಳಿಲಿಲ್ಲ. ಚಾಮರಾಜನಗರ ಸೇರಿದಂತೆ 10 ಜಿಲ್ಲೆಗಳ ಬಗ್ಗೆ ಹೇಳಲಿಲ್ಲ. ಇದರಿಂದ ನನಗೆ ಅವರ ಉತ್ತರದ ಬಗ್ಗೆ ತೃಪ್ತಿಯಾಗಲಿಲ್ಲ. ಅದಕ್ಕೋಸ್ಕರ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಗೊಂದಲ)

(ವಾಟಾಳ್ ಪಕ್ಷದ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ತಾವೆಲ್ಲಾ ಗಲಾಟೆ ಮಾಡುವುದನ್ನು ನಿಲ್ಲಿಸಿ.

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಕೆಲವು ಸ್ಪಷ್ಟೀಕರಣಗಳ ಬಗ್ಗೆ ಹೇಳಿದ್ದಾರೆ ಈಗ ಸದನದಲ್ಲಿರತಕ್ಕಂಥ ಎಲ್ಲಾ ನಾಯಕರುಗಳೂ ಕೂಡ ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವು ಕೇಳಲಿಲ್ಲ. ಈಗಾಗಲೇ ನಿಮ್ಮ ಜನತಾದಳ ಶಾಸಕಾಂಗ ಪಕ್ಷದ ಅಧ್ಯಕ್ಷರಾದ ಶ್ರೀಮಾನ್ ಪ್ರಕಾಶ್‌ರವರು ಕೇಳಿದ್ದಾರೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಹಂಪಿಯಲ್ಲಿ ವಿಶ್ವ ಕನ್ನಡ ಸಮ್ಮೇಳನ ಮಾಡಬೇಕೆಂದು ನಿರ್ಧರಿಸಲಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು ಸ್ವಾಮಿ. ಹಂಪಿಯಲ್ಲಿಯೇ ಮಾಡುತ್ತೇವೆ.

ಶ್ರೀ ಎನ್. ಧರ್ಮಸಿಂಗ್ : ಮತ್ತೆ ಏಕೆ ಶಿವಮೊಗ್ಗದ ಹೆಸರನ್ನು ಅದರಲ್ಲಿ ಬರೆದಿರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು. ಹಂಪೆಯಲ್ಲಿಯೇ ಮಾಡೋಣ. O.K.? ಸಂತೋಷವೇ?

ಶ್ರೀ ಎನ್. ಧರ್ಮಸಿಂಗ್ : ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಶಿವಮೊಗ್ಗದಲ್ಲಿಯೇ ಮಾಡಬೇಕೆಂದು ಪೊಲಿಟಿಕಲಿ ಏನೂ ಇಲ್ಲ. ನಾವು ಕುಳಿತುಕೊಂಡು ಚರ್ಚೆ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ನಿಮ್ಮ ಜೊತೆ ಸಮಾಲೋಚನೆ ಮಾಡೋಣ. ಅಲ್ಲಿ ಏನು ತೀರ್ಮಾನವಾಗುತ್ತದೆ ಅದರಂತೆ ಮಾಡೋಣ.

ಶ್ರೀ ಎನ್. ಧರ್ಮಸಿಂಗ್ : ಚರ್ಚೆಯಲ್ಲ, ಬಜೆಟ್‌ನಲ್ಲಿಯೇ ತಾವು ಹೇಳಬೇಕು. ...

ಶ್ರೀ ಬಿ.ಎಸ್. ಯಡಿಯೂರಪ್ಪ : ಹಂಪಿ ಆಗಬಹುದು, ಬೆಳಗಾಂ ಆಗಬಹುದು, ಶಿವಮೊಗ್ಗ ಆಗಬಹುದು, ಎಲ್ಲರೂ ಕುಳಿತುಕೊಂಡು ....

ಶ್ರೀ ಎನ್. ಧರ್ಮಸಿಂಗ್: ನೀವು ಹಾಗೆ ಹೇಳಬೇಡಿ. ಈಗ ಮಾನ್ಯ ಕುಮಾರಸ್ವಾಮಿಯವರು, ಯಡಿಯೂರಪ್ಪನವರು ಎರಡೂ ಬಣಗಳು ಸೇರಿ ಬಹಳಷ್ಟು ಅಭಿವೃದ್ಧಿ ಕೆಲಸ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಈಗ ಮೊಟ್ಟಮೊದಲನೆಯದಾಗಿ, ಮಾನ್ಯ

ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡತಕ್ಕಂಥದ್ದರಲ್ಲಿ ಕೇವಲ ಸ್ಪಷ್ಟೀಕರಣ ನಾವು ಮಾತ್ರ ಕೇಳಲಿಲ್ಲ. ಇಡೀ ಸದನದ ಎಲ್ಲಾ ಸದಸ್ಯರು, ತಮ್ಮ ಪಕ್ಷದವರೂ ಕೂಡ ಕೇಳಿದ್ದಾರೆ. ಆದರೆ, they are not convinced. ಅದಕ್ಕೆ ತಮಗೆ ರೈತರ ಬಗ್ಗೆ ಕಾಳಜಿ ಇಲ್ಲ, ಯಾವ ಸ್ಪಷ್ಟವಾದ ನಿಲುವು ಇಲ್ಲ, ವಿಶೇಷವಾಗಿ ಹಿಂದುಳಿದ ಪ್ರದೇಶಕ್ಕೆ ಕೇವಲ ನಂಜುಂಡಪ್ಪನವರು ವರದಿ ಮಾಡತಕ್ಕಂಥ ಕಾಲದಲ್ಲಿ ಬಯಲು ಸೀಮೆಯವರೂ ಕೂಡ ಕೇಳುತ್ತಿದ್ದಾರೆ. ಅವರು 50 ಕೋಟಿ ರೂಪಾಯಿಗಳನ್ನು ಕೇಳಿದ್ದರು ನೀವು 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಇವತ್ತಿನ ದಿವಸ ಈ ಸರ್ಕಾರಕ್ಕೆ ಸ್ಪಷ್ಟವಾದ ನಿಲುವು ಇಲ್ಲ. ಇದು ಒಂದು ಕೇವಲ slogan ಗಳು ಆಗಿವೆ, ಏಕೋ ಚುನಾವಣೆ ಬಹಳ ಸಮೀಪದಲ್ಲಿಯೇ ಬರತಕ್ಕಂಥದ್ದು ಇದೆ. ಎಂದು ಕಾಣುತ್ತಿದೆ ಅದಕ್ಕೆ 'ಭಾಗ್ಯದ ಲಕ್ಷ್ಮಿ' ಹೆಣ್ಣುಮಕ್ಕಳಿಗೆ ರಿಯಾಯಿತಿ ಕೊಡತಕ್ಕಂಥಾದ್ದು, ಸಾಕಷ್ಟು ಮಾತುಗಳನ್ನು ಹೇಳಿದ್ದೀರಿ. ಯಾವ ಮಾತುಗಳನ್ನು ಪ್ರಸ್ತಾಪ ಮಾಡಿದ್ದೀರಿ, ಅದರಲ್ಲಿ ಸರಿಯಾದ ರೀತಿ ತಮ್ಮ ಸ್ಪಷ್ಟವಾದ ನಿಲುವು ಇರಬೇಕು. ಆದರೆ ನಿಮಗೆ ಕಾಳಜಿ ಇಲ್ಲ. ಅದಕ್ಕೆ ನಾವು ವಿರೋಧ ಪಕ್ಷದ ಸ್ಥಾನದಿಂದ ಇವತ್ತಿನ ದಿವಸ ನಮ್ಮೆಲ್ಲಾ ಸ್ನೇಹಿತರೊಡನೆ ತಮ್ಮ ಒಂದು ನೀತಿ ಏನಿದೆ, ತಮ್ಮ ಬಜೆಟ್ ಏನಿದೆ ಇದಕ್ಕೆ ವಿರೋಧ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

(ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಕೋಳಿ ಮತ್ತು ಇಟ್ಟಿಗೆಯದ್ದು subsidy ಏನಾದರೂ consider ಮಾಡಿ ಎಂದು ನಾವು ಒಂದೇ ಸಮ ಕೇಳುತ್ತಿದ್ದೇವೆ. ಅದು ಅವರ ತಲೆಗೆ ಹೋಗುತ್ತಲೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದಕ್ಕೆ ಪರಿಹಾರವನ್ನು ಹುಡುಕುವಂಥ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೋಳಿ ಎಲ್ಲಾ ನಾಶವಾಗಿದೆ. 400 ಕೋಟಿ ರೂಪಾಯಿ...

ಶ್ರೀ ಬಿ. ಎಸ್. ಯಡಿಯೂರಪ್ಪ : ಆ ಬಗ್ಗೆ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಕುಳಿತು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಿಮ್ಮನ್ನೂ ಕರೆದು ಮಾತನಾಡಿ ಅದಕ್ಕೇನಾದರೂ ಪರಿಹಾರವನ್ನು ಹುಡುಕುವಂಥ ಪ್ರಾಮಾಣಿಕ ಪ್ರಯತ್ನವನ್ನೂ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : .... ಇವತ್ತು ಕೊಬ್ಬರಿ industry ನಾಶವಾಗಿದೆ ಸರ್. ಒಂದು ಗಿಟುಕು ಸಹ ಆಚೆಗೆ ಹೋಗುತ್ತಿಲ್ಲ ಸರ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಬಗ್ಗೆ ಮಾತನಾಡುತ್ತೇನೆ. ನಾವು ಕುಳಿತುಕೊಂಡು ಮಾತನಾಡುತ್ತೇವೆ. ಪರಿಶೀಲನೆ ಮಾಡೋಣ.

ಅಧ್ಯಕ್ಷರು : ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, "ದಿನಾಂಕ 31-03-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28, ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ

ವೆಚ್ಚವನ್ನು ಭರಿಸಲು ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಸಭೆ ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾಪ ಮಂಡಿಸಲ್ಪಟ್ಟಿತು.

(ಬೇಡಿಕೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 1- ಕೃಷಿ ಮತ್ತು ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 36,546.66 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 295.37 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 2- ಪಶುಸಂಗೋಪನೆ ಮತ್ತು ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,946.64 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 376.20 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 3- ಆರ್ಥಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,00,961.22 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 452.81 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 4-ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,277.67 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 5-ಒಳಾಡಳಿತ ಮತ್ತು ಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 49,837.48 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,431.01 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 6 – ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯಗಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 23.27 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,479.71 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 366.30 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 7-ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,370.91 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 24,120.69 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 8- ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,225.43 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 26.65 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 9- ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,904.70 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 409.11 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 10- ಸಮಾಜ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,492.29 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5859.46 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 11- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 27,737.64 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 12-ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4228.18 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 133.98 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 13- ಆಹಾರ ಮತ್ತು ನಾಗರೀಕ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 24811.17 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 267.30ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 14-ಕಂದಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34726.88 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 237.93 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 15– ಮಾಹಿತಿ ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 433.95 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 551.10 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 16– ವಸತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6435.67 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7931.55 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 17– ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,78,032.60 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1845.36 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 18– ವಾಣಿಜ್ಯ ಮತ್ತು ಕೈಗಾರಿಕೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,191.87 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,348.61 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 19 – ನಗರಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,10,552.94 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,368.37 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 20 – ಲೋಕೋಪಯೋಗಿ ಕಾಮಗಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 44,091.21 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 52,405.32 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 21–ಜಲಸಂಪನ್ಮೂಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,881.97 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,24,539.10 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 22– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,721.88 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,888.30 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 23 – ಕಾರ್ಮಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,755.28 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 198.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 24 – ಇಂಧನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇಂಧನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 80,556.46 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 545.16 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 25 – ಕನ್ನಡ ಮತ್ತು ಸಂಸ್ಕೃತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,808.98 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 70.62 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 26 – ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,068.10 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 27 – ಕಾನೂನು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5714.31 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 28– ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,770.99 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ:

"ದಿನಾಂಕ 31–03–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1 ರಿಂದ 28, ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಸಭೆ ಮಂಜೂರು ಮಾಡುವುದು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 1– ಕೃಷಿ ಮತ್ತು ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 36,546.66 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 295.37 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 2– ಪಶುಸಂಗೋಪನೆ ಮತ್ತು ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,946.64 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 376.20 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3 – ಆರ್ಥಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,00,961.22 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 452.81 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 4 – ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,277.67 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 5-- ಒಳಾಡಳಿತ ಮತ್ತು ಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 49,837.48 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,431.01 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 6 –ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯಗಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 23.27 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,479.71 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 7 – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,370.91 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 24,120.69 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 8 – ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,225.43 ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 26.65 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 9 – ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,904.70 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 409.11 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 10 - ಸಮಾಜ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,492.29 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5859.46 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 11- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 27,737.64 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 366.30 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12 -ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4228.18 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 133.98 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 13-ಆಹಾರ ಮತ್ತು ನಾಗರೀಕ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 24811.17 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 267.30 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14 - ಕಂದಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34726.88 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 237.93 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 15 – ಮಾಹಿತಿ ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 433.95 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 551.10 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 16 – ವಸತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6435.67 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7931.55 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 17 – ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,78,032.60 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1845.36 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 18 – ವಾಣಿಜ್ಯ ಮತ್ತು ಕೈಗಾರಿಕೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,191.87 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,348.61 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 19 – ನಗರಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,10,552.94 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,368.37 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 20 – ಲೋಕೋಪಯೋಗಿ ಕಾಮಗಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 44,091.21 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 52,405.32 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 21 – ಜಲಸಂಪನ್ಮೂಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,881.97 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,24,539.10 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 22– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,721.88 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,888.30 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 23 – ಕಾರ್ಮಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,755.28 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 198.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 24 – ಇಂಧನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇಂಧನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 80,556.46 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 545.16 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 25 – ಕನ್ನಡ ಮತ್ತು ಸಂಸ್ಕೃತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,808.98 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 70.62 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 26 – ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,068.10 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 27 – ಕಾನೂನು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5714,31 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,770.99 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

2. ಶಾಸನ ರಚನೆ

(i) ವಿಧೇಯಕಗಳನ್ನು ಮಂಡಿಸುವುದು

(ಅ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2006

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ."